

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


46

ಮಾರ್ಚ್ 4 ಬುಧವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 313 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com


₹4



ಮೈಸೂರಲ್ಲೂ ರಕ್ತ ಚಂದ್ರ ಗೋಚರ; ನಭೋಮಂಡಲದ ವಿಸ್ಮಯಕ್ಕೆ ನಿಬ್ಬೆರಗಾದ ಜನ

ಮೈಸೂರು, ಮಾ.3(ವಿವಿಹೆಚ್)– ನಭೋಮಂಡಲದ ವಿಸ್ಮಯ ಚಂದ್ರಗ್ರಹಣ ಮೈಸೂರಲ್ಲೂ ಗೋಚರವಾಯಿತು. ಅಪರೂಪದ ಈ 'ರಕ್ತ ಚಂದ್ರ' ಗ್ರಹಣವನ್ನು ವೀಕ್ಷಿಸಿದ ಮೈಸೂರಿಗರು ನಿಬ್ಬೆರಗಾದರು.

ಈ ವರ್ಷದ ಮೊದಲ ಪೂರ್ಣ ಚಂದ್ರ ಗ್ರಹಣ ಇದಾಗಿದೆ. ಸೂರ್ಯ ಮತ್ತು ಚಂದ್ರರ ನಡುವೆ ಭೂಮಿ ಬಂದಾಗ ಈ ವಿಸ್ಮಯ ಘಟಿಸುತ್ತದೆ. ಸೂರ್ಯನ ಬೆಳಕು ಭೂಮಿಯ ವಾತಾವರಣದ ಮೂಲಕ ವಕ್ರೀಭವನಕ್ಕೆ ಒಳಪಟ್ಟು, ಕೆಂಪು ಬಣ್ಣವನ್ನು ಮಾತ್ರ ಸೂಸುತ್ತದೆ. ಈ ಬಣ್ಣ ಚಂದ್ರನ ಮೇಲ್ಮೈ ಮೇಲೆ ಹಾದುಗೋಗುವ ಮೂಲಕ ಚಂದ್ರ ಕೆಂಪಾಗಿ ಪರಿಣಮಿಸುತ್ತದೆ. ಈ ವಿಸ್ಮಯವೆ 'ರಕ್ತ ಚಂದ್ರ' ಗ್ರಹಣ. ಪ್ರಪಂಚದಾದ್ಯಂತ ಈ ಚಂದ್ರಗ್ರಹಣ ಮಧ್ಯಾಹ್ನ 3.20ರಿಂದ ಸಂಜೆ 6.47ರವರೆಗೆ ವಿವಿಧ ಭಾಗಗಳಲ್ಲಿ ನಾನಾ ಶೈಲಿಯಲ್ಲಿ ಕಾಣಿಸಿಕೊಂಡಿತು. ಆದರೆ ಭಾರತದಲ್ಲಿ ಮಧ್ಯಾಹ್ನದ ವೇಳೆ ಹೆಚ್ಚು ಬಿಸಿಲಿನ ಪ್ರಖರತೆ ಕಾರಣ ಗ್ರಹಣ ಗೋಚರಿಸಲಿಲ್ಲ. ದೇಶದಲ್ಲಿ ಚಂದ್ರನ ಉದಯ ಕಾಲ ಸಂಜೆ 6.20. ಹಾಗಾಗಿ ಇಂದು ಸಂಜೆ 6.22ಕ್ಕೆ ಗ್ರಹಣ ಗೋಚರಿಸಲಿದೆ ಎಂದು ಹೇಳಲಾಗಿತ್ತು. ಅದರಂತೆ ಪೂರ್ವ ಭಾರತ, ಇತರೆ ಭಾಗಗಳಲ್ಲಿ ಚಂದ್ರ ಸ್ವಲ್ಪ ಬೇಗ ಕಾಣಿಸಿಕೊಂಡಿತು. ಆದರೆ ಕರ್ನಾಟಕದಲ್ಲಿ, ಅದರಲ್ಲೂ ಹಳೇ ಮೈಸೂರು ಭಾಗದಲ್ಲಿ ಚಂದ್ರನ ಉದಯ ಕಾಲ ಸಂಜೆ 6.45ರ ನಂತರ ■ 6ನೇ ಪುಟಕ್ಕೆ


ಮೈಸೂರಿನಲ್ಲಿ ಗಾಢ ಕೆಂಪು ಬಣ್ಣದಲ್ಲಿ ಗೋಚರಿಸಿದ ಪೂರ್ಣ ಚಂದ್ರಗ್ರಹಣ

ಅಶಾಂತಿ, ಯುದ್ಧ ಉಲ್ಬಣ ಸಂಭವ



ಮೈಸೂರು, ಮಾ.3(ಪಿಎಂ)– ಕೇತುಗ್ರಸ್ತ ಚಂದ್ರಗ್ರಹಣ ಸಂಭವಿಸಿರುವ ಕಾರಣ ಜನ ಸಮುದಾಯದಲ್ಲಿ ಅಶಾಂತಿಯ ವಾತಾವರಣ ಏರ್ಪಡಲಿದ್ದು, ದೇಶ–ದೇಶಗಳ ನಡುವೆ ಯುದ್ಧ ಉಲ್ಬಣಗೊಳಬಹುದು. ಶಿವಾರಾಧನೆ ಮತ್ತು ದುರ್ಗಾರಾಧನೆ ಯಿಂದ ತಕ್ಕಮಟ್ಟಿಗೆ ಗ್ರಹಣದ ದುಷ್ಪರಿಣಾಮಗಳಿಂದ ಪಾರಾಗ ಬಹುದು ಎಂದು ಜ್ಯೋತಿಷ ವಿದ್ವಾನ್ ವಿ.ಕೇಶವಮೂರ್ತಿ ಹೇಳಿದರು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಚಂದ್ರಗ್ರಹಣದ ಪ್ರಭಾವ ಮೂರು ತಿಂಗಳ ಕಾಲ ಇರಲಿದ್ದು, ಇದು ಘಟಿಸಿದ ಬೆನ್ನಲೆ ಯುದ್ಧಗಳು ಹೆಚ್ಚಾಗುವ ಸಂಭವವಿದೆ. ಶ್ರಾವಣ ಹಾಗೂ ಆಷಾಢ ಮಾಸದಲ್ಲಿ ಪ್ರವಾಹಗಳು ■ 6ನೇ ಪುಟಕ್ಕೆ

22 ಕ್ಯಾರೆಟ್ ಚಿನ್ನದ ದರ
@ ತೊಳಸಿ
ತೊಳಸಿ ಜ್ಯೂಯೆಲ್ಸ್
THOLASI JEWELS
₹ 15,580/-
ಆಶೋಕ ರಸ್ತೆ, ಮೈಸೂರು. ಫೋ: 0821-2521926,
ದೇವಸ್ಥಾನದ ರಸ್ತೆ, ವಿ.ವಿ.ಮೊಹಲ್ಲಾ, ಮೈಸೂರು.
ಫೋ: 0821-2411926
ಎಂಜಿಎಸ್ ರಸ್ತೆ, ಬಸ್‌ಸ್ಟ್ಯಾಂಡ್ ಎದುರು,
ನಂಜನಗೂಡು. ಫೋ: 08221-200926

HIGHRANGE Coffee
WANTED
ACCOUNTANT
(FEMALE)
FRESHER OR EXPERIENCE WITH TALLY AND EXCEL,
QUALIFICATION:B.Com, M.Com, MBA.
LOCATION: HIGH RANGE COFFEE CURING Pvt. Ltd., ABBUR VILLAGE, PERIYAPATNA TALUK, MYSORE DISTRICT- 571107
7994303555
7994308555

ಬೇಕಾಗಿದ್ದಾರೆ
ಮೈಸೂರಿನ ಖಾಸಗಿ ಕಂಪನಿಗೆ,
Fortuner ಮತ್ತು Automatic
ಕಾರು ಓಡಿಸುವ ಡ್ರೈವರ್‌ಗಳು ಬೇಕಾಗಿದ್ದಾರೆ.
ಸಂಬಳ: 25,000-30,000
ಮತ್ತು ಟೆಲಿಕಾಲಿಂಗ್ ಕಛೇರಿಯ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ.
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
9187412584 / 9187312582

ಅಮೆರಿಕಾ–ಇಸ್ರೇಲ್ ಸತತ 1700 ದಾಳಿಯಿಂದ ಜರ್ಝರಿತಗೊಂಡಿರುವ ಇರಾನ್; ಆದರೂ ಶತ್ರುಗಳ ವಿರುದ್ಧ ಪ್ರತೀಕಾರದ ಜ್ವಾಲೆ; ಅಮೆರಿಕಾದ ನೆಲೆಗಳು, ಇಸ್ರೇಲ್ ವಿರುದ್ಧ ನಿರಂತರ ಪ್ರತಿದಾಳಿ; ಇರಾನ್ ಶಾಂತಿ ಪ್ರಸ್ತಾಪಕ್ಕೆ ಡೋನಾಲ್ಡ್ ಟ್ರಂಪ್ ಅಬ್ಬರ; ಪ್ರಪಂಚದ ಅತೀ ಮುಖ್ಯ ತೈಲ ಮಾರ್ಗ ಹಾರ್ಮುಜ್ ಬಂದ್ ಮಾಡಿದ ಇರಾನ್

ಪ್ರಪಂಚದಲ್ಲಿ ತೈಲ ಬಿಕ್ಕಟ್ಟು ಭಯ...!

ನವದೆಹಲಿ, ಮಾ.3– ಅಮೆರಿಕಾ ಹಾಗೂ ಇಸ್ರೇಲ್ ಜಂಟಿ ದಾಳಿಗೆ ಇರಾನ್ ಕೂಡ ಬಲವಾದ ಪ್ರತ್ಯುತ್ತರ ನೀಡುತ್ತಿದ್ದು, ನಾಲ್ಕನೇ ದಿನವೂ ಮಧ್ಯಪ್ರಾಚ್ಯದಲ್ಲಿ ರಣಭೀಕರ ಕಾಳಗ ನಡೆದಿದೆ. ಆದರೆ ಅಮೆರಿಕಾ, ಇಸ್ರೇಲ್‌ಗಳು ಸತತ 1700 ದಾಳಿಗಳನ್ನು ಇರಾನ್ ಮೇಲೆ ನಡೆಸಿ, ಭಾರಿ ಹಾನಿ ಉಂಟು ಮಾಡಿವೆ.

ಈ ಮಧ್ಯೆ ಇರಾನ್, ಹಾರ್ಮುಜ್ ಮಾರ್ಗ ಬಂದ್ ಮಾಡಿರುವುದರಿಂದ ಪ್ರಪಂಚದ ಬಹುತೇಕ ರಾಷ್ಟ್ರಗಳಿಗೆ ಈ ಮಾರ್ಗ ಸರಬರಾಜಾಗುತ್ತಿದ್ದ ತೈಲ ಸಾಗಾಟ ಬಂದ್ ಆಗಿದೆ. ಇರಾನ್ ಸಾಮ್ರಾಜ್ಯ ಈಗ ಪತನದ ಅಂಚಿನಲ್ಲಿದೆ. ಅಮೆರಿಕ ಮತ್ತು ಇಸ್ರೇಲ್ ಪಡೆಗಳು ನಡೆಸುತ್ತಿರುವ ಸತತ ವೈಮಾನಿಕ ದಾಳಿಯಿಂದಾಗಿ ಇರಾನ್‌ನ ನೌಕಾಪಡೆ, ವಾಯುಪಡೆ ಮತ್ತು ರಕ್ಷಣಾ ವ್ಯವಸ್ಥೆ ಸಂಪೂರ್ಣವಾಗಿ ನಾಶವಾಗಿವೆ. ಇರಾನ್‌ನ ನಾಯಕತ್ವ ಮತ್ತು ಮಿಲಿಟರಿ ಶಕ್ತಿ ಈಗ ಇತಿಹಾಸವಾಗಿದೆ. ಅವರು ಈಗ ಮಾತುಕತೆಗೆ ಹಪಹಪಿಸುತ್ತಿದ್ದಾರೆ. ಆದರೆ ಅದಕ್ಕೆ ನಾನು ತುಂಬಾ ತಡವಾಗಿದೆ ಎಂದು ಉತ್ತರಿಸಿರುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗುಡುಗಿದ್ದಾರೆ. ಟೆಹರಾನ್‌ನಲ್ಲಿ ನಡೆದ ದಾಳಿಯಲ್ಲಿ ಲೆಬನಾನ್‌ನ ಕಾರ್ಪ್ಸ್ ಹೆಜ್ಬೊಲ್ಲಾ ನಾಯಕತ್ವ ಹಾಗೂ ಇರಾನ್ ನಡುವೆ ■ 6ನೇ ಪುಟಕ್ಕೆ


ಇರಾನ್ ಬೆಂಬಲಿತ ಬೈರುತ್ ಮೇಲೆ ಇಸ್ರೇಲ್ ದಾಳಿಯ ಅವಶೇಷ.

ಭಾರತಕ್ಕೆ ಇಂಧನ ಪೂರೈಸಲು ರಷ್ಯಾ ಭರವಸೆ

ಮಾಸ್ಕೋ: ಇರಾನ್ ಮೇಲಿನ ಅಮೆರಿಕ ಮತ್ತು ಇಸ್ರೇಲಿ ದಾಳಿಗಳು ನಂತರ ಟೆಹ್ರಾನ್‌ನ ಪ್ರತೀಕಾರದ ಕ್ರಮಗಳು ಇಡೀ ಪಶ್ಚಿಮ ಏಷ್ಯಾವನ್ನು ಯುದ್ಧದ ಜ್ವಾಲೆಯಲ್ಲಿ ಮುಳುಗಿಸಿದೆ. ಏತನ್ಮಧ್ಯೆ, ಭಾರತದಲ್ಲಿ ಈಗ ಕೇವಲ 50 ದಿನಗಳ ಕಚ್ಚಾ ತೈಲ ಮತ್ತು ಸಂಸ್ಕರಿಸಿದ ಪೆಟ್ರೋಲಿಯಂ ಉತ್ಪನ್ನಗಳು ಮಾತ್ರ ಉಳಿದಿವೆ ಎಂದು ವರದಿಯಾಗಿದ್ದು ರಷ್ಯಾ ಮತ್ತೊಮ್ಮೆ ಭಾರತದ ನೆರವಿಗೆ ಬಂದಿದೆ. ಕೊಲ್ಲಿಯಲ್ಲಿ ಬೆಳೆಯುತ್ತಿರುವ ಬಿಕ್ಕಟ್ಟು ಜಾಗತಿಕ ತೈಲ ಪೂರೈಕೆಯನ್ನು ಅಡ್ಡಿಪಡಿಸಿದರೆ ಭಾರತಕ್ಕೆ ಇಂಧನ ಪೂರೈಕೆಯಲ್ಲಿ ಸಹಾಯ ಮಾಡಲು ರಷ್ಯಾ ಸಿದ್ಧವಾಗಿದೆ.

ರಷ್ಯಾದ ಮೂಲಗಳ ಪ್ರಕಾರ, ಯಾವುದೇ ಬಿಕ್ಕಟ್ಟಿನಲ್ಲಿ ತನ್ನ ಇಂಧನ ಅಗತ್ಯಗಳನ್ನು ಪೂರೈಸಲು ಸಿದ್ಧವಾಗಿದೆ ಎಂದು ರಷ್ಯಾ ಭಾರತಕ್ಕೆ ಭರವಸೆ ನೀಡಿದೆ. ಮಧ್ಯಪ್ರಾಚ್ಯದಲ್ಲಿ ಯುದ್ಧ ತೀವ್ರಗೊಳ್ಳುತ್ತಿದ್ದಂತೆ, ಕಚ್ಚಾ ತೈಲ ಬೆಲೆಗಳು ಗಗನಕ್ಕೇರುತ್ತಿವೆ. ಈ ಯುದ್ಧವು ದೀರ್ಘಕಾಲದವರೆಗೆ ಮುಂದುವರಿದರೆ, ಪೂರೈಕೆ ಸರಪಳಿಗೆ ಸಂಪೂರ್ಣವಾಗಿ ಅಡ್ಡಿಯಾಗುತ್ತದೆ. ಇದನ್ನು ನಿರೀಕ್ಷಿಸಿದ ರಷ್ಯಾ, ತನ್ನ ಪ್ರಸ್ತುತ ಪೂರೈಕೆಯನ್ನು ಮುಂದುವರಿಸುವುದಲ್ಲದೆ, ಅಗತ್ಯವಿದ್ದರೆ ಅದನ್ನು ಹೆಚ್ಚಿಸುವುದಾಗಿ ಭಾರತಕ್ಕೆ ಭರವಸೆ ನೀಡಿದೆ. ರಷ್ಯಾದ ಈ ನಡೆ ಭಾರತಕ್ಕೆ ಪ್ರಮುಖ ಪರಿಹಾರವಾಗಿದೆ.

ಅಮೆರಿಕ–ಇಸ್ರೇಲ್ ದಾಳಿಗೆ 165 ಇರಾನ್ ಶಾಲಾ ಬಾಲಕಿಯರು ಬಲಿ

ಅಂತಿಮ ಯಾತ್ರೆಯಲ್ಲಿ ಜನಸಾಗರ, ತೀವ್ರ ಆಕ್ರೋಶ

ಟೆಹರಾನ್, ಮಾ.3– ಇರಾನ್ ವಿರುದ್ಧದ ಅಮೆರಿಕ–ಇಸ್ರೇಲ್ ದಾಳಿಯಿಂದಾಗಿ ಮಧ್ಯ ಪ್ರಾಚ್ಯ ಹೊತ್ತಿ ಉರಿಯುತ್ತಿದೆ. ಅಪಾರ ಪ್ರಮಾಣದಲ್ಲಿ ನಷ್ಟ ಉಂಟಾಗುತ್ತಿದ್ದು, ನೂರಾರು ಅಮಾಯಕ ಜನರು ಕ್ಷಿಪಣಿ ಹೊಡೆತಕ್ಕೆ ಬಲಿಯಾಗುತ್ತಿದ್ದಾರೆ.

ಶನಿವಾರ ಇರಾನ್ ನ ಮಿನಾಬ್ ನಗರದಲ್ಲಿ ಅಮೆರಿಕ–ಇಸ್ರೇಲ್ ನಡೆಸಿದ ಕ್ಷಿಪಣಿ ದಾಳಿಗೆ 165 ಅಮಾಯಕ ಶಾಲಾ ಬಾಲಕಿಯರು ಮೃತಪಟ್ಟಿದ್ದಾರೆ. ಮೃತರ ಪಾರ್ಥಿವ ಶರೀರದ ಅಂತ್ಯಕ್ರಿಯೆ ಮೆರವಣಿಗೆ ಇಂದು ನಡೆಯಿತು. ಜನಸಾಗರವೇ ಹರಿದುಬಂದಿತ್ತು. ಮುಗ್ಧ ಶಾಲಾ ಬಾಲಕಿಯರ ದಾಳಿಗೆ ಕಾರಣರಾದ ಅಮೆರಿಕ ಹಾಗೂ ಇಸ್ರೇಲ್ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಅಂತ್ಯಕ್ರಿಯೆ ಮೆರವಣಿಗೆಯ ದೃಶ್ಯಗಳನ್ನು ■ 6ನೇ ಪುಟಕ್ಕೆ


SHAH SINCE 1947
SPOT HIRING
WALK-IN INTERVIEW
Hero
- POSITION: Sales Representatives
- SALARY: Rs. 25,000 (Based on Experience) + Attractive Incentives
- BENEFITS: ESI and PF

Date: 6th March 2026, Time: 10:30 AM
Immediate Joining
Walk in with Resume and ID Proof
Shah Mobikes - Hero MotoCorp – 3rd Cross, Anikethana Road, Kuvempu Nagara, Mysuru – 570023
Contact:
+91 80505 40888, +91 97422 97421



ಆರೋಗ್ಯ ಸೇವೆಯಲ್ಲಿನ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ವಿಶಲ್ ಬ್ಲೋವರ್ ಪಾಲಿಸಿ ಜಾರಿ

ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಪ್ರಕಟಣೆ; ಲಂಚ, ವಂಚನೆ, ಅಧಿಕಾರ ದುರ್ಬಳಕೆಯ ಮಾಹಿತಿಗೆ ಮನವಿ



ಬೆಂಗಳೂರು, ಮಾ.3– ಆರೋಗ್ಯ ಸೇವೆಯಲ್ಲಿ ಭ್ರಷ್ಟಾಚಾರ ನಿರ್ಮೂಲನೆಗೆ ವಿಶಲ್ ಬ್ಲೋವರ್ ಪಾಲಿಸಿ(ವಾಹಿತಿ ಬಹಿರಂಗಪಡಿಸುವ ನೀತಿ)ಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗಿದೆ.

ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನಾರೋಗ್ಯ ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ ಯೋಜನೆಯಡಿ ಸರ್ಕಾರಿ–ಖಾಸಗಿ ಆಸ್ಪತ್ರೆಗಳು ಹಾಗೂ ಯೋಜನೆಯ ಅನುಷ್ಠಾನದಲ್ಲಿ ಭಾಗಿಯಾಗುವ ಯಾವುದೇ ಪಾಲುದಾರರ ವಿರುದ್ಧ ಭ್ರಷ್ಟಾಚಾರ, ವಂಚನೆ, ಉದ್ದೇಶಪೂರ್ವಕ ಅಥವಾ ವಿವೇಚುನಾಯುತ ಅಧಿಕಾರ ದುರ್ಬಳಕೆಯಂತಹ ಯಾವುದೇ ಆರೋಪಗಳು ಕೇಳಿಬಂದಲ್ಲಿ, ಆರೋಪಿತರ ವಿರುದ್ಧ ದೂರು ಅಥವಾ ಮಾಹಿತಿ ನೀಡುವ ಯಾವುದೇ ವ್ಯಕ್ತಿಯ ಗುರುತನ್ನು ಗೌಪ್ಯವಾಗಿಟ್ಟು, ಪ್ರಕರಣ ಸಂಬಂಧ ಮಾಹಿತಿ ಪಡೆದು ವಿಚಾರಣೆ ನಡೆಸಲು ಈ ನೀತಿಯನ್ನು ಸರ್ಕಾರದ ಆದೇಶದನ್ವಯ ಆರೋಗ್ಯ ಸುರಕ್ಷಾ ಟ್ರಸ್ಟ್ ಮೂಲಕ ಜಾರಿಗೆ ತರಲಾಗಿದೆ.

ಅದರಂತೆ, ಆರೋಗ್ಯ ಕರ್ನಾಟಕ ಯೋಜನೆ ಅನುಷ್ಠಾನದಲ್ಲಿ ಭಾಗಿಯಾಗಿರುವ ಯಾವುದೇ ಪಾಲುದಾರರ ವಿರುದ್ಧ ಕೇಳಿಬರುವ ಆರೋಪದ ಮೇಲೆ ದೂರುಗಳನ್ನು ಸ್ವೀಕರಿಸಿ, ವಿಚಾರಣೆ ನಡೆಸಿ ಅಂತಹ ದೂರು ನೀಡುವ ವ್ಯಕ್ತಿಯ ಗೌಪ್ಯತೆಯನ್ನು ಕಾಪಾಡಲು ಹಾಗೂ ಅದಕ್ಕೆ ಪ್ರಾಸಂಗಿಕವಾದ ವಿಷಯಗಳ ಬಹಿರಂಗಪಡಿಸುವಿಕೆ ವಿರುದ್ಧ ಸಾಕಷ್ಟು ಸುರಕ್ಷತೆಗಳನ್ನು ಒದಗಿಸುವುದು ಈ ನೀತಿಯ ಪ್ರಮುಖ ಉದ್ದೇಶವಾಗಿದೆ. ಸ್ವೀಕೃತ ದೂರುಗಳ ಬಗ್ಗೆ ವಿಶಲ್ ಬ್ಲೋವರ್ ಅಧಿಕಾರಿಯಾದ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಮುಖ್ಯ ಜಾಗೃತಾಧಿಕಾರಿ ಸಮಗ್ರ ತನಿಖೆ ನಡೆಸಿ, ವರದಿ ಸಲ್ಲಿಸಲಿದ್ದಾರೆ. ತನಿಖಾ ವರದಿ ಬಗ್ಗೆ ಚರ್ಚಿಸಿದ ಬಳಿಕ ಸಂಬಂಧಪಟ್ಟ ಅಧಿಕಾರಿಗಳ ನೆರವಿನೊಂದಿಗೆ ಆರೋಪಿತರ ವಿರುದ್ಧ ಕ್ರಮ ವಹಿಸಲಾಗುತ್ತದೆ.

ಸಾರ್ವಜನಿಕರು ವಾಟ್ಸಪ್‌ನಲ್ಲಿ ವಿವರವಾದ ದೂರು ಸಲ್ಲಿಸಲು 9480819724ಕ್ಕೆ ಸಂಪರ್ಕಿಸಬಹುದು. ಮಾಹಿತಿ ಸಲ್ಲಿಸಿದವರ ವಿವರವನ್ನು ಗೌಪ್ಯವಾಗಿಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮುಖ್ಯ ಜಾಗೃತಾಧಿಕಾರಿಗಳು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಆರೋಗ್ಯ ಸೌಧ, 7ನೇ ಮಹಡಿ, 1ನೇ ಕ್ರಾಸ್, ಮಾಗಡಿ ರಸ್ತೆ, ಬೆಂಗಳೂರು–560023 ಅಥವಾ ಉಚಿತ ಸಹಾಯವಾಣಿ ಸಂಖ್ಯೆ: 18004258330, ಇಮೇಲ್ ವಿಳಾಸ: cvosast@gmail.com ಮೂಲಕ ಸಂಪರ್ಕಿಸಬಹುದು ಎಂದು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಪ್ರಕಟಣೆ ತಿಳಿಸಿದೆ.

ಕೆ.ಆರ್.ಆಸ್ಪತ್ರೆ, ಟ್ರಾಮಾಕೇರ್, ಸೂಪರ್ ಸ್ಪೆಷಾಲಿಟಿ, ಪಿಕೆಟಿಬಿ ಆಸ್ಪತ್ರೆಗಳಲ್ಲಿ ಪೂರ್ಣ ಪ್ರಮಾಣದ ಚಿಕಿತ್ಸೆ ಲಭ್ಯ

ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ತಿಂಗಳಾಂತ್ಯಕ್ಕೆ ಸ್ಕ್ಯಾನಿಂಗ್ ಸೌಲಭ್ಯ



ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕರ ಕಚೇರಿ ಸಭಾಂಗಣದಲ್ಲಿ ಶಾಸಕ ಕೆ.ಹರೀಶ್‌ಗೌಡ ಮಂಗಳವಾರ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ಮೈಸೂರು,ಮಾ.3(ಎಂಕೆ)–ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆ.ಆರ್.ಆಸ್ಪತ್ರೆ, ಟ್ರಾಮಾಕೇರ್, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮತ್ತು ಪಿಕೆಟಿಬಿ ಆಸ್ಪತ್ರೆಯಲ್ಲಿ ಪೂರ್ಣ ಪ್ರಮಾಣದಲ್ಲಿ ಚಿಕಿತ್ಸೆ ನೀಡಲಾಗುತ್ತಿದ್ದು, ತಿಂಗಳಾಂತ್ಯಕ್ಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲೂ ಎಂಆರ್‌ಐ ಸ್ಕ್ಯಾನಿಂಗ್ ಸೌಲಭ್ಯ ಲಭ್ಯವಾಗಲಿದೆ ಎಂದು ಶಾಸಕ ಕೆ.ಹರೀಶ್‌ಗೌಡ ತಿಳಿಸಿದರು.

ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ(ಎಂಎಂಸಿ ಆರ್‌ಐ) ಅಧಿಕಾರಿಗಳು ಮತ್ತು ಹಿರಿಯ ವೈದ್ಯಾಧಿಕಾರಿಗಳೊಂದಿಗೆ ಮಂಗಳವಾರ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಕೋಟಕ್ ಮಹೀಂದ್ರಾ ಬ್ಯಾಂಕ್ ಸಿಎಸ್‌ಆರ್ ಯೋಜನೆಯಡಿ 8 ಕೋಟಿ ಅನುದಾನದಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಎಂಆರ್‌ಐ ಸ್ಕ್ಯಾನಿಂಗ್ ಯಂತ್ರ ನೀಡಲಾಗುತ್ತಿದ್ದು, ಕೆ.ಆರ್.ಆಸ್ಪತ್ರೆ ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿಯೂ ಸಾರ್ವಜನಿಕರು ಎಂಆರ್‌ಐ ಸ್ಕ್ಯಾನಿಂಗ್ ಸೌಲಭ್ಯ ಪಡೆದುಕೊಳ್ಳಬಹುದು ಎಂದರು.

ಹಾಗೆಯೇ ಚೆಲುವಾಂಬ ಆಸ್ಪತ್ರೆಯಲ್ಲಿ ಸದ್ಯಕ್ಕೆ 2 ಐಸಿಯು ಘಟಕಗಳಿದ್ದು, ಸಂಸ್ಥೆಯ 52 ಲಕ್ಷ ರೂ. ಅನುದಾನದಲ್ಲಿ ಮತ್ತೊಂದು ಐಸಿಯು ಘಟಕ ನಿರ್ಮಾಣಕ್ಕೆ ನಿರ್ಧರಿಸಲಾಗಿದೆ. ಈ ಮೂಲಕ ತಾಯಿ–ಮಗು ಮರಣ ಪ್ರಮಾಣವನ್ನು ತಗ್ಗಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ರೋಗಿಗಳ ಸಂಬಂಧಿಗಳು ತಂಗಲು ವಿಶ್ರಾಂತಿ ತಾಣವನ್ನು ನಿರ್ಮಾಣ ಮಾಡಲಾಗಿದೆ ಎಂದು ತಿಳಿಸಿದರು.

ಕಿದ್ವಾಯಿ ಪೂರ್ಣ: ಬೆಂಗಳೂರು ಮಾದರಿಯಲ್ಲಿ ಮೈಸೂರಲ್ಲೂ ಕಿದ್ವಾಯಿ ಆಸ್ಪತ್ರೆ ನಿರ್ಮಾಣ ಮಾಡುತ್ತಿದ್ದು, ಕಟ್ಟಡ ನಿರ್ಮಾಣ ಕಾಮಗಾರಿ ಮುಕ್ತಾಯಗೊಂಡಿದೆ. ವೈದ್ಯಕೀಯ ಸಲಕರಣಗಳನ್ನು ಪೂರೈಕೆ ಮಾಡಿ, ಸದ್ಯದಲ್ಲಿಯೇ ಮುಖ್ಯಮಂತ್ರಿಗಳಿಂದ ಉದ್ಘಾಟಿಸಲಾಗುವುದು. ಜೊತೆಗೆ ನೆಫ್ರೋ–ಯುರಾಲಜಿ ಮತ್ತು ಎಂಡೋಕ್ರಿನಾಲಜಿ ಕಟ್ಟಡ ನಿರ್ಮಾಣ ಕಾಮಗಾರಿ ನಡೆಯುತ್ತಿದ್ದು, ಮುಂದಿನ ಮೂರು ತಿಂಗಳಲ್ಲಿ ಮುಕ್ತಾಯಗೊಳ್ಳಲಿದೆ. ಕ್ರಿಟಿಕಲ್ ಕೇರ್ ಯೂನಿಟ್(ಸಿಸಿಯು) ಕೂಡ ಮುಕ್ತಾಯದ ಹಂತದಲ್ಲಿದ್ದು, ಪ್ರತ್ಯೇಕ ಒಪಿಡಿ ಕಟ್ಟಡ ನಿರ್ಮಾಣಗೊಂಡ ಬಳಿಕ ಇನ್ನಷ್ಟು ಒತ್ತಡ ಕಡಿಮೆಯಾಗಲಿದೆ. ಅಲ್ಲದೆ ಈಗಾಗಲೇ ಕಿಡ್ನಿ ಸಂಬಂಧಿತ ಎಕ್ಸ್‌ಟ್ರಾಕಾರ್ಪೋರಿಯಲ್ ಶಾಕ್ ವೇವ್ ಲಿಥೊಟ್ರಿಪ್ಸಿ (ESWL) ಆತ್ಯಾಧುನಿಕ ಚಿಕಿತ್ಸೆಯೂ ಆರಂಭವಾಗಿದೆ ಎಂದು ಹೇಳಿದರು.

ನವೀಕರಣ ಸರಿಯಾಗಿ ಆಗಿಲ್ಲ..!: ಕೆ.ಆರ್.ಆಸ್ಪತ್ರೆ ಕಟ್ಟಡ ನವೀಕರಣಕ್ಕೆ ಈ ಹಿಂದಿನ ರಾಜ್ಯ ಸರ್ಕಾರ ಸುಮಾರು 89 ಕೋಟಿ ರೂ.ಅನುದಾನ ನೀಡಿತ್ತು. ಆದರೆ ನವೀಕರಣ ಕಾಮಗಾರಿ ಸರಿಯಾಗಿ ನಡೆದಿಲ್ಲ ಎಂದು ಹಲವರು ದೂರಿದ್ದ ಬಳಿಕ ಪರಿಶೀಲಿಸಲಾಗಿತ್ತು ನವೀಕರಣ ಕಾಮಗಾರಿ ಮುಕ್ತಾಯಗೊಂಡಿದ್ದು, ನವೀಕರಣದಲ್ಲಿ ಲೋಪ ಕಂಡು ಬಂದಿದ್ದರಿಂದ ಗುತ್ತಿಗೆದಾರರಿಗೆ ಪೂರ್ಣ ಪ್ರಮಾಣದ ಬಿಲ್ ಪಾವತಿ ಮಾಡದಂತೆ ತಿಳಿಸಲಾಗಿದೆ ಎಂದರು.

ಔಷಧಿ ಕೊರತೆಯಿಲ್ಲ: ಕೆ.ಆರ್.ಆಸ್ಪತ್ರೆ ಸೇರಿದಂತೆ ನಗರದ ಯಾವ ಆಸ್ಪತ್ರೆಯಲ್ಲೂ ಔಷಧಿಗಳ ಕೊರತೆ ಕಂಡು ಬಂದಿಲ್ಲ. ಜಿಲ್ಲಾಸ್ಪತ್ರೆಯಲ್ಲಿ ಡಯಾಲಿಸಿಸ್‌ಗೆ ಸಂಬಂಧಿತ ಔಷಧಿ ಸ್ವಲ್ಪ ಕೊರತೆಯಾಗಿತ್ತು. ಈಗ ಸಮಸ್ಯೆ ಬಗೆಹರಿದಿದೆ. ಉಳಿದಂತೆ ಎಲ್ಲಿಯೂ ಔಷಧಿ ಪೂರೈಕೆ ಕೊರತೆಯಾಗಿಲ್ಲ. ಹಾಗೆಯೇ ವೈದ್ಯರು ಕೂಡ ಖಾಸಗಿ ಕ್ಲಿನಿಕ್‌ಗಳಿಗೆ ಬರದಂತೆ ಲಭ್ಯವಿರುವ ಔಷಧಿಗಳನ್ನೇ ನೀಡಬೇಕು. ಕರ್ತವ್ಯದ ವೇಳೆ ಹಾಜರಾತಿ ಕಡ್ಡಾಯವಾಗಿರಬೇಕು ಎಂದು ಸಹ ಸೂಚಿಸಲಾಗಿದೆ ಎಂದರು.

ಭದ್ರತೆಗೆ ಕ್ರಮ: ಮೈಸೂರು ಮೆಡಿಕಲ್ ಕಾಲೇಜು ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಆಸ್ಪತ್ರೆಗಳಲ್ಲಿಯೂ ಸೂಕ್ತ ಭದ್ರತೆ ಒದಗಿಸಲು ಕ್ರಮ ವಹಿಸಲಾಗಿದೆ. ಮಹಿಳಾ ಸೆಕ್ಯೂರಿಟಿಗಳಿಗಿಂತ ಪುರುಷರನ್ನು ಹೆಚ್ಚಿನ ಸಂಖ್ಯೆಯಲ್ಲಿ ನಿಯೋಜಿಸುವಂತೆ ತಿಳಿಸಲಾಗಿದೆ. ಜೊತೆಗೆ ಅವಶ್ಯವಿರುವಷ್ಟು ಸಿಸಿಟಿವಿ ಕ್ಯಾಮರಾ ಅಳವಡಿಕೆಗೆ ತಿಳಿಸಲಾಗಿದೆ ಎಂದರು.

ಮೈಸೂರು ಮೆಡಿಕಲ್ ಕಾಲೇಜು–ಸಂಶೋಧನಾ ಸಂಸ್ಥೆಯ ಕೌನ್ಸಿಲ್ ಸದಸ್ಯರಾದ ಡಾ.ಮಹದೇವ್, ಡಾ.ಸುನೀಲ್, ತನುಜಾ ಮಹೇಶ್, ಸಿಇಓ ಮಹೇಶ್, ಕೆ.ಆರ್.ಆಸ್ಪತ್ರೆ ವೈದ್ಯಕೀಯ ಅಧೀಕ್ಷಕಿ ಡಾ.ಶೋಭಾ, ಚೆಲುವಾಂಬ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕಿ ಡಾ.ಸುಧಾ, ಪಿಕೆಟಿಬಿ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಪ್ರಶಾಂತ್ ಮತ್ತಿತರರು ಉಪಸ್ಥಿತರಿದ್ದರು.

ಖಾಯಂ ನೌಕರರ ನೇಮಕಕ್ಕೆ ಮನವಿ...

“ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಆಸ್ಪತ್ರೆಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿ ಸಂಬಂಧ ಪಟ್ಟಿ ಮಾಡಲಾಗಿದ್ದು, ಟೆಕ್ನಿಷಿಯನ್ಸ್ ಸೇರಿದಂತೆ ಖಾಯಂ ನೌಕರರ ನೇಮಕ ಮಾಡುವಂತೆ ಸರ್ಕಾರಕ್ಕೆ ಮನವಿ ಮಾಡಲಾಗಿದೆ.

–ಕೆ.ಹರೀಶ್‌ಗೌಡ, ಶಾಸಕ

ವೈದ್ಯರ ಮುಷ್ಕರ ನಮಗೆ ಸಂಬಂಧಿಸಿದ್ದಲ್ಲ...

“ಮಾ.11ರಿಂದ ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ವತಿಯಿಂದ ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ಅನಿರ್ದಿಷ್ಟಾವಧಿ ಮುಷ್ಕರ ಹಮ್ಮಿಕೊಳ್ಳಲಾಗಿದೆ. ಆದರೆ, ಮೈಸೂರು ಮೆಡಿಕಲ್ ಕಾಲೇಜು–ಸಂಶೋಧನಾ ಸಂಸ್ಥೆ ಅಡಿಯಲ್ಲಿ ಕಾರ್ಯನಿರ್ವಹಿಸುವ ಕೆ.ಆರ್. ಆಸ್ಪತ್ರೆ, ಟ್ರಾಮಾ ಕೇರ್, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮತ್ತು ಪಿಕೆಟಿಬಿ ಆಸ್ಪತ್ರೆಯಲ್ಲಿ ಪೂರ್ಣ ಪ್ರಮಾಣ ಸೇವೆ ದೊರೆಯಲಿದೆ. ಯಾವುದೇ ಬಂದ್ ಇರುವುದಿಲ್ಲ.

–ಡಾ.ದಾಕ್ಷಾಯಿಣಿ, ಡೀನ್ ಮತ್ತು ನಿರ್ದೇಶಕರು, ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ

ನಾಯಕತ್ವ ಬದಲಾದರೆ ದಲಿತ ನಾಯಕರಿಗೇ ಸಿಎಂ ಸ್ಥಾನ ದಕ್ಕಬೇಕು



ಎನ್.ಭಾಸ್ಕರ್

ಮೈಸೂರು,ಮಾ.3–ರಾಜ್ಯ ಕಾಂಗ್ರೆಸ್‌ನಲ್ಲಿ ನಾಯಕತ್ವ ಬದಲಾವಣೆಯಾದರೆ ದಲಿತ ಸಚಿವರು ಮುಖ್ಯಮಂತ್ರಿ ಸ್ಥಾನವನ್ನು ಕೇಳಬೇಕು. ಯಾವ ಕಾರಣಕ್ಕೂ ಉಪ ಮುಖ್ಯಮಂತ್ರಿ ಸ್ಥಾನಕ್ಕೆ ತೃಪ್ತರಾಗಬಾರದು ಎಂದು ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ತಿಳಿಸಿದ್ದಾರೆ.

ರಾಜ್ಯದಲ್ಲಿ ನಾಯಕತ್ವ ಬದಲಾವಣೆ ವೇಳೆ ಕಾಂಗ್ರೆಸ್ ಹೈಕಮಾಂಡ್, ದಲಿತರನ್ನು ಆದ್ಯತೆಯಾಗಿ ಪರಿಗಣಿಸಬೇಕು. ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ, ಸಚಿವರಾದ ಡಾ.ಜಿ.ಪರಮೇಶ್ವರ್, ಡಾ.ಎಚ್.ಸಿ.ಮಹದೇವಪ್ಪ, ಕೆ.ಎಚ್.ಮುನಿಯಪ್ಪರಂತಹ ಹಿರಿಯ ನಾಯಕರಿಗೆ ಅವಕಾಶ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ರಾಜ್ಯದ ದಲಿತ ನಾಯಕರು ಮಲ್ಲಿಕಾರ್ಜುನ ಖರ್ಗೆ ಅವರನ್ನು ಮುಖ್ಯಮಂತ್ರಿ ಮಾಡುವಂತೆ ಒತ್ತಾಯಿಸಿರುವುದು ಸ್ವಾಗತಾರ್ಹ. ಇತ್ತೀಚಿಗಿನ ರಾಜಕೀಯ ಬೆಳವಣಿಗೆ ಗಮನಿಸಿದರೆ ದಲಿತರಿಗೆ ನಾಯಕತ್ವ ತಪ್ಪಿಸುವ ಪ್ರಯತ್ನ ಹಾಗೂ ಸಾಂವಿಧಾನಿಕ ಮಾನ್ಯತೆ ಇಲ್ಲದ ಉಪಮುಖ್ಯಮಂತ್ರಿ ಸ್ಥಾನಕ್ಕೆ ಸೀಮಿತಗೊಳಿಸುವ ಹುನ್ನಾರ ನಡೆದಿದೆ ಎನ್ನಿಸುತ್ತದೆ ಎಂದು ಆರೋಪಿಸಿದ್ದಾರೆ.

ಗೃಹಮಂತ್ರಿ ಡಾ.ಜಿ.ಪರಮೇಶ್ವರ್ ಅವರು ದಶಕಗಳಿಗೂ ಅಧಿಕ ಕಾಲದಿಂದ ಗೃಹಮಂತ್ರಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಎರಡು ಬಾರಿ ಕೆಪಿಸಿಸಿ ಅಧ್ಯಕ್ಷರಾಗಿ ಪಕ್ಷವನ್ನು ಸಂಘಟಿಸುವ ಮೂಲಕ 2013ರಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಅವರ ಪಕ್ಷ ನಿಷ್ಠೆಯನ್ನು ಕಾಂಗ್ರೆಸ್ ಹೈಕಮಾಂಡ್ ಗಮನಿಸಬೇಕು ಎಂದು ಮನವಿ ಮಾಡಿದ್ದಾರೆ.

ಕಾಂಗ್ರೆಸ್ ಪಕ್ಷಕ್ಕೆ ಪರಿಶಿಷ್ಟ ಜಾತಿ ಬಲಗೈ ಸಮುದಾಯದ ನಿಷ್ಠೆ ಪ್ರಶ್ನಾತೀತವಾಗಿದೆ. ಎಲ್ಲಾ ಚುನಾವಣೆಗಳಲ್ಲೂ ಕಾಂಗ್ರೆಸ್ ಬೆಂಬಲಿಸಿ, ಅಧಿಕಾರಕ್ಕೆ ತರುವಲ್ಲಿ ಮಹತ್ವದ ಕೊಡುಗೆ ನೀಡಿದ್ದಾರೆ. ಈ ಅಂಶಗಳನ್ನು ಕಾಂಗ್ರೆಸ್ ಹೈಕಮಾಂಡ್ ಗಮನಿಸಬೇಕು. ಡಿಸಿಎಂ ಸ್ಥಾನ ಒಪ್ಪದೆ ಮುಖ್ಯಮಂತ್ರಿ ಸ್ಥಾನ ಕೇಳುವ ದಲಿತ ಸಚಿವರನ್ನು ಬೆಂಬಲಿಸಿ, ಅವರನ್ನೇ ಮುಖ್ಯಮಂತ್ರಿ ಮಾಡುವಂತೆ ಒತ್ತಾಯಿಸುತ್ತೇವೆ ಎಂದು ಎನ್.ಭಾಸ್ಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸದಸ್ಯ



ಮೈಸೂರು,ಮಾ.3(ಎಂಕೆ)–ಮೈಸೂರು ನಗರಪಾಲಿಕೆ ವ್ಯಾಪ್ತಿಯ ನರಸಿಂಹರಾಜ ಕ್ಷೇತ್ರದ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸದಸ್ಯರಾಗಿ ಕಾಂಗ್ರೆಸ್ ಮುಖಂಡ ರಾಕೇಶ್‌ಕುಮಾರ್ ಅನುಷ್ಠಾನ ಸಮಿತಿ ಸದಸ್ಯ ಕಾರ್ಯದರ್ಶಿಯೂ ಆದ ಪಾಲಿಕೆ ಉಪ ಆಯುಕ್ತರು, ರಾಕೇಶ್‌ಕುಮಾರ್ ಅವರನ್ನು ನೇಮಕಗೊಳಿಸಿ ಆದೇಶಿಸಿದ್ದಾರೆ.

ಮೈಸೂರಿನ ವಾಣಿಜ್ಯ ಪ್ರದೇಶಗಳಲ್ಲಿ ಅಂಗಡಿಗಳಿಂದಲೇ ಕಸ ಸಂಗ್ರಹ

● ನಾಲ್ಕು ಸಾವಿರ ಅಂಗಡಿಗಳಿಂದ ಕಸ ಸಂಗ್ರಹಿಸುವ ಗುರಿ ● ಕಸವನ್ನು ರಸ್ತೆಗೆ ಬಿಸಾಡಬೇಡಿ; ಪೌರಕಾರ್ಮಿಕರೇ ಅಂಗಡಿ ಬಳಿ ಬಂದಾಗ ಕಸ ಕೊಡಿ



ಮೈಸೂರು,ಮಾ.3 (ಬಿಎಲ್‌ಯು)–ಸ್ವಚ್ಛ ಸರ್ವೇಕ್ಷಣಾ ಅಭಿಯಾನದ ಹಿನ್ನೆಲೆಯಲ್ಲಿ ಮೈಸೂರಿನ ವಾಣಿಜ್ಯ ಪ್ರದೇಶ (ಕಮರ್ಷಿಯಲ್ ಏರಿಯಾ)ಗಳ ಅಂಗಡಿಗಳಿಂದಲೇ ಕಸ ಸಂಗ್ರಹವನ್ನು ಮೈಸೂರು ನಗರ ಪಾಲಿಕೆ ಆರಂಭಿಸಿದೆ.

ಅಂಗಡಿಯವರು ರಸ್ತೆಗಳಲ್ಲಿ ಕಸ ಸುರಿಯುವುದನ್ನು ಅಥವಾ ಇನ್ನೆಲ್ಲೋ ಕಸ ಗುಡ್ಡೆ ಹಾಕುವುದನ್ನು ತಪ್ಪಿಸಲು ನಗರಪಾಲಿಕೆ ಈ ಕ್ರಮ ಕೈಗೊಂಡಿದೆ.

ನಗರದ ಡಿ.ದೇವರಾಜ ಅರಸ್ ರಸ್ತೆ, ಶಿವರಾಂ ಪೇಟೆ, ಸಂತೆಪೇಟೆ, ಸಯ್ಯಾಜಿ ರಾವ್ ರಸ್ತೆ, ಗಾಂಧಿ ವೃತ್ತ, ಕೆ.ಟಿ.ಸ್ಟ್ರೀಟ್, ಅಶೋಕ ರಸ್ತೆ ಸೇರಿದಂತೆ ಇತರೆಡೆ ಅಂಗಡಿಗಳಿಂದ ಕಸ ಸಂಗ್ರಹಿಸಲಾಗುತ್ತಿದೆ. ಸದ್ಯಕ್ಕೆ ನಗರದ ಹೃದಯ ಭಾಗದ ವಾಣಿಜ್ಯ ಬಡಾವಣೆಗಳಲ್ಲಿ ಮಾತ್ರ ಅಂಗಡಿಗಳಿಂದ ಕಸ ಸಂಗ್ರಹಿಸಲಾಗುತ್ತಿದೆ.

ಇಂದಿನಿಂದ ಪ್ರತಿದಿನ ಮಧ್ಯಾಹ್ನ 2ರಿಂದ 11 ಗಂಟೆಯೊಳಗೆ ಪ್ರತಿ ಅಂಗಡಿಗಳಿಗೆ ಹೋಗುವ ಪೌರಕಾರ್ಮಿಕರು ಅವರಿಂದ ಕಸ ಸಂಗ್ರಹಿಸಲಿದ್ದಾರೆ. ಯಾರೂ ರಸ್ತೆಗಳಲ್ಲಿ ಕಸ ಎಸೆಯಬೇಡಿ, ನಾವು ನಿಮ್ಮ ಅಂಗಡಿಗೆ ಬಂದಾಗ ನಮಗೆ ಕಸ ಕೊಡಿ ಎಂದು ಪೌರ ಕಾರ್ಮಿಕರು ಅಂಗಡಿಯವರಿಗೆ ಸಲಹೆ ನೀಡುತ್ತಿದ್ದಾರೆ. ಮೈಸೂರು ನಗರದ ಹೃದಯ ಭಾಗದ ವಾಣಿಜ್ಯ ಪ್ರದೇಶಗಳಲ್ಲಿ ಸುಮಾರು 4 ಸಾವಿರ ಅಂಗಡಿಗಳಿಂದ ಕಸ ಸಂಗ್ರಹಿಸುವ ಗುರಿ ಹೊಂದಲಾಗಿದೆ ಎಂದು ಮೈಸೂರು ನಗರ ಪಾಲಿಕೆ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಮೃತ್ಯಂಜಯ ಅವರು ತಿಳಿಸಿದ್ದಾರೆ.

ಮಾ.8, ಮೈಸೂರಲ್ಲಿ ಸ್ವಚ್ಛತಾ ರೋಡ್ ಶೋ

ಮೈಸೂರು ನಗರವನ್ನು ಸ್ವಚ್ಛ ಹಾಗೂ ಮಾದರಿ ನಗರವನ್ನಾಗಿಸುವ ದಿಸೆಯಲ್ಲಿ ಮೈಸೂರು ನಗರಪಾಲಿಕೆಯು ಜನರಲ್ಲಿ ಜಾಗೃತಿ ಮೂಡಿಸಲು ಮಾ.8ರಂದು ಸ್ವಚ್ಛತಾ ರೋಡ್ ಶೋ ಆಯೋಜಿಸಿದೆ. ಮೈಸೂರು ಅರಮನೆ ಆವರಣದಿಂದ ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಎದುರಿನ ಓವೆಲ್ ಮೈದಾನದವರೆಗೆ ಸ್ವಚ್ಛತಾ ರೋಡ್ ನಡೆಸಲಿದೆ. 'ಸ್ವಚ್ಛ ಮೈಸೂರು ನಮ್ಮಿಂದಲೆ' ಧ್ಯೇಯದೊಂದಿಗೆ ರೋಡ್ ಶೋ ನಡೆಯಲಿದೆ. ಈ ಮೂಲಕ ಸ್ವಚ್ಛತೆ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿ ಸ್ವಚ್ಛ ಸರ್ವೇಕ್ಷಣಾ ಅಭಿಯಾನದಲ್ಲಿ ಮೈಸೂರು ನಗರಕ್ಕೆ ದೇಶದಲ್ಲೆ ಅಗ್ರ ಸ್ಥಾನ ಪಡೆಯಲು ನಗರಪಾಲಿಕೆ ಇಂತಹ ಹಲವು ವಿನೂತನ ಕಾರ್ಯಕ್ರಮ ಆಯೋಜಿಸುತ್ತಿದೆ. ಮೈಸೂರು ನಗರಪಾಲಿಕೆಯ ಜಯ ಚಾಮರಾಜೇಂದ್ರ ಒಡೆಯರ್ ಸಭಾಂಗಣದಲ್ಲಿ ನಾಳೆ (ಮಾರ್ಚ್ 4) ಬೆಳಿಗ್ಗೆ 11 ಗಂಟೆಗೆ ಸ್ವಚ್ಛತಾ ರೋಡ್ ಶೋ ಕಾರ್ಯಕ್ರಮದ ಪೋಸ್ಟ್ ಬಿಡುಗಡೆ ಸಮಾರಂಭ ನಡೆಯಲಿದೆ.

ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಅವಿರೋಧ ಆಯ್ಕೆ



ಮೈಸೂರು, ಮಾ.3–ಮೈಸೂರಿನ ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಗೃಹ ನಿರ್ಮಾಣ ಸಹಕಾರ ಸಂಘದ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ನೂತನ ಅಧ್ಯಕ್ಷರಾಗಿ ಎ.ಎಸ್.ಚನ್ನಬಸಪ್ಪ, ಉಪಾಧ್ಯಕ್ಷರಾಗಿ ಎ.ಎಸ್.ಗುರುಸ್ವಾಮಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಸಂಘದ ಚುನಾವಣಾಧಿಕಾರಿ ತಿಳಿಸಿದ್ದಾರೆ. ಈ ವೇಳೆ ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಸಂಘದ ಕಾರ್ಯದರ್ಶಿ ರಾಜಶೇಖರಮೂರ್ತಿ, ನಿರ್ದೇಶಕರಾದ ವಾಟಾಳು ಬಿ.ಆನಂದ, ಎಂ.ಎಂ.ಸ್ವಾಮಿ, ನಂಜುಂಡಪ್ಪ, ಸುಬ್ಬಪ್ಪ, ಡಾ.ಮಂಜುಳ, ನಾಗಜ್ಯೋತಿ, ಚನ್ನಪ್ಪ, ನಾಗೇಂದ್ರಮೂರ್ತಿ, ಷಣ್ಮುಖ, ಕೆಂಪರಾಜು, ನಾಗರಾಜು ಇನ್ನಿತರರು ಆತ್ಮೀಯವಾಗಿ ಅಭಿನಂದಿಸಿದ್ದಾರೆ.

ನೀರಿನ ಮೀಟರ್ ಕಳ್ಳತನ

ಮೈಸೂರು, ಮಾ.3(ಎಂಕೆ)– ಮೈಸೂರಿನ ಬೆಸ್ತಕೇರಿಯಲ್ಲಿನ ಮೂರು ಮನೆಗಳ ಮುಂದಿದ್ದ ನೀರಿನ ಮೀಟರ್ ಕಳ್ಳತನವಾಗಿರುವ ಕುರಿತು ಲಕ್ಷ್ಮೀಪುರಂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಬೆಸ್ತಕೇರಿಯ 1ನೇ ಕ್ರಾಸ್‌ನಲ್ಲಿ ಮಂಗಳವಾರ ಮುಂಜಾನೆ ಮೂರು ಮನೆಗಳ ನೀರಿನ ಮೀಟರ್‌ಗಳು ಕಳ್ಳತನವಾಗಿದ್ದು, ದೂರು ದಾಖಲಿಸಿಕೊಂಡು ಸ್ಥಳ ಪರಿಶೀಲನೆ ನಡೆಸಿರುವ ಪೊಲೀಸರು ಕಳ್ಳತನವಾಗದಂತೆ ಕ್ರಮವಹಿಸುವ ಭರವಸೆ ನೀಡಿದ್ದಾರೆ. ಕಳೆದೊಂದು ವಾರದಿಂದ ಬೆಸ್ತಕೇರಿ, ಸುಣ್ಣದಕೇರಿಯಲ್ಲಿ ನೀರಿನ ಮೀಟರ್‌ಗಳ ಕಳ್ಳತನ ನಡೆಯುತ್ತಿದ್ದು, ಪೊಲೀಸರು ಯಾವುದೇ ಕ್ರಮ ಕೈಗೊಂಡಿಲ್ಲ. ಕೂಡಲೇ ಆರೋಪಿಗಳ ಪತ್ತೆಗೆ ನಿವಾಸಿಗಳು ಆಗ್ರಹಿಸಿದ್ದಾರೆ.

ಚೆಲುವಾಂಬ ಆಸ್ಪತ್ರೆಯ ಮಕ್ಕಳ ವಿಭಾಗಕ್ಕೆ ಶುದ್ಧ ಕುಡಿಯುವ ನೀರಿನ ಘಟಕ ಕೊಡುಗೆ



ಚೆಲುವಾಂಬ ಆಸ್ಪತ್ರೆ ಮಕ್ಕಳ ವಿಭಾಗಕ್ಕೆ ಶುದ್ಧ ಕುಡಿಯುವ ನೀರಿನ ಘಟಕ ನೀಡಲಾಯಿತು.

ಮೈಸೂರು: ಚೆಲುವಾಂಬ ಆಸ್ಪತ್ರೆಯ ಮಕ್ಕಳ ವಿಭಾಗಕ್ಕೆ ಸಮಾಜ ಸೇವಕ ಗಣಪತ್ ಜೈನ್ ಕುಟುಂಬಸ್ಥರು ತಮ್ಮ ತಾಯಿ ಮೀನಾ ಜೈನ್‌ರ ಹೆಸರಿನಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ದೇಣಿಗೆ ನೀಡಿದರು.

ಈ ವೇಳೆ ಮಾತನಾಡಿದ ಗಣಪತ್ ಜೈನ್, ಆಸ್ಪತ್ರೆಗೆ ಬರುವ ರೋಗಿಗಳು, ಆಸ್ಪತ್ರೆಯಲ್ಲಿ ತಂಗುವ ರೋಗಿಗಳ ಸಂಬಂಧಿಕರಿಗೆ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಬೇಕು ಎಂಬುದು ನನ್ನ ಕನಸಾಗಿತ್ತು. ಆಸ್ಪತ್ರೆ ವೈದ್ಯಾಧಿಕಾರಿಗಳ ಸಹಯೋಗದಲ್ಲಿ ಈಗ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಿರುವುದು ಸಂತಸ ತಂದಿದೆ ಎಂದರು. ಇದೇ ವೇಳೆ ಆಸ್ಪತ್ರೆಯ ಸಿಬ್ಬಂದಿ ವರ್ಗ ಗಣಪತ್ ಜೈನ್ ಮತ್ತು ಅವರ ಕುಟುಂಬದವರನ್ನು, ಹಾಗೂ ಆನಂದ್ ರಾಮ್.ಜಿ. ಅವರನ್ನು ಸನ್ಮಾನಿಸಿದರು. ಕಾರ್ಯಕ್ರಮದಲ್ಲಿ ಚೆಲುವಾಂಬ ಆಸ್ಪತ್ರೆ ವೈದ್ಯಾಧಿಕಾರಿಗಳಾದ ಡಾ.ಶಿವರಾಂ ಕೃಷ್ಣ, ಡಾ.ನಾಗೇಂದ್ರ, ಸಹಾಯಕ ಪ್ರಾಧ್ಯಾಪಕ ಡಾ.ಎಂ.ಆರ್.ಪ್ರಶಾಂತ್, ಡಾ.ಎನ್.ಎಂ.ನಫೀಸಾ, ಡಾ.ಅಭಿಲಾಷ್.ಜೆ.ಎಸ್, ಶುಶ್ರೂಷಕ ಅಧೀಕ್ಷಕಿ ಶ್ರೀಮತಿ ಲೀಲಾವತಿ, ಕೋಮಲ ಮಣಿ ಟಿ. ಉಪಸ್ಥಿತರಿದ್ದರು.

ನಿಧನ

ಶ್ರೀಮತಿ ರಂಗಲಕ್ಷ್ಮಿ



ಮೈಸೂರು,ಮಾ.3–ಮೈಸೂರಿನ ಕೆಎಸ್‌ಆರ್‌ಟಿಸಿ ಲೇಔಟ್ ನಿವಾಸಿ ಹಾಗೂ ನಿವೃತ್ತ ಶಿಕ್ಷಕಿ ಶ್ರೀಮತಿ ರಂಗಲಕ್ಷ್ಮಿ (69) ಅವರು ಹೃದಯಾಘಾತದಿಂದ ನಿನ್ನೆ (ಸೋಮವಾರ) ರಾತ್ರಿ 10.40ರ ಸಮಯದಲ್ಲಿ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಮಕ್ಕಳಾದ ಆರ್.ಪ್ರಸನ್ನಕುಮಾರ್, ಆರ್.ವಿನುತ, ಆರ್.ಪವಿತ್ರ ಅಳಿಯಂದಿರಾದ ಮಂಜುನಾಥ್, ಅಭಿಷೇಕ್, ಸೊಸೆ ಸೌಮ್ಯ ಪ್ರಸನ್ನ ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಮಧ್ಯಾಹ್ನ 2.30 ಗಂಟೆಗೆ ಮೈಸೂರಿನ ಗಾಂಧಿನಗರದ ಆದಿಜಾಂಬವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

04.03.2026 ಬುಧವಾರ, ಮಳೆ ನಕ್ಷತ್ರ: ಪೂರ್ವಾಭಾದ್ರ 4.02.2026ರಿಂದ 17.03.2026 ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಪುಬ್ಬ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 6.30ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ಕಣ್ಣಿನಲ್ಲಿ ಸೋಂಕು ಶಿಬಿರ, ಕಣ್ಣಿನಲ್ಲಿ ಮಾಂಸ ಬೆಳವಣಿಗೆ, ಮತ್ತು ಕೆಂಪಾಗುವುದು, ಕಣ್ಣಿನಲ್ಲಿ ಏನೋ ಇರುವ ಅನುಭವ, ಕಣ್ಣಿನಿಂದ ನೀರು ಸೋರುವುದು, ಕಣ್ಣು ತುರಿಸುವುದು, ಶುಷ್ಕನೇತ್ರ, ಮಕ್ಕಳಲ್ಲಿ ಕಂಡುಬರುವ ಕಲಿಕೆಯಲ್ಲಿನ ಸಮಸ್ಯೆಗಳು ಹಾಗೂ ಏಕಾಗ್ರತೆಯ ಕೊರತೆ ಕುರಿತು ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಬೆಳಗ್ಗೆ 10 ರಿಂದ
- **ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆ :** ಉಚಿತ ಬೆನ್ನುಮೂಳೆ ಮತ್ತು ನರ ಶಸ್ತ್ರಚಿಕಿತ್ಸಾ ಶಿಬಿರ, ಉಚಿತ ಶ್ವಾಸಕೋಶ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ.
- **ಕ್ರೈಸ್ಟ್ ಕಾಲೇಜು :** ಸ್ಥಿರ ಭವಿಷ್ಯಕ್ಕಾಗಿ ವಿವಿಧ ಶಾಖೆಗಳಲ್ಲಿನ ನವೀನತೆ ಮತ್ತು ಕಾರ್ಯಪದ್ಧತಿಗಳು ಕುರಿತು ಬಹುಶಾಖಾ ರಾಷ್ಟ್ರೀಯ ಸಮ್ಮೇಳನ, ಉದ್ಘಾಟನೆ : ಬೆಂಗಳೂರು ಕ್ರೈಸ್ಟ್ ವಿಶ್ವವಿದ್ಯಾನಿಲಯ ಕುಲಸಚಿವ ಡಾ. ಅನಿಲ್ ಜೋಸೆಫ್ ಪಿಂಟೋ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ರೆ. ಫಾ. ಜಿಂಟೋ ಜೋಸ್, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10 ರಿಂದ.
- **ಸಂತ ಫಿಲೋಮಿನಾ ಕಾಲೇಜು (ಸ್ವಾಯತ್ತ), ಕನ್ನಡ ವಿಭಾಗ ಮತ್ತು ನವ ಕರ್ನಾಟಕ ಪ್ರಕಾಶನ ಮೈಸೂರು:** ಬೃಹತ್ ಪುಸ್ತಕ ಪ್ರದರ್ಶನ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10 ಗಂಟೆಗೆ.
- **ಶ್ರೀ ಪ್ರಸನ್ನ ನಂಜುಂಡೇಶ್ವರಸ್ವಾಮಿ ದೇವಸ್ಥಾನ, ಧಾರ್ಮಿಕ ದತ್ತಿ ಇಲಾಖೆ:** ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ಶ್ರೀ ಮದ್ದಿವ್ಯರಥಾರೋಹಣ, ಸಂಜೆ ಹಂಸವಾಹನೋತ್ಸವ, ಸ್ಥಳ: ದೇವಸ್ಥಾನದ ಆವರಣ, ಹಳೇ ಸಂತೆಪೇಟೆ.
- **ಸಪಸ ಸಂಗೀತ ವಿದ್ಯಾಲಯ :** ಚಲನಚಿತ್ರಗೀತೆಗಳ ಕಾರ್ಯಾಗಾರ, ಸ್ಥಳ: ಸಪಸ ಸಂಗೀತ ಶಾಲೆ, ಗಾನಭಾರತಿ ಹತ್ತಿರ, ಕುವೆಂಪುನಗರ, ಬೆಳಗ್ಗೆ 11 ಮತ್ತು ಸಂಜೆ 5 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಅಂಚೆ ದನಿ ಪಾರಿವಾಳದಿಂದ ಡ್ರೋನ್‌ವರೆಗೆ ಅಂಚೆ ಪಯಣ – ಬಾನುಲಿ ಸರಣಿ, ಪ್ರಸ್ತುತಿ–ಡಾ. ಅಮ್ಮ ಸಂದ್ರ ಸುರೇಶ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಗೀತಾ ವೈ ಪುಟ್ಟಿ, ವ್ಯಾಖ್ಯಾನ–ಪ್ರೊ. ಮೈಸೂರು ಕೃಷ್ಣಮೂರ್ತಿ, 6.50 ರೈತರಿಗೆ ಸಲಹೆ, 7.15 ಪ್ರಾಯೋಜಿತ ಕಾರ್ಯಕ್ರಮ, ಲಿಡ್ಕರ್ ನಂಬಿಕೆ ನಿರಂತರ, ಪ್ರಾಯೋಜಕರು–ಡಾ. ಬಾಬು ಜಗಜೀವನ್ ರಾಮ್ ಚರ್ಮೋದ್ಯಮಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು, 7.45 ಕನ್ನಡ ಚಿತ್ರಗೀತೆಗಳು, 9.00 ಮನೋನಂದನ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಪ್ರೇರಣಾ ಆಸ್ಪತ್ರೆ ಮತ್ತು ಪ್ರೇರಣಾ ಫರ್ಟಿಲಿಟಿ, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಎನ್. ಶ್ರೀನಾಥ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ–ಜಿ. ದೀಪಿಕಾ ಎಸ್. ಕಾಮತ್, 12.45 ಜನಪದ ಸಂಗೀತ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಪ್ರಿನ್ಸ್ ರಾಮವರ್ಮ, ಹಾಡುಗಾರಿಕೆ–ಸ್ವಾತಿ ತಿರುನಾಳ್ ಅವರ ರಚನೆಗಳು, 4.00 ಮಹಿಳಾರಂಗ–ಸಾಧನಾ ಶಿಖರ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, ಪ್ರಸ್ತುತಿ–ಶಾಂತಾ ಡಿ. ಕಿಣಿ, 5.00 ಕಟ್ಟೋಣ ಬನ್ನಿ ನಿರ್ಮಾಣ ತಾಂತ್ರಿಕತೆಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು–ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ ಇಂಡಿಯಾ, ಮೈಸೂರು ಛಾಪ್ಟರ್, ವಿಷಯ–ಒಡೆದ ಕಟ್ಟಡ ಸಾಮಾಗ್ರಿಗಳ ಮರುಬಳಕೆ ಹಾಗೂ ಉಪಯೋಗಗಳು, ಭಾಗವಹಿಸುತ್ತಾರೆ–ಸುಸ್ಥಿರ ಬದುಕಿನ ಸಲಹೆಗಾರರಾದ ರಮೇಶ್ ಕಿಕ್ಕೇರಿ ಮತ್ತು ಮೈಸೂರಿನ ನ್ಯಾಷನಲ್ ಇನ್ಸಿಟ್ಯೂಟ್ ಆಫ್ ಇಂಜಿನಿಯರಿಂಗ್ ಕಾಲೇಜಿನ ಹಿಂದಿನ ಡೀನ್ ಡಾ. ಜಿ. ಎಚ್. ಸುರೇಶ್, ಪ್ರಸ್ತುತಿ– ಎನ್.ಕೇಶವಮೂರ್ತಿ, 5.30 ಚಿತ್ರಗೀತೆಗಳು, 6.30 ICC T20 ಪುರುಷರ ವಿಶ್ವಕಪ್ ಕ್ರಿಕೆಟ್ ಮೊದಲ ಸೆಮಿಫೈನಲ್ ಪಂದ್ಯಾವಳಿಯ ನೇರಪ್ರಸಾರ

- **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ:** ವಿದ್ವಾನ್ ಖೇಡಾ ವೇದವ್ಯಾಸಚಾರ್ ಅವರಿಂದ ರುಕ್ಮೇಶ ವಿಜಯ ಕುರಿತು ಪ್ರವಚನ, ಸ್ಥಳ: ಮಠದ ಆವರಣ, ಜಯಲಕ್ಷ್ಮೀ ಪುರಂ, ಸಂಜೆ 5 ರಿಂದ.
- **ಪರಂಪರೆ ಸಂಸ್ಥೆ, ಸುಧರ್ಮಾ ಸಂಸ್ಕೃತ ದಿನ ದಿನ ಪತ್ರಿಕೆ:** ಉಪನ್ಯಾಸ ಸರಣಿ, ಸುರಭಿ ಮಹಿಳಾ ಸಮಾಜದಿಂದ ವಾಚನ, ವಿದ್ವಾನ್ ಡಾ.ಹೆಚ್.ವಿ.ನಾಗಾರಾಜರಾವ್ ಅವರಿಂದ ಶ್ರೀ ವೇದಾಂತ ದೇಶಿಕರಿಂದ ವಿರಚಿತ ಶ್ರೀ ಪಾದುಕಾಸಹಸ್ರಂ ಕುರಿತು ಉಪನ್ಯಾಸ. ಸ್ಥಳ: ಶ್ರೀನಿವಾಸ ಪದ್ಮಜಾರಾವ್ ಸಭಾಂಗಣ, ಬಿಎಸ್‌ಎಸ್ ವಿದ್ಯೋದಯ ಸಂಸ್ಥೆ, ರಾಘವೇಂದ್ರ ಸ್ವಾಮಿ ಮಠದ ಪಕ್ಕ, ಕೃಷ್ಣಮೂರ್ತಿಪುರಂ, ಸಂಜೆ 6 ಗಂಟೆಗೆ.
- **ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್ :** ಕಲಾ ಸಪ್ತಮಿ ವಾರದ ಸಂಗೀತ ಕಾರ್ಯಕ್ರಮ, ಉಡುಪಿಯ ವಿದುಷಿ ಅರ್ಚನಾ ಮತ್ತು ಸಮನ್ವಿ ಅವರಿಂದ ದ್ವಂದ್ವ ಗಾಯನ, ವಿದ್ವಾನ್ ಅಮೋಘ್ ನಡಾದೂರ್ –ವಯೋಲಿನ್, ವಿದ್ವಾನ್ ಕೌಶಿಕ್ ಶ್ರೀಧರ್–ಮೃದಂಗ, ವಿದ್ವಾನ್ ಉತ್ತಮ ಶಾಂತರಾಜು–ಘಟಂ, ಸ್ಥಳ: ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್, ವಿಜಯನಗರ, ಸಂಜೆ 6 ರಿಂದ

G9 projects
Designing your Dreams
Vee2 Developers
Poorva Shelters Phase - I
20x30 | 30x40 & 20x40 | 30x50
CLEARENCE OFFER
₹ 4,000/sq.ft
₹ 3,799/ sq.ft
80550-04400

HP
ಇಂಪೀರಿಯಲ್ ಸಿಟಿ
ಮೆಗಾ ರೆಸಿಡೆನ್ಷಿಯಲ್ ವಿಲ್ಲಾ ಟೌನ್‌ಶಿಪ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು
MUDA LIMITS
ಇಲವಾಲ ಸ್ಯಾಟ್‌ಲೈಟ್ ಬಸ್ ನಿಲ್ದಾಣದಿಂದ ಕೇವಲ 4 ಕಿ.ಮೀ
ಬುಕಿಂಗ್ ಪ್ರಾರಂಭವಾಗಿದೆ
ಕೇವಲ ₹749/ ಪ್ರತಿ ಚದರ ಅಡಿ
ಸುಲಭ 4 ಕಂತುಗಳ ಸೌಲಭ್ಯವಿದೆ
30x40 | 30x50 | 40x60 | 50x80
ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು
ಹೈಲ್ಯಾಂಡ್ ಪ್ರಾಪರ್ಟೀಸ್
ಕಾಳಿದಾಸ ರಸ್ತೆ, ವಿಜಯನಗರ 1ನೇ ಹಂತ, ಮೈಸೂರು
88840 71010
90713 86615

JOCKEY
FACTORY SECONDS
UPTO 50% OFF*
*T & C apply
10 am to 8 pm • Open All Days • Master / Visa Card Accepted
INNERWEAR • LEISUREWEAR • ACTIVEWEAR • KIDSWEAR • SOCKS
Venue In Mysore
JLB Road
The Institution Of Engineers (Auditorium Hall), Jhansi Lakshmibai Road - 5
Org. by: Surya Agency Pvt. Ltd.



ಹಸಿರು ನಮ್ಮ ಉಸಿರು

ಮೈಸೂರು ಮಿತ್ರ 46

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ನೈರುತ್ಯ ರೈಲ್ವೆ

ಉದ್ಯೋಗ ಸೂಚನೆ ಸಂಖ್ಯೆ ಸಿಎಂಪಿ/01/ಹಿಎಚ್‌ಜಿ
ದಿನಾಂಕ 26.02.2026

ಮೈಸೂರು ವಿಭಾಗದಲ್ಲಿ ಗುತ್ತಿಗೆ ಆಧಾರದಲ್ಲಿ ವೈದ್ಯರನ್ನು ಗುತ್ತಿಗೆ ವೈದ್ಯಕೀಯ ಅಧಿಕಾರಿಗಳನ್ನು (ಸಿಎಂಪಿಗಳು) ಜಿಡಿಎಂಒಗಳಾಗಿ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಸಂದರ್ಶನಕ್ಕಾಗಿ ಅಧಿಸೂಚನೆ.

ಕೆಲಸದ ವಿವರಣೆ: ನೈರುತ್ಯ ರೈಲ್ವೆ, ಮೈಸೂರು ವಿಭಾಗವು 03 ಮೂರು (01 ಯುಆರ್, 01 ಎಸ್‌ಸಿ, 01 ಇಡಬ್ಲ್ಯುಎಸ್) ಗುತ್ತಿಗೆ ಆಧಾರದಲ್ಲಿ ವೈದ್ಯರನ್ನು ಗುತ್ತಿಗೆ ವೈದ್ಯಕೀಯ ಅಧಿಕಾರಿಗಳನ್ನು (ಸಿಎಂಪಿ) ಜಿಡಿಎಂಒಗಳಾಗಿ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಒಂದು ವರ್ಷದ ಅವಧಿಗೆ ಅಥವಾ ನಿಯಮಿತ ಯುಪಿಎಸ್‌ಸಿ ವೈದ್ಯರನ್ನು ನೇಮಿಸಿಕೊಳ್ಳುವವರೆಗೆ ನೈರುತ್ಯ ರೈಲ್ವೆಯ ಮೈಸೂರು ವಿಭಾಗದಲ್ಲಿ ಯಾವುದು ಮೊದಲು ಬರುತ್ತದೆಯೋ ಆದುವರೆಗೆ ನೇಮಿಸಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಲಾಗುತ್ತಿದೆ.

ಸಂದರ್ಶನದ ಸ್ಥಳ: ಹಿರಿಯ ವಿಭಾಗೀಯ ಸಿಬ್ಬಂದಿ ಅಧಿಕಾರಿಯ ಕಚೇರಿ, ಡಿಆರ್‌ಎಂ ಕಛೇರಿ ಕಟ್ಟಡ, ಇರ್ವಿನ್ ರಸ್ತೆ, ಮೈಸೂರು-570001.

ಸಂದರ್ಶನದ ದಿನಾಂಕ: 11-03-2026 (ಬುಧವಾರ)

ಸಮಯ: ಮುಂಜಾನೆ 10.00 ರಿಂದ ಮಧ್ಯಾಹ್ನ 2.00 ವರೆಗೆ

ಅಧಿಸೂಚನೆಯ ಸಂಪೂರ್ಣ ವಿವರಗಳಿಗಾಗಿ, ಅಭ್ಯರ್ಥಿಗಳು ವೆಬ್‌ಸೈಟ್‌ಗೆ ಲಾಗಿನ್ ಆಗಬಹುದು: www.swr.indianrailways.gov.in
(ನಮ್ಮ ಬಗ್ಗೆ ವಿಭಾಗಗಳು - ಮೈಸೂರು - ಸಿಬ್ಬಂದಿ ಶಾಖೆ - ಅಧಿಸೂಚನೆ/ಆಯ್ಕೆಗಳು)

ಹಿರಿಯ ವಿಭಾಗೀಯ ಸಿಬ್ಬಂದಿ ಅಧಿಕಾರಿ/
ಮೈಸೂರು

ವಿಯುಡಿ/956/ಎಂಪಿ360/ಟಿಆರ್‌ಡಿ/ಎಸ್‌ಡಬ್ಲ್ಯುಆರ್/2025-26

RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ. RailOne ಭಾರತೀಯ ರೈಲ್ವೆಯ ಆಲ್-ಇನ್-ಒನ್ ರೈಲ್ವೆ ಅಪ್ಲಿಕೇಶನ್ ಆಗಿದೆ. ಪ್ರಯಾಣಿಕರು ಕಾಯ್ದಿರಿಸಿದ ಟಿಕೆಟ್‌ಗಳು, ಕಾಯ್ದಿರಿಸದ ಟಿಕೆಟ್‌ಗಳು, ಪ್ಲಾಟ್‌ಫಾರ್ಮ್ ಟಿಕೆಟ್‌ಗಳು ಮತ್ತು ಸೀಸನ್ ಪಾಸ್‌ಗಳನ್ನು ಬುಕ್ ಮಾಡಬಹುದು, PNR ಸ್ಥಿತಿಯನ್ನು ಪರಿಶೀಲಿಸಬಹುದು, ಆಹಾರವನ್ನು ಬುಕ್ ಮಾಡಬಹುದು ಮತ್ತು ಇನ್ನೂ ಅನೇಕ ಸೇವೆಗಳನ್ನು ಪಡೆಯಬಹುದು. RailOne ಅಪ್ಲಿಕೇಶನ್ ಮೂಲಕ ಕಾಯ್ದಿರಿಸದ ಟಿಕೆಟ್‌ಗಳನ್ನು ಬುಕ್ ಮಾಡಲು ಡಿಜಿಟಲ್ ಪಾವತಿಯನ್ನು ಬಳಸಿ ಮತ್ತು 3% ವರೆಗೆ ರಿಯಾಯಿತಿಯನ್ನು ಪಡೆದು ಆನಂದಿಸಿ.

South Western Railway - SWR | SWRRLY | @SWRRAILWAY | @sw_railways

REPCO BANK
Govt. of India Enterprise
(ಭಾರತ ಸರ್ಕಾರದ ಉದ್ಯಮ)
1022, 1ನೇ ಮಹಡಿ, ಜಿ & ಹೆಚ್ ಬ್ಲಾಕ್, ಪಂಚಮಂತ್ರ ರಸ್ತೆ, ಕುವೆಂಪುನಗರ, ಮೈಸೂರು-570023
ವಿಶೇಷ ಠೇವಣಿ ಮೇಲೆ ಆಕರ್ಷಕ ಬಡ್ಡಿದರ
1 ವರ್ಷ - 2 ವರ್ಷಗಳ ಅವಧಿಗೆ
8.00%* p.a (ಹಿರಿಯ ನಾಗರೀಕರಿಗೆ)
7.50%* p.a (ಸಾಮಾನ್ಯರಿಗೆ)
ಎ ಖಾತಾ ಸ್ಥಿರಾಸ್ತಿಗಳ ಮೇಲೆ ಆಕರ್ಷಕ ಬಡ್ಡಿದರದಲ್ಲಿ ಗೃಹಸಾಲ ಹಾಗೂ ಅಡಮಾನ ಸಾಲ ರೂ.5 ಕೋಟಿವರೆಗೆ ದೊರೆಯುತ್ತದೆ
ಚಿನ್ನಾಭರಣಗಳ ಮೇಲೆ ಸಾಲ ಪ್ರತಿಗ್ರಾಂಗೆ ರೂ.10,200/- ಮಾಸಿಕ 94 ಪೈಸೆ ಬಡ್ಡಿ ದರದಲ್ಲಿ ಸಾಲ ದೊರೆಯುತ್ತದೆ.
*ಷರತ್ತುಗಳು ಅನ್ವಯಿಸುತ್ತವೆ. ಸದಸ್ಯ ಗ್ರಾಹಕರಿಗೆ ಮಾತ್ರ
PH : 0821 - 2562211 | Mob : 9449856210

Last Few Slot Available Hurry Up !
HEALTH CITY
Mysore's Best & Biggest Sports & Health Academy
LEARN SWIMMING & BADMINTON
Next to PKV Acharya Choultry, Ring Road, Kanakadasanagar, Mysore
91080 39302 / 98459 39188



1.5 TON 3 STAR SPLIT AIR CONDITIONER — 49% OFF — MRP: ₹54,990 — Offer Price ₹27,999* — OFFER: Stabilizer & Standard Installation Worth ₹3,990
1.5 TON 5 STAR SPLIT AIR CONDITIONER — 40% OFF — MRP: ₹64,890 — Offer Price ₹38,990* — OFFER: Installation Cost Worth ₹599*
55SMART 4K UHD LED — 65% OFF — MRP: ₹78,990 — Offer Price ₹27,990* — OFFER: AIWA AW-SS8120 Worth ₹13,990
55 UHD SMART GOOGLE TV — 39% OFF — MRP: ₹70,690 — Offer Price ₹42,990*
210 LITERS SINGLE DOOR REFRIGERATOR — 43% OFF — Offer Price ₹15,500* — MRP: ₹26,990
233 LITERS FROST FREE REFRIGERATOR — 42% OFF — Offer Price ₹18,499* — MRP: ₹31,990 — OFFER: 10% CASH BACK
563 LITERS SIDE BY SIDE — 62% OFF — Offer Price ₹37,499* — MRP: ₹99,990
DISHWASHER — 27% OFF — Offer Price ₹54,999* — MRP: ₹75,690 — OFFER: With ₹4000 CASH BACK
DISHWASHER — 44% OFF — Offer Price ₹19,990* — MRP: ₹35,890 — OFFER: 10% CASH BACK
9 KG FRONT LOAD — 52% OFF — Offer Price ₹29,490* — MRP: ₹64,990 — OFFER: 10% CASH BACK
REDMI NOTE 15 PRO+5G (8GB=256GB MIRAGE BLE — Offer Price ₹37,999* — MRP: ₹39,999 — OFFER: REDMI WATCH MOVE WORTH ₹1999*
SAMSUNG S26 — Offer Price ₹990* — OFFER: 34,000 UPGRADE OFFER
V70 5G (8GB+256GB) LEMON YELLOW — 19% OFF — Offer Price ₹45,999* — MRP: ₹50,999 — OFFER: SMART WATCH WORTH ₹4,990
LG SAMSUNG Haier SHARP BOSCH Godrej TCL Midea TOSHIBA vivo mi oppo iPhone
SHUBHAM The Electronic Shopee — Auspicious beginnings. Lasting relationships.
JP NAGAR 9174753631 | KUVEMPU NAGAR 91644753609 | NR MOLLA 8861286904 | RAJKUMAR ROAD 9164753626 | VIJAYANAGAR 9164753632 | VV MOLLA 9164753614
*T&C apply

ನಕ್ಕರೆ ಅದೇ ಸ್ವರ್ಗ

ಪ್ರತಿಯೊಂದು ಹೆಣ್ಣಿನಲ್ಲೂ 9 ದೇವಿಯರ ಸ್ವರೂಪ ಅಡಗಿರುತ್ತೆ.
ಮದುವೆ ಆದ ಮೇಲೆ ಯಾವ ಯಾವ ರೂಪ
ಆಕ್ಟಿವೇಟ್ ಆಗುತ್ತೆ ಅನ್ನೋದು ಗಂಡನ ವರ್ತನೆಗೆ
ಅನುಗುಣವಾಗಿ ನಿರ್ಧಾರವಾಗುತ್ತೆ...!

ಮೈಸೂರು ಮಿತ್ರ

ಬುಧವಾರ, ಮಾರ್ಚ್ 4, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಯಾರೋ ಪ್ರೀತಿ ಮಾಡಲೆಂದು ನನ್ನ ವ್ಯಕ್ತಿತ್ವವನ್ನು ಬದಲಾಯಿಸಿಕೊಳ್ಳುವುದಿಲ್ಲ. ನನ್ನನ್ನು ಪ್ರೀತಿಸುವುದು ನಿನ್ನ ಆಯ್ಕೆ. ದ್ವೇಷಿಸುವುದು ನಿನ್ನ ನಿರ್ಧಾರ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಾಲಕ್ಕೆ ತಕ್ಕಂತೆ ನಡೆಯಬೇಕು, ತಾಳಕ್ಕೆ ತಕ್ಕಂತೆ ಕುಣಿಯಬೇಕು.

ನಿಮ್ಮ ಪತ್ರಗಳು

ಹೆಚ್ಚುವರಿ ಸರ್ಕಾರಿ ಬಸ್ಸುಗಳ ಸೌಲಭ್ಯ ಕಲ್ಪಿಸಿ

ಮಾನ್ಯರೆ,

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಬಸ್ಸು ತಂಗುದಾಣದಲ್ಲಿ ನಂಜನಗೂಡು ಹಾಗೂ ಚಾಮರಾಜನಗರ ಮಾರ್ಗ ಹೋಗುವ ಸಾಕಷ್ಟು ವಿದ್ಯಾರ್ಥಿಗಳು ಕಾಲೇಜು ಬಿಟ್ಟ ನಂತರ ಬಸ್ ಬರುವಿಕೆಗಾಗಿ ತುದಿಗಾಲಿನಲ್ಲಿ ಕಾಯುತ್ತಾ ನಿಂತಿರುತ್ತಾರೆ. ಬೆಳಗ್ಗೆ ಹೋಲಿಸಿದರೆ ಸಾಯಂಕಾಲ ಅದುವೇ ಕಾಲೇಜು ಬಿಡುವ ಸಮಯದಲ್ಲಿ ಅಂತೂ ಸರ್ಕಾರಿ ಬಸ್ಸುಗಳು ಬರುವುದು ತೀರ ವಿರಳವಾಗಿದೆ. ಒಂದು ಬಸ್ಸು ಬಂದರೆ ಅದರಿಂದೆ ತುಂಬಾ ಬಸ್ಸುಗಳು ಬರುತ್ತವೆ. ಇಲ್ಲ ಎಂದರೆ ಒಂದು ಬಸ್ಸು ಸಹ ಬರುವುದಿಲ್ಲ. ಸಾಕಷ್ಟು ವಿದ್ಯಾರ್ಥಿಗಳು ಚಾಮರಾಜನಗರ ಹಾಗೂ ನಂಜನಗೂಡು ಸುತ್ತಮುತ್ತಲಿನ ಹಳ್ಳಿಗಳಿಂದ ದಿನನಿತ್ಯ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಾಲೇಜಿಗೆ ಬಸ್‌ನಲ್ಲಿ ಬರುತ್ತಾರೆ. ಕೆಲ ವಿದ್ಯಾರ್ಥಿಗಳಂತೂ ತಮ್ಮ ಊರಿಗೆ ಮತ್ತೊಂದು ಮಾರ್ಗದ ಬಸ್ಸು ಹಿಡಿಯಬೇಕು ಎಂಬ ಮನೋಭಾವನೆಯಿಂದ ಕಾಲೇಜು ಬಿಟ್ಟ ತಕ್ಷಣ, ಎಷ್ಟೊತ್ತಿಗೆ ಮನೆಗೆ ಹಿಂತಿರುಗುತ್ತೇವೆಯೋ ಎಂಬ ಒತ್ತಡದಿಂದಲೇ ಜೆಎಸ್‌ಎಸ್ ಬಸ್ ತಂಗುದಾಣದಲ್ಲಿ ನಿಂತಿರುತ್ತಾರೆ. ಇಂತಹ ಸಮಯದಲ್ಲಿ ಬಸ್ಸುಗಳು ಬರುವುದು ತೀರಾ ವಿರಳವಲ್ಲದೆ, ಕೆಲ ಸರ್ಕಾರಿ ಬಸ್ಸುಗಳು ಖಾಲಿ ಇದ್ದರೂ ನಿಲ್ಲಿಸುವುದಿಲ್ಲ. ಆದ್ದರಿಂದ ಇಂತಹದ್ದನ್ನು ಗಮನಿಸುವುದರ ಜೊತೆಗೆ ಸಂಬಂಧಪಟ್ಟವರು ಕಾಲೇಜು ಬಿಡುವ ಸಮಯದಲ್ಲಿ ಹೆಚ್ಚು ಸರ್ಕಾರಿ ಬಸ್ಸುಗಳ ಸೌಲಭ್ಯವನ್ನು ಕಲ್ಪಿಸಬೇಕೆಂದು ಈ ಮೂಲಕ ಮನವಿ.

–ಸಾಯಿ ಸಂದೇಶ್ ಬಿ.ಎಸ್., ಮೈಸೂರು

ಸರ್ವರ್ ಸಮಸ್ಯೆಯಿಂದ ಅನ್ನದಾತ ಯಾವಾಗ ಮುಕ್ತ?

ಮಾನ್ಯರೆ,

ಕಿಸಾನ್ ಸಮ್ಮಾನ್ ಯೋಜನೆಯಡಿ ಇ–ಕೆವೈಸಿ ಮತ್ತು ಸೆಂಟ್ರಲ್ ಐಡಿ ಪಡೆಯಲು ರೈತರು ಎದುರಿಸುತ್ತಿರುವ ತಾಂತ್ರಿಕ ಸಂಕಷ್ಟಗಳು ದಿನೇ ದಿನೆ ಹೆಚ್ಚಾಗುತಿವೆ. ಡಿಜಿಟಲೀಕರಣವು ಪಾರದರ್ಶಕತೆ ತರಬೇಕೇ ಹೊರತು ಅನ್ನದಾತನಿಗೆ ತಲೆನೋವಾಗಬಾರದು. ಒಬ್ಬ ರೈತ ನಾಲ್ಕು ಬಾರಿ ಒಟಿಪಿ ಪಡೆಯಬೇಕಾದ ಅನಿವಾರ್ಯತೆ ಮತ್ತು ಪದೇ ಪದೆ ಸರ್ವರ್ ಕೈಕೊಡುತ್ತಿರುವುದು ವ್ಯವಸ್ಥೆಯ ವೈಫಲ್ಯ. ಗ್ರಾಮೀಣ ಭಾಗದಲ್ಲಿ ಇಂದಿಗೂ 60% ರಷ್ಟು ನೆಟ್‌ವರ್ಕ್ ಸಮಸ್ಯೆ ಇರುವುದರಿಂದ ಇಂತಹ ಸಂಕೀರ್ಣ ಪ್ರಕ್ರಿಯೆಗಳು ರೈತರನ್ನು ಹೈರಾಣಾಗಿಸುತ್ತಿವೆ. ಸರ್ಕಾರವು ಈ ಕೂಡಲೇ ಸರ್ವರ್ ಸಾಮರ್ಥ್ಯ ಹೆಚ್ಚಿಸಿ ಫೆಬ್ರವರಿ 26ರ ಗಡುವನ್ನು ಕನಿಷ್ಠ 15 ದಿನಗಳ ಕಾಲ ವಿಸ್ತರಿಸಬೇಕು. ಕೇವಲ ಒಟಿಪಿ ಬದಲಿಗೆ ಬಯೋಮೆಟ್ರಿಕ್ ಅಥವಾ ಗ್ರಾಮ ಪಂಚಾಯಿತಿ ಮಟ್ಟದ ವಿಶೇಷ ಶಿಬಿರಗಳ ಮೂಲಕ ದಾಖಲೆ ದೃಢೀಕರಿಸುವ ಪರ್ಯಾಯ ಮಾರ್ಗ ಅನುಸರಿಸುವುದು ಉತ್ತಮ. ತಂತ್ರಜ್ಞಾನವು ಸೌಲಭ್ಯಗಳಿಗೆ ಸೇತುವೆ ಆಗಬೇಕೇ ಹೊರತು ತಡೆಗೋಡೆ ಆಗಬಾರದು ಕೃಷಿ ಇಲಾಖೆ ಈ ಕೂಡಲೇ ಹಸ್ತಕ್ಷೇಪ ಮಾಡಿ ಸುಗಮ ವ್ಯವಸ್ಥೆ ಕಲ್ಪಿಸಲಿ.

–ಡಾ.ಎಚ್.ಕೆ. ವಿಜಯಕುಮಾರ, ಮೈಸೂರು.

ಕೇಜ್ರಿವಾಲ್ ಖುಲಾಸೆ, ಸತ್ಯಕ್ಕೆ ಸಂದ ಜಯ

ಮಾನ್ಯರೆ,

ದೆಹಲಿ ಮಾಜಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಜನಪ್ರಿಯತೆ ಸಹಿಸದ ಕೆಲವರ ಚಿತಾವಣೆಯಿಂದ ದೆಹಲಿ ಅಬಕಾರಿ ನೀತಿ ಸಂಬಂಧಿತ ಭ್ರಷ್ಟಾಚಾರ ಪ್ರಕರಣದಲ್ಲಿ ಸಿಲುಕಿಸಿ ಬಂಧನಕ್ಕೆ ಒಳಪಡಿಸಲಾಗಿತ್ತು. ಸದ್ಯ ನ್ಯಾಯಾಲಯ ವಸ್ತು ನಿಷ್ಠ ಸಾಕ್ಷಿ ಇಲ್ಲ ಎಂದು ಅರವಿಂದ್ ಕೇಜ್ರಿವಾಲ್ ಮತ್ತು ಮನೀಶ್ ಸಿಸೋಡಿಯ ಸೇರಿದಂತೆ ಒಟ್ಟು ಇಪ್ಪತ್ತಮೂರು ಜನರನ್ನು ನಿರಾಪರಾಧಿಗಳು ಎಂದು ಕೇಸ್ ಖುಲಾಸೆಗೊಳಿಸಿದೆ. ಇದು ಸತ್ಯಕ್ಕೆ ಸಂದ ಜಯ. ಅವರ ಕಣ್ಣೀರಿಗೆ ಕಾರಣರಾದವರು ಮುಂದಿನ ದಿನಗಳಲ್ಲಿ ಬೆಲೆ ತೆರಬೇಕಾಗುತ್ತದೆ. ಅವರ ಅಧಿಕಾರ ಸಹಿಸದ ವಿರೋಧ ಪಕ್ಷಗಳು ಚುನಾವಣೆ ಸಂದರ್ಭದಲ್ಲಿ ಚಿತಾವಣೆ ಹೂಡಿ ಜೈಲಿಗಟ್ಟಿದ್ದವು. ಇದರ ಪರಿಣಾಮ ಅಧಿಕಾರ ಕಳೆದುಕೊಳ್ಳಬೇಕಾಯಿತು. ಮುಂದಿನ ದಿನಗಳಲ್ಲಿ ಅದೇ ದೆಹಲಿಯ ಜನತೆ ಅವರಿಗೆ ಅಧಿಕಾರ ಕೊಡುವುದರಲ್ಲಿ ಸಂಶಯವಿಲ್ಲ. ಮುಖ್ಯಮಂತ್ರಿಯಾಗಿ ಜನಪ್ರಿಯ ಆಡಳಿತ ನೀಡಿದ್ದರು. ಆದರೆ ರಾಜಕೀಯ ಕುತಂತ್ರಕ್ಕೆ ಬಲಿಯಾದದ್ದು ವಿಪರ್ಯಾಸ.

–ದಡದಹಳ್ಳಿ ರಮೇಶ್, ಚಂದಕವಾಡಿ ಹೋಬಳಿ, ಚಾಮರಾಜನಗರ ಜಿಲ್ಲೆ

ಇರಾನ್ ಶಾಲೆ ಮಕ್ಕಳ ಮಾರಣ ಹೋಮ

ಮಾನ್ಯರೆ,

ಅಮೆರಿಕ ತನ್ನ ನಿಖರವಾದ ಕೌಶಲ ತಂತ್ರ ಜ್ಞಾನ ಉಪಯೋಗಿಸಿ ಇರಾನ್ ಮುಖಂಡ ಖಮೇನಿಯವರ ವಾಸ ಸ್ಥಾನವನ್ನು ಗುರಿಯಾಗಿಸಿ ಅವರ ಹತ್ಯೆ ಮಾಡಿದೆ. ಇರಾನ್ ಶಾಲೆಯೊಂದರ ಮೇಲೂ ಬಾಂಬ್ ದಾಳಿ ನಡೆದು ಅಲ್ಲಿನ ನೂರಾರು ಮುಗ್ಧ ಮಕ್ಕಳು ಸಾವಿಗೀಡಾಗಿದ್ದಾರೆ. ಆ ಶಾಲೆಯನ್ನೂ ತನ್ನ ಆಧುನಿಕ ತಂತ್ರಜ್ಞಾನದಿಂದ ಪತ್ತೆ ಹಚ್ಚಿ ದಾಳಿ ಮಾಡಲಾಯಿತೇ? ಅಥವಾ ಅದೊಂದು ಅಮೆರಿಕ ಸೈನ್ಯದ ದೊಡ್ಡ ವೈಫಲ್ಯವೇ? ಅದು ಏನೇ ಇರಲಿ ಅದೊಂದು ಅಮಾನವೀಯ ಕೃತ್ಯ.

–ಲಕ್ಷ್ಮಣ್ ಗೊರ್ಲಕಟ್ಟೆ, ಗದ್ದಿಗೆ ರಸ್ತೆ, ಮೈಸೂರು

ಬೆಳೆ ವಿಮೆ ಪರಿಹಾರ: ಸರ್ಕಾರದ ಉತ್ತಮ ನಿರ್ಧಾರ

ಮಾನ್ಯರೆ,

ರಾಜ್ಯ ಸಚಿವ ಸಂಪುಟವು ಬೆಳೆ ವಿಮಾ ಪರಿಹಾರವನ್ನು ಹೋಬಳಿ ಮಟ್ಟದಿಂದ ಗ್ರಾಮ ವ್ಯಾಪ್ತಿಯ ಬೆಳೆ ಹಾನಿಗೆ ವಿಸ್ತರಿಸಿ, 26–27ನೇ ಸಾಲಿನಿಂದ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಭಿಮಾ ಯೋಜನೆಯನ್ನು ಕಂಪ್ಲೀಟ್ ರಿಸ್ಕ್ ಟ್ರಾನ್ಸ್ ಫರ್ ಮೆಕ್ಯಾನಿಸಂ ಮಾದರಿಯಲ್ಲಿ ಅನುಷ್ಠಾನಗೊಳಿಸಲು ತೀರ್ಮಾನಿಸಿರುವುದು ಸ್ವಾಗತಾರ್ಹ. ಇದರಿಂದ ಎಲ್ಲಾ ರೀತಿಯ ಪ್ರಕೃತಿ ವಿಕೋಪಗಳಿಗೂ ರೈತರು ಪರಿಹಾರ ಪಡೆಯಲು ಸಾಧ್ಯವಾಗುತ್ತದೆ.

ಅಲ್ಲದೆ, ಈಗಿನ ಹೋಬಳಿ ಘಟಕ ವ್ಯವಸ್ಥೆಯಿಂದ ವಿಮಾ ಪರಿಹಾರ ದೊರೆಯುವುದಿಲ್ಲ. ಎಂದು ಹೆಚ್ಚಿನ ರೈತರು ವಿಮೆ ಮಾಡಿಸುತ್ತಿರಲಿಲ್ಲ. ಈಗ ಗ್ರಾಮ ವ್ಯಾಪ್ತಿಯನ್ನು ಘಟಕ ಮಾಡಿರುವುದರಿಂದ ಹೆಚ್ಚು ರೈತರಿಗೆ ಅನುಕೂಲವಾಗಲಿದೆ. ಆದರೆ ಭತ್ತ, ಕಬ್ಬು ಮುಂತಾದ ಬೆಳೆಗಳಿಗೆ ವಿಮಾ ಪ್ರಿಮಿಯಂ ದರ ಹೆಚ್ಚು ಇರುವ ಕಾರಣ ರೈತರು ವಿಮೆ ಮಾಡಿಸಲು ಹಿಂದೇಟು ಹೊಡೆಯುತ್ತಾರೆ. ಆದ್ದರಿಂದ ಸರ್ಕಾರ ವಾಣಿಜ್ಯ ಬೆಳೆಗಳಿಗೆ ವಿಮಾ ಪ್ರಿಮಿಯಂ ಅನ್ನು ಕಡಿಮೆ ಮಾಡಬೇಕು. ಇಲ್ಲವೇ ಸರ್ಕಾರ ಸಹಾಯಧನದ ಮೂಲಕ ನೆರವು ನೀಡುವ ವ್ಯವಸ್ಥೆ ಯಾಗಬೇಕು. ಹಾಗೂ ಸರ್ಕಾರ ಮಾನವ ಸಂಪನ್ಮೂಲ ಒದಗಿಸಬೇಕು. ವ್ಯವಸಾಯ ತುಂಬಾ ವೆಚ್ಚದಾಯಕವಾಗಿರುವ ಇಂದಿನ ಸನ್ನಿವೇಶದಲ್ಲಿ ಈ ಮೂಲಕ ಸರ್ಕಾರ ರೈತರ ಬೆನ್ನೆಲುಬಾಗಿ ನಿಲ್ಲಬೇಕು.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಶ್ರೀಮತಿಯವರ ಅಕ್ಷರೋಪಾಯನ

ಕನ್ನಡದಲ್ಲಿ ಮುಕ್ತಕಗಳ ರಚನೆ ಬಹುಕಾಲದಿಂದ ನಡೆದು ಬಂದಿದೆ. ಮುಕ್ತಕ ಎಂದರೆ ಮುತ್ತಿನಂತಹ ಮಾತು. ಸ್ವತಂತ್ರವಾಗಿ ವಿಷಯವನ್ನು ಪ್ರತಿಪಾದಿಸುವ ಪದ್ಯ. ಅದು ಯಾವ ಛಂದಸ್ಸಿನಲ್ಲಾದರೂ ಇರಬಹುದು. ಆದಿಕವಿ ಪಂಪನ ಆದಿಪುರಾಣದಲ್ಲಿರುವ ಕೆಲವು ಪದ್ಯಗಳು ಶ್ರೇಷ್ಠ ಮುಕ್ತಕಗಳು. ಒಂದು ಉದಾಹರಣೆ–

ಭಾಷಾವಿದರ್ ಕವಿತ್ವ ವಿ–
ಶೇಷಜ್ಞರ್ ನಿಕಷರಪ್ಪೊಡಪ್ಪುದು ಸಭೆಯೊಳ್
ಮಾಷಮುಖರುಂತೆ ದೋಷಗ–
ವೇಷಣಪರರಪ್ಪರೆಂದೊಡದು ತೆಗಳಲ್ತೆ॥

(ಸಭೆಯೆಂದರೆ ಅದರಲ್ಲಿ ಭಾಷೆಗಳನ್ನು ಅರಿತವರು. ಕವಿತ್ವದ ವಿಶೇಷ ಏನೆಂದು ತಿಳಿದವರಿರಬೇಕು. ಅಂತಹವರು ಒರೆಗಲ್ಲಾಗಿ ಎಲ್ಲಿರುವರೋ ಅದು ನಿಜವಾದ ಸಭೆ. ಉದ್ದಿನ ಕಾಳಿನಂತಹ ಭಾವಾಭಿವ್ಯಕ್ತಿಯೇ ಇಲ್ಲದ ಮುಖವುಳ್ಳವರು, ದೋಷಗಳನ್ನು ಮಾತ್ರ ಹುಡುಕುವವರು ಇದ್ದರೆ ಅದು ಸಭೆಯಲ್ಲ, ಕೇವಲ ಜನರ ಗುಂಪು) ಎಷ್ಟು ಅರ್ಥವತ್ತಾಗಿದೆ ಈ ಮುಕ್ತಕ!)

ಇದೇ ರೀತಿ ರನ್ನನ ಸಾಹಸಭೀಮವಿಜಯ (ಗದಾಯುದ್ಧ)ದ ಒಂದು ಮುಕ್ತಕ–

ಶ್ರೀಯುತನೊಳುದಾರತ್ ವಾಕ್
ಶ್ರೀಯುತನೊಳಮತ್ಸರತ್ವಮಾಗದುದಾರಂ
ಶ್ರೀಯುತನಮತ್ಸರಂವಾಕ್
ಶ್ರೀಯುತನುಮಾದೊಡೆ ಕೃತಾರ್ಥರಾಗರೆ ಕವಿಗಳ್ ॥

(ಶ್ರೀಮಂತನಲ್ಲಿ ಉದಾರತೆ ಇರುವುದಿಲ್ಲ. ವಾಕ್ ಶ್ರೀಯುತನು ಅಮತ್ಸರನಾಗಿ ಇರುವುದೂ ಇಲ್ಲ. ಉದಾರತೆಯುಳ್ಳ ವ್ಯಕ್ತಿ ಶ್ರೀಮಂತನಾದರೆ, ಮಾತ್ಸರ್ಯವಿಲ್ಲದ ಮನುಷ್ಯನು ವಾಗ್ಮಿಯಾದರೆ ಎಲ್ಲ ಕವಿಗಳೂ ಕೃತಾರ್ಥರಾಗುತ್ತಾರೆ.)

ಇಲ್ಲಿ ರನ್ನನು ನಿತ್ಯಸತ್ಯವನ್ನೇ ನುಡಿದಿದ್ದಾನೆ.

ಇವು ಕಾವ್ಯಗಳಲ್ಲಿ ಬಂದ ಮುಕ್ತಕಗಳಾದರೆ, ಕೆಲವರು ಕವಿಗಳು ಕೇವಲ ಮುಕ್ತಕಗಳನ್ನೇ ಬರೆದು ಪ್ರಖ್ಯಾತರಾಗಿದ್ದಾರೆ. ಸರ್ವಜ್ಞನ ಎಲ್ಲ ಪದ್ಯಗಳು (ಅಥವಾ ವಚನಗಳು) ಮುಕ್ತಕಗಳೇ.

ಸೊಡರೆಣ್ಣೆ ತೀರಿದರೆ ಕೊಡನೆತ್ತಿ ಎರೆವರೇ?
ಕೊಡಬೇಡ ಕೊಡದೆ ಇರಬೇಡ ಧರ್ಮವನು
ಬಿಡಬೇಡವೆಂದ ಸರ್ವಜ್ಞ॥

ಹಣತೆಯಲ್ಲಿ ದೀಪ ಉರಿಯುವಾಗ ಎಣ್ಣೆ ಮುಗಿದಾಗ ಚಮಚದಿಂದ ಎಷ್ಟು ಬೇಕೋ ಅಷ್ಟು ಮಾತ್ರ ಎಣ್ಣೆ ಹಾಕಬೇಕು. ಕೊಡದಿಂದ ಎಣ್ಣೆ ಸುರಿಯಬಾರದು. ಹಾಗೆ ಸತ್ಪಾತ್ರರಿಗೆ ದಾನ ಮಾಡಬೇಕು. ಅತಿ ಯಾವುದರಲ್ಲೂ ಸರಿಯಲ್ಲ ಎಂದು ಈ ಮುಕ್ತಕದ ಅಭಿಪ್ರಾಯ. ಹೀಗೆ ನೂರಾರು ನೀತಿಗಳನ್ನು ಬೋಧಿಸಿದವನು ಸರ್ವಜ್ಞ.

ಇಪ್ಪತ್ತನೆಯ ಶತಮಾನದಲ್ಲಿ ದಾರ್ಶನಿಕ ಕವಿ ಡಿವಿಜಿ ಮಂಕುತಿಮ್ಮನ ಕಗ್ಗವನ್ನು ಬರೆದು ಮುಕ್ತಕ ಸಾಹಿತ್ಯಕ್ಕೆ ನವಜೀವನವನ್ನು ತುಂಬಿದರು. ಅದರಿಂದ ಪ್ರೇರಣೆಯನ್ನು ಪಡೆದು ನೂರಾರು ಕವಿಗಳು ಬೇರೆ ಬೇರೆ ಅಂಕಿತಗಳನ್ನು ಬಳಸಿ ಅನೇಕ ಸಹಸ್ರ ಮುಕ್ತಕಗಳನ್ನು ರಚಿಸಿ ಕನ್ನಡದ ಶ್ರೀಮಂತಿಕೆಯನ್ನು ಹೆಚ್ಚಿಸುತ್ತಿದ್ದಾರೆ. ಮುಕ್ತಕಗಳ ರಚನೆಯಲ್ಲಿ ಅನೇಕ ಕವಯಿತ್ರಿಯರೂ ಭಾಗವಹಿಸುತ್ತಿರುವುದು ಶುಭ ಸೂಚನೆ.

ಅಂತಹ ಒಂದು ಸುಂದರ ಮುಕ್ತಕ ಸಂಗ್ರಹ ಅಕ್ಷರೋಪಾಯನ. ಇದನ್ನು ರಚಿಸಿರುವವರು ಕೆ.ಟಿ. ಶ್ರೀಮತಿ ಅವರು. ಅಧ್ಯಾಪಕಿಯಾಗಿ ವಿದ್ಯಾದಾನವನ್ನು ಮಾಡುತ್ತಿರುವ ಶ್ರೀಮತಿಯವರು ಬರೆಯುವ, ಬರೆಸುವ, ಬರಹಗಾರರನ್ನು ಹರಸುವ ಗುಣವನ್ನೂ ಹೊಂದಿದ್ದಾರೆ. ಕವನ ಸಂಗ್ರಹವನ್ನೂ, ಸಣ್ಣ ಕಥೆಗಳನ್ನೂ, ಹನಿಗವನ–ಮಿನಿ ಗವನಗಳನ್ನೂ ಪ್ರಕಟಿಸಿ ಕನ್ನಡಿಗರ ಗಮನವನ್ನು ಸೆಳೆದಿದ್ದಾರೆ. ಮೊದಲ ಮಳೆ, ಮುಕ್ತಕ ಮಲ್ಲಿಗೆ, ಸಮಸ್ಯಾಪೂರ್ಣ ಮುಕ್ತಕ, ಮಾಯಗಾರನ ಮುಕ್ತಕಗಳು–ಎಂಬ ಕೃತಿಗಳನ್ನು ರಚಿಸಿ ಪ್ರಕಟಿಸಿರುವುದಲ್ಲದೆ ನೂರಾರು ಮನಕೆ ನೂರೈವತ್ತು ಮೆಟ್ಟಿಲು ಮುಂತಾದ ಗ್ರಂಥಗಳನ್ನು ಸಂಪಾದಿಸಿದ್ದಾರೆ. **ಅಕ್ಷರೋಪಾಯನದಲ್ಲಿ** ಅವರವೇ ಆದ ನಾನೂರು (400) ಮುಕ್ತಕ ಪದ್ಯಗಳಿವೆ. ಈ ಪದ್ಯಗಳಿಗೆ ಅವರಿಟ್ಟಿರುವ **ಅಂಕಿತ ಗುರುವೆ ಪರದೈವ**. ಗುರುವಿನಲ್ಲಿ ಅವರ ಭಕ್ತಿಗೆ, ಕೃತಜ್ಞತೆಗೆ, ಆದರಾತಿಶಯಕ್ಕೆ ಅಂಕಿತವೆ ಸಾಕ್ಷಿಯಾಗಿದೆ.

ಡಿವಿಜಿಯವರಂತೆ ಈ ಕವಯಿತ್ರಿಯೂ ಐದು ಮಾತ್ರೆಗಳ ಗಣಗಳನ್ನು ಬಳಸಿ, ಎರಡನೆಯ ಮತ್ತು ನಾಲ್ಕನೆಯ ಸಾಲುಗಳಲ್ಲಿ ಮೂರು ಪಂಚಮಾತ್ರಾಗಣಗಳಾದ ಮೇಲೆ ಮೂರು ಮಾತ್ರೆಯ ಗಣವೊಂದನ್ನು ಸೇರಿಸಿದ್ದಾರೆ. ದ್ವಿತೀಯಾಕ್ಷರ ಪ್ರಾಸವನ್ನು ನಿಯತವಾಗಿ ಕಾಪಾಡಿದ್ದಾರೆ. ಉದಾಹರಣೆ–

ಸರಸದಲಿ ಸಂಗೀತ ವಿರಸದಲಿ ಸಾಂಗತ್ಯ
ಪರಿಹರಿಸಿ ಪೊರೆಯುತ್ತಾ ಪರಿಪಕ್ವಗೊಳಿಸಿ।
ಹರಿಚರಣನಂಬಿಕೆಯ ವರವಾಗಿ ಎನಗಿತ್ತ
ಪರಮದೇವನು ಈತ ಗುರುವೆಪರದೈವ॥

ಹೀಗೆ 20–18–20–18 ಮಾತ್ರಾಲಯದಲ್ಲಿ ಸಾಗುವ ಪದ್ಯಗಳು ಹಾಡಿಗೆ ಹೊಂದಿಕೊಂಡು ಶ್ರವಣಸುಖವನ್ನು ಕೇಳುಗರಿಗೆ ನೀಡುತ್ತವೆ. ಭಗವಂತನ ಪಾದಗಳಲ್ಲಿ ಲೇಖಕಿಯ ನಂಬಿಕೆ ಗುರುವು ಕೊಟ್ಟ ವರ ಎಂಬ ಭಾವನೆ ಚೆನ್ನಾಗಿದೆ. ಗಣಪತಿಯ ಪ್ರಾರ್ಥನೆಯೂ ಕೆಲವು ಪದ್ಯಗಳಲ್ಲಿದೆ.

ಗಣಪ ನಿನ್ನ ಚರಣಗಳ ಚಣಬಿಡದೆ ನುತಿಸುವೆನು
ಕಣಕಣದಿ ಶಕುತಿಯನು ತುಂಬಿ ಬರೆಸೆಂದು
ಗಣದೊಡೆಯ ನೀನಾಗಿ ತೃಣಸಮದ ನರರನ್ನು
ಹಣಿಯದಿರು ಶಿಶುವೆಂದು ಗುರುವೆ ಪರದೈವ ॥

ಗಣಪತಿ ಸಮಗ್ರ ಮಹಾಭಾರತವನ್ನು ವ್ಯಾಸಾದೇಶದಿಂದ ಬರೆದನಂತೆ. ಈ ಕೃತಿಯನ್ನು ಬರೆಸಲು ಅವನು ಸಮರ್ಥ ಎಂಬ ಧ್ವನಿ ಇಲ್ಲಿದ್ದು ಚಮತ್ಕಾರಕ್ಕೆ ಕಾರಣವಾಗಿದೆ.

ಪ್ರಪಂಚದಲ್ಲಿ ಗಳಿಸಿದ ಆಸ್ತಿಗಳನ್ನು ಕಾಪಾಡಲು ಕಾವಲು ಕಾಯುತ್ತ ಕಾಲವನ್ನು ಕಳೆಯುವವರೇ ಕಂಡು ಬರುತ್ತಾರೆ ಎಲ್ಲೆಲ್ಲೂ. ಆದರೆ ವಿದ್ಯೆಯನ್ನು ಗಳಿಸಿದವರು ಹಾಗೆ ಕಾವಲು ಕಾಯುವುದು ಬೇಕಿಲ್ಲ. ಏಕೆಂದರೆ ಅದು ಯಾರೂ ಕದಿಯಲಾಗದ ಆಸ್ತಿ. ಈ ತತ್ತ್ವವನ್ನು ಶ್ರೀಮತಿ ಅವರು ತಿಳಿಸುವ ಪರಿ ಹೀಗಿದೆ –

ನಾವು ಗಳಿಸಿದರಿಲ್ಲಿ ಅಪರಿಮಿತ ಆಸ್ತಿಗಳ
ಕಾವಲಿಗೆ ನಿಲಬೇಕು ಜೋಪಾನವಿರಿಸೆ.
ಸಾವಧಾನದಿ ಕಲಿತ ವಿದ್ಯೆ ವಿನಯಗಳೆಲ್ಲ
ತಾವಾಗೆ ರಕ್ಷಿಪವು ಗುರುವೆ ಪರದೈವ ॥

ವಿದ್ಯೆಯನ್ನು ನಾವು ರಕ್ಷಿಸಿದರೆ ಅದು ನಮ್ಮನ್ನು ರಕ್ಷಿಸುತ್ತದೆ. 'ವಿದ್ಯಾ ರಕ್ಷತಿ ರಕ್ಷಿತಾ' ಎಂಬುದನ್ನಿಲ್ಲಿ ಕವಯಿತ್ರಿ ಸುಂದರವಾಗಿ ನಿರೂಪಿಸಿದ್ದಾರೆ. ಜಗತ್ತಿನಲ್ಲಿ ಎಲ್ಲವನ್ನೂ ನಮ್ಮ ಅನುಭವದಿಂದಲೇ ನಿರ್ಧರಿಸಲಾಗದು. ಅನುಭವಾತೀತವಾದ ಎಷ್ಟೋ ವಿಷಯಗಳು ಪ್ರಪಂಚದಲ್ಲಿವೆ ಎಂಬ ಭಾವದಿಂದ ಲೇಖಕಿಯು ಒಂದು ಮುಕ್ತಕವನ್ನು ಕೊಟ್ಟಿದ್ದಾರೆ.

ಅನುಭವಕೆ ನಿಲುಕದಿಹ ಬಹಳಷ್ಟು ಅರಿವಿಹುದು
ಅನುಕಂಪ ಕರುಣೆಗಳು ಅನುವಾಗಿ ನಿಲಲು
ಅನವರತ ಸಿದ್ಧಿಯನು ಅವಿರತದ ದುಡಿಮೆಯಿಂ
ಅನುಭವಿಸು ನೀನೆನುವ ಗುರುವೆ ಪರದೈವ॥

ಎಷ್ಟೋ ವಿಷಯದ ಅರಿವು ನಮಗುಂಟು. ಆದರೆ ಅದು ನಮ್ಮ ಅನುಭವಕ್ಕೆ ಎಟುಕುವುದಿಲ್ಲ. ಪಾಪ ಕಾರ್ಯಗಳಿಗೆ ಕೆಟ್ಟ ಫಲ, ಪುಣ್ಯಕರ್ಮಗಳಿಗೆ ಒಳ್ಳೆಯ ಫಲ ಎಂದುಕೊಳ್ಳುತ್ತೇವೆ. ಆದರೆ ಕೆಲವು ಸಂದರ್ಭಗಳಲ್ಲಿ ವಿಪರೀತ ಫಲವನ್ನು ಕಾಣುತ್ತೇವೆ. ನಾವು ಪುನರ್ಜನ್ಮವನ್ನು ನಂಬುತ್ತೇವೆ. ಆದರೆ ಅದರ ಅನುಭವವನ್ನು ತೋರಿಸಲು ನಮಗಾಗದು. ಅನೇಕ ಮನುಷ್ಯರಲ್ಲಿ ಅನುಕಂಪೆಯನ್ನು, ಪ್ರಾಣಿಗಳಲ್ಲಿ ಕರುಣೆಯನ್ನು ತೋರಿಸುತ್ತೇವೆ. ಅದು ತಾರ್ಕಿಕವಾಗಿ ಹೇಗೆ ಸರಿ ಎಂಬುದು ಅನುಭವದ ಪರಿಧಿಯಲ್ಲಿಲ್ಲ. ಅವಿರತವಾದ, ಎಂದರೆ ಸತತವಾದ ದುಡಿಮೆಯಿಂದ ಸಿದ್ಧಿಯನ್ನು ನೀನು ಅನುಭವಿಸು ಎಂದು ಬೋಧಿಸುವ ಗುರುವೇ ನಮ್ಮ ಪರದೈವ ಎಂದು ಈ ಮುಕ್ತಕದ ವ್ಯಾಖ್ಯಾನವನ್ನು ಮಾಡಬಹುದು.

ಆಧುನಿಕ ಕನ್ನಡದಲ್ಲಿ ಬೇರೆ ಬೇರೆ ಭಾಷೆಗಳ ಎಷ್ಟೋ ಪದಗಳು ಬಂದು ಸೇರಿಕೊಂಡು ಕನ್ನಡದ ಪದಗಳೇ ಆಗಿಬಿಟ್ಟಿವೆ. ಅದಕ್ಕೆ ಉದಾಹರಣೆ ಶ್ರೀಮತಿಯವರ ಒಂದು ಮುಕ್ತಕದಲ್ಲಿ –

ಪಾದಚಾರಿಯು ನಾನು ಪಥದರ್ಶಕನು ನೀನು
ಹೋದಲ್ಲಿ ಬಂದಲ್ಲಿ ಮಾರ್ಗವನು ತೋರಿ
ಬಾದರಾಯಣ ಬಂಧ ಬೆಳೆಸುತ್ತ ಹರಸಿದನು
ಜಾದುಗರ ತಾನಾಗಿ ಗುರುವೆ ಪರದೈವ॥

ಶಿಷ್ಯನು ಗುರುವಿಗೆ ಹೇಳುವ ಮಾತು–ನಾನು ಪಾದಚಾರಿ. ಎಲ್ಲಿಗೆ ಹೋಗಬೇಕು, ಯಾವ ದಾರಿಯಲ್ಲಿ ಹೋಗಬೇಕೆಂಬುದು ನನಗೆ ತಿಳಿಯದು. ನೀನು ಪಥದರ್ಶಕ ದಾರಿಯನ್ನು ಗುರಿಯನ್ನು ತೋರಿಸುವವನು. ಬಾದರಾಯಣ ಬಂಧವನ್ನು ಬೆಳೆಸುತ್ತ ಹರಸಿದವನು ಗುರು. ಬಾದರಾಯಣ ಸಂಬಂಧ ಎಂದರೇನು?

ಸಂಸ್ಕೃತದಲ್ಲಿ ಒಂದು ಶ್ಲೋಕವಿದೆ–

ಯುಷ್ಮಾಕಂ ಬದರೀವೃಕ್ಷಃ ಅಸ್ಮಾಕಂ ಬಾದರಂ ಯುಗಮ್ ।
ಬಾದರಾಯಣ ಸಂಬಂಧಃ ಯೂಯಂ ಯೂಯಂ
ವಯಂ ವಯಮ್ ॥

ಒಂದು ಹಳ್ಳಿಗೆ ಒಂದು ಗಾಡಿ ಬಂದಿತು. ಗಾಡಿಯವರು ಇಳಿದು ಮುಂದಿದ್ದ ಮನೆಯ ಜನರನ್ನು ನೆಂಟರಂತೆ ಕುಶಲ ಪ್ರಶ್ನೆಗಳನ್ನು ಕೇಳಿದರು. ಇವರು ಹತ್ತಿರದ ಬಂಧುಗಳು ಎಂದುಕೊಂಡು ಊಟ–ಉಪಚಾರಗಳನ್ನು ಮಾಡಿ ಸತ್ಕರಿಸಿದರು. ಆಮೇಲೆ ಗಾಡಿಯವರು ಹೊರಟು ನಿಂತಾಗ ಮನೆಯವರು ಕೇಳಿದರು. 'ನೀವು ನಮಗೆ ಹೇಗೆ ಸಂಬಂಧಿಗಳೆಂದೇ ಸ್ಪಷ್ಟವಾಗಿ ತಿಳಿಯಲಿಲ್ಲ. ಬಿಡಿಸಿ ಹೇಳುತ್ತೀರಾ?' ಎಂದು. ಆಗ ಗಾಡಿಯವರು ಮೇಲಿನ ಶ್ಲೋಕವನ್ನು ಹೇಳಿದರಂತೆ. ಅದರ ಅರ್ಥವೇನೆಂದರೆ 'ನಿಮ್ಮ ಮನೆಯ ಅಂಗಳ ದಲ್ಲಿ ಬದರೀ (ಎಲಸಿ) ಮರವಿದೆ. ನಮ್ಮ ಗಾಡಿಯ ನೊಗವೂ ಎಲಚಿಮರದ್ದು. ಆದ್ದರಿಂದ ನಮ್ಮಿಬ್ಬರಿಗೂ ಬಾದರಾಯಣ ಸಂಬಂಧ. ಮನೆಯವರು ಪೆಚ್ಚಾಗಿ 'ಸರಿ, ನೀವು ನೀವೇ, ನಾವು ನಾವೇ'– ಹೋಗಿಬನ್ನಿ' ಎಂದರಂತೆ. ಅಷ್ಟು ದೂರದ ಸಂಬಂಧವಾದರೂ ಗುರು ಶಿಷ್ಯನಿಗೆ ಆತ್ಮೀಯತೆಯಿಂದ ಹರಸುತ್ತಾನೆ ಎಂಬುದು. ಇಲ್ಲಿ ಸೂಚಿತವಾಗಿದೆ. ಬಾದರಾಯಣ ಎಂದು ವ್ಯಾಸಮಹರ್ಷಿಯ ಒಂದು ಹೆಸರು.

ಈ ಪದ್ಯದಲ್ಲಿರುವ ಇನ್ನೊಂದು ವಿಶಿಷ್ಟ ಪದ ಜಾದುಗರ್. ಇದು ಹಿಂದಿಯಿಂದ ಕನ್ನಡಕ್ಕೆ ಬಂದ ಪದ. ಜಾದೂಗರ್ ಎಂದರೆ ಮೆಜಿಶಿಯನ್. ಮ್ಯಾಜಿಕ್ ಮಾಡುವವನು. ಈ ಜಾದುಗರ್ ಎಂಬ ಪದ ಹಿಂದಿಗೆ ಬಂದಿದ್ದು ಸಂಸ್ಕೃತದಿಂದ. ಯಾತು ಎಂದರೆ ಮಾಯೆ. ಅಲೌಕಿಕವಾಗಿ ವಸ್ತುಗಳನ್ನು ಸೃಷ್ಟಿಸುವ ಶಕ್ತಿ. ಸಂಸ್ಕೃತದ ಮಾತುಕಾರ ಎಂಬುದು ಹಿಂದಿಯಲ್ಲಿ ಜಾದುಗರ್ ಆಯಿತು.

ಶಿರಸಿಯ ಮುಕ್ತಕವಿ ಕೃಷ್ಣ ಪದಕಿ ಅವರು ಶ್ರೀಮತಿ ಅವರ ಅಕ್ಷರೋಪಾಸನೆಯನ್ನು ಮೆಚ್ಚಿ ಮುಕ್ತಕದಿಂದಲೇ ಶುಭಾಶಂಸನೆ ಮಾಡಿದ್ದಾರೆ.

ಸರಸತಿಯ ವರಪುತ್ರಿ ಮಾತೆ ಸಿರಿಮತಿದೇವಿ
ಹರಿಸಿಹಳು ಕನ್ನಡದಿ ಕಾವ್ಯರಸಧಾರೆ
ಪರಿಣತಿಯ ಹೊಂದಿಹಳು ಹಲವಾರು ವಿಧಗಳಲಿ
ಕರುನಾಡ ಕಣ್ಮಣಿಯು ಸುಂದಕುವರ.
ಅಂತೆಯೇ ನಾವೂ ಹೀಗೆ ಆಶಿಸೋಣ–
ಕನ್ನಡದಿ ಮುಕ್ತಕದ ಸಾಹಿತ್ಯ ವರ್ಧಿಸಲಿ
ಚೆನ್ನುಡಿಯ ಸೌಂದರ್ಯ ಬೆಳೆಯುತಿರಲಿ
ರನ್ನ ಪೊನ್ನರು ಮತ್ತೆ ಕಾವ್ಯಗಳ ಬರೆದಿಲ್ಲಿ
ಮನ್ನಣೆಯ ಗಳಿಸಿ ತಾವ್ ಮೆರೆಯುತಿರಲಿ.

ಸಂಗೀತ ಸಾಮ್ರಾಜ್ಞಿ ಗಂಗೂಬಾಯಿ ಹಾನಗಲ್

ಗಂಗೂಬಾಯಿ ಅವರ ಹಾಡುಗಾರಿಕೆಯನ್ನು ಕೇಳುವುದೆಂದರೆ ಪವಿತ್ರವಾದ ನದಿಯೊಂದರಲ್ಲಿ ಪುಣ್ಯಸ್ನಾನ ಮಾಡಿದಂತೆ.

ಹಿಂದೂಸ್ತಾನಿ ಸಂಗೀತ ದಿಗ್ಗಜ ಡಾ. ಗಂಗೂಬಾಯಿ ಹಾನಗಲ್ ಕುರಿತಂತೆ ಮತ್ತೊಬ್ಬ ಸುವಿಖ್ಯಾತ ಸಂಗೀತಗಾರ ಡಾ.ರಾಜೀವ್ ತಾರಾನಾಥ್ ಹೇಳಿರುವ ಈ ಮಾತುಗಳು ಅಕ್ಷರಕ್ಷರಶಃ ಸತ್ಯ! ನಮ್ಮ ನಡುವಿನ ಜೀವಂತ ದಂತಕಥೆಯಂತಿದ್ದ ಹಿಂದೂಸ್ತಾನಿ ಗಾಯಕಿ, ಗಾಯನ ಗಂಗೆ ಡಾ.ಗಂಗೂಬಾಯಿ ಹಾನಗಲ್ ಅವರು ತಮ್ಮ ಹೆಸರಿನಲ್ಲಿ ಗಂಗೆಯನ್ನು ಕಟ್ಟಿಕೊಂಡಿರುವಂತೆಯೇ ಅದಕ್ಕೆ ಅನ್ವರ್ಥವಾಗಿ ತಮ್ಮ ಬದುಕಿನುದ್ದಕ್ಕೂ ಸಂಗೀತಗಂಗೆಯನ್ನು ರಾಜ್ಯಾದ್ಯಂತ ಮಾತ್ರವಲ್ಲದೆ ರಾಷ್ಟ್ರಾದ್ಯಂತ, ವಿಶ್ವಾದ್ಯಂತ ಎಂದೂ ನಿಲ್ಲದ ನದಿಯಾಗಿ ಹರಿಸಿದವರು. ಇಲ್ಲಿ ಮಿಂದೆದ್ದು ಪಾವನವಾದವರೆಷ್ಟೋ! ಹಾಗೆಯೇ ಈ ಹಾದಿಯಲ್ಲಿ ಗೌರೀಶಿಖರವಾಗಿ ಬೆಳೆದು ಮಹಾ ಗಾಯಕಿಯಾಗಿದ್ದ ಇವರು ಸಂಗೀತ ಲೋಕದ ವಿಸ್ಮಯವಾಗಿ ಹಿಂದೂಸ್ತಾನಿ ಸಂಗೀತವನ್ನು ಅದರ ಎಲ್ಲ ಸೊಗಸು ಸೌಂದರ್ಯದ ಚೆಲುವಿನ ಚೆಂದದೊಡನೆ ಜಗದ್ವಿಖ್ಯಾತವಾಗಿ ಜನಪ್ರಿಯಗೊಳಿಸುವ ಕೆಲಸವನ್ನೂ ಮಾಡಿದ್ದರು. ಮಾತ್ರವಲ್ಲ ಹಿಂದೂಸ್ತಾನಿ ಸಂಗೀತ ಎಂದರೆ ಏನು? ಎತ್ತ? ಅದು ಹೇಗಿರಬೇಕು? ಎನ್ನುವುದನ್ನೂ ತಮ್ಮ ಅಪ್ರತಿಮ ಸಾಧನೆಯ ಮೂಲಕವೇ ತೋರಿಸಿಕೊಟ್ಟು ಹಿಂದೂಸ್ತಾನಿ ಸಂಗೀತಕ್ಕೊಂದು ಘನತೆ ತಂದುಕೊಟ್ಟಿದ್ದರು.

ಹಿಂದೂಸ್ತಾನಿ ಶಾಸ್ತ್ರೀಯ ಗಾಯನ ಪ್ರಪಂಚದಲ್ಲಿ ಭಾರತ ಕಂಡ ಅಸಾಧಾರಣ ಪ್ರತಿಭಾ ಸಿರಿ, ಸ್ವರಸಾಮ್ರಾಜ್ಞೆ, ಪದ್ಮಭೂಷಣ ಡಾ.ಗಂಗೂಬಾಯಿ ಹಾನಗಲ್ ಅವರು ಕರ್ನಾಟಕದ ಸಂಗೀತ ನಿಧಿಯಾಗಿ 1913ರ ಮಾರ್ಚ್ 5ರಂದು ಧಾರವಾಡದಲ್ಲಿ ಜನಿಸಿದರು. ಬಾಲ್ಯದಿಂದಲೂ ಸಂಗೀತಾಸಕ್ತರಾದ ಇವರು ಸ್ವರಗಳೊಡನೆ ಆಟವಾಡುತ್ತಾ ರಾಗಗಳೊಡನೆ ಬೆಳೆದರು. ತಾಯಿ ಅಂಬಾಬಾಯಿ ಅವರಿಂದ ಸಂಗೀತ ಸಾಮ್ರಾಜ್ಯಕ್ಕೆ ಹೆಜ್ಜೆಯಿರಿಸಿ, ಪ್ರಾರಂಭದಲ್ಲಿ ಗುರುಗಳಾದ ಕೃಷ್ಣಾಚಾರಿ ಹುಲ್ಗೂರು ಮತ್ತು ಸವಾಯಿಗಂಧರ್ವ ಅವರ ಮಾರ್ಗದರ್ಶನದಲ್ಲಿ ಹಿಂದೂಸ್ತಾನಿ ಸಂಗೀತ ಅಭ್ಯಾಸ ಮಾಡಿ ನಂತರ ಉಸ್ತಾದ್ ಅಬ್ದುಲ್ ಕರೀಂಖಾನ್ ಅವರ ಪಟ್ಟಶಿಷ್ಯೆಯಾಗಿ ಕಿರಾನಾ ಘರಾನಾ ಶೈಲಿಯಲ್ಲಿ ಅತ್ಯದ್ಭುತ ಸಾಧನೆ ಮಾಡಿ, ಸಂಗೀತ ಸಾಮ್ರಾಜ್ಞಿಯಾಗಿ ರೂಪುಗೊಂಡವರು. ಇವರ ತಂದೆ ಚಿಕ್ಕೂರಾವ್ ನಾಡಗೀರರು.



1924ರಲ್ಲಿ ಬೆಳಗಾವಿಯಲ್ಲಿ ನಡೆದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಮಹಾಧಿವೇಶನದಲ್ಲಿ ಮಹಾತ್ಮ ಗಾಂಧೀಜಿಯವರ ಸಮ್ಮುಖದಲ್ಲಿ ಸ್ವಾಗತಗೀತೆ ಹಾಡಿ ಬಾಪು ಅವರಿಂದಲೇ ಭೇಷ್ ಎನಿಸಿಕೊಂಡಿದ್ದ ಹಿರಿಮೆ ಗಂಗೂಬಾಯಿ ಅವರದ್ದು. ಕಳೆದ ಏಳೂವರೆ ದಶಕಗಳಿಂದಲೂ ಜಗದ ಉದ್ದಗಲಕ್ಕೂ ತಮ್ಮ ಸ್ವರ ಮಾಧುರ್ಯ ಹರಡಿ ಹಾಡುತ್ತಾ ಕೋಟಿ ಕೋಟಿ ಸಂಗೀತ ಪ್ರೇಮಿಗಳ ಹೃನ್ಮನಗಳನ್ನು ಸೂರೆಗೊಳ್ಳುತ್ತಲೇ ಬಂದಿರುವ ಇವರು 1932ರಲ್ಲಿ ಪ್ರತಿಷ್ಠಿತ ಹೆಚ್.ಎಂ.ವಿ. ಧ್ವನಿ ಸುರುಳಿಗಾಗಿ ಹಾಡಿ, 1933ರಲ್ಲಿ ಮುಂಬೈನ ಆಕಾಶವಾಣಿಯಲ್ಲಿ ಹಾಡಿ ವಿಶೇಷವಾಗಿ ಹೆಸರು ಮಾಡಿದರು. 1952ರಲ್ಲಿ ಪ್ರಧಾನಿ ಜವಾಹರಲಾಲ್ ನೆಹರೂ ಅವರ ಎದುರು ಜಯಪುರದ ಅರಮನೆಯಲ್ಲಿ ಹಾಡಿದ ಇವರು ಅಪಾರ ಜನಮೆಚ್ಚುಗೆಗೆ ಪಾತ್ರರಾಗಿದ್ದರು. ಹಾಗೆಯೇ ತಮ್ಮ 95ನೇ ವಯಸ್ಸಿನಲ್ಲೂ 20ರ ಹರೆಯದವರೂ ನಾಚುವಂತೆ 2006ರಲ್ಲಿ ಸತತ 45 ನಿಮಿಷಗಳ ಕಾಲ ಹಾಡಿ ಕೇಳುಗರನ್ನು ಮೂಕವಿಸ್ಮಿತಗೊಳಿಸಿದ್ದ ಇವರು ಮುಂದಿನ ಪೀಳಿಗೆಯ ಸಂಗೀತಗಾರರಿಗೆ ಊಹಿಸಲಿಕ್ಕೂ ಆಗದ ವಿಸ್ಮಯ ಸಂಗೀತ ಸಾಗರ!

ಸಾಂಸ್ಕೃತಿಕ ರಾಯಭಾರಿಯಾಗಿ ಇಂಗ್ಲೆಂಡ್, ಅಮೆರಿಕ, ಜರ್ಮನಿ, ಕೆನಡ, ಫ್ರಾನ್ಸ್, ಪಾಕಿಸ್ತಾನ ಮುಂತಾದ ಹಲವಾರು ದೇಶಗಳಲ್ಲಿ ಪ್ರವಾಸ ಕೈಗೊಂಡು ತಮ್ಮ ಗಾನಗುಂಗೆಯಿಂದ ಸಂಗೀತ ಪ್ರೇಮಿಗಳನ್ನು ಸಂತಸದಿಂದ ತೋಯ್ದುಹೋಗುವಂತೆ ಮಾಡಿದ್ದ ಗಂಗೂಬಾಯಿ ಅವರು ಭಾರತದ ಒಂಭತ್ತು ಪ್ರಧಾನಿಗಳಿಂದ ಮತ್ತು ಐವರು ರಾಷ್ಟ್ರಪತಿಗಳಿಂದ ಗೌರವಿಸಲ್ಪಟ್ಟಿದ್ದರೆಂದರೆ ಇದೇನೂ ಸಾಮಾನ್ಯ ವಿಷಯವಲ್ಲ. ಸುವರ್ಣಾಕ್ಷರಗಳಲ್ಲಿ ಬರೆದು ವಜ್ರದ ಚೌಕಟ್ಟಿನಲ್ಲಿ ದಾಖಲಿಸುವಂತಾದ್ದು!

ಬಡ ಕುಟುಂಬವಾದ್ದರಿಂದ ಇವರ ಬಾಲ್ಯವೂ ಸುಖಕರವಾಗಿರಲಿಲ್ಲ. ಹಾಗೆಯೇ ಯೌವನಾವಸ್ಥೆಗೆ ಕಾಲಿಟ್ಟಾಗಲೂ ಸುಖವೆಂಬುದು ಇವರನ್ನು ಹುಡುಕಿಕೊಂಡು ಬರಲಿಲ್ಲ. ಜೊತೆಯಾಗಿ ಬದುಕಿದ ವಕೀಲ ಗುರುನಾಥ್ ಕೌಲಗಿ ಕೂಡ ಹೆಚ್ಚುಕಾಲ ಇವರೊಡನೆ ಜೀವಂತವಾಗಿ ಉಳಿಯದೆ ಇವರನ್ನು ಒಂಟಿಯಾಗಿ ಬಿಟ್ಟು ಮತ್ತೆ ಬಾರದ ಲೋಕದತ್ತ ನಡೆದುಬಿಟ್ಟಿದ್ದರು. ಆಗ ಏಕಾಂಗಿಯಾಗಿ ಜೀವನದ ನೊಗ ಹೊತ್ತ ಇವರಿಗೆ ಜೊತೆಯಾಗಿದ್ದದ್ದು ಸಂಗೀತ ಮಾತ್ರವೇ

> ಮಹಿಳೆಯರು ಏನಿದ್ದರೂ ತುಮರಿಯಂತಹ ಹಗುರವಾದ ರಾಗಗಳುಳ್ಳ ಸಾಮಾನ್ಯ ಸಂಗೀತಕ್ಕಷ್ಟೇ ಸರಿ ಎಂಬ ಮಾತನ್ನು ಸುಳ್ಳು ಮಾಡಿ ಹಿಂದೂಸ್ತಾನಿ ಸಂಗೀತ ಸಾಮ್ರಾಜ್ಯದಲ್ಲಿ ತಮ್ಮ ಅನನ್ಯ ಪ್ರತಿಭೆಯಿಂದ ನೂತನ ಅಧಿಪತ್ಯ ಸ್ಥಾಪಿಸಿದ ಅಪೂರ್ವ ಸಾಧಕಿ ಗಂಗೂಬಾಯಿ ಅವರೆಂದರೆ ಖಂಡಿತ ಅತಿಶಯೋಕ್ತಿಯಾಗಲಾರದು.


ಆದರೂ ಮಗಳು ಕೃಷ್ಣಾ ಹಾನಗಲ್ ಇವರ ಸಂಗೀತ ನಡೆಗೆ, ಹಾಡಿಗೆ ಆಧಾರವಾಗಿದ್ದರು. ಆದರೆ ನೋವಿನ ಮೇಲೆ ಮತ್ತೊಂದು ನೋವಿನ ಬರೆ ಎಂಬಂತೆ ಇವರು ಹೆಚ್ಚು ಪ್ರೀತಿಸುತ್ತಿದ್ದ ಪ್ರೇಮದ ಪುತ್ರಿ ಕೃಷ್ಣಾ ಹಾನಗಲ್ ಸಹ ತಾಯಿಯನ್ನು ತೊರೆದು ಪರಮಾತ್ಮನ ಪಾದ ಸೇರಿಕೊಂಡಾಗ ದುಃಖದ ಪ್ರಪಾತವನ್ನು ಇವರು ಕಂಡಿದ್ದರು. ಏಕೆಂದರೆ ಮಗಳು ಕೃಷ್ಣಾ ಹಾನಗಲ್ ಬರೀ ಮಗಳಾಗಿರಲಿಲ್ಲ. ಬದಲಿಗೆ ಇವರ ಸಾಧನೆಯ ಹಾದಿಯಲ್ಲಿ ಜೊತೆಗಾತಿಯಾಗಿದ್ದಳು. ವಿಧಿ ತಂದೊಡ್ಡಿದ ಈ ಎಲ್ಲಾ ನೋವುಗಳ ದಾರಿಯಲ್ಲಿ ನಡೆದು ದುಃಖವನ್ನೆಲ್ಲಾ ಒತ್ತಟ್ಟಿಗೆ ಒತ್ತರಿಸಿ ಸಂಗೀತದ ಹೆದ್ದಾರಿಯನ್ನು ತೆರೆದುಕೊಂಡ ಮಹಾಸಾಧಕಿ ಗಂಗೂಬಾಯಿ ಅವರಿಗೆ ಯಾರು ತಾನೆ ಸಾಟಿಯಾಗಬಲ್ಲರು. ಸೂರ್ಯನ ಕಾಂತಿಗೆ ಸೂರ್ಯನೆ ಸಾಟಿ ಎಂಬಂತೆ ಗಂಗೂಬಾಯಿ ಅವರ ಸಂಗೀತದೈಸಿರಿಗೆ, ಹಾಡಿನ ಹೊನ್ನಕಂಠಕ್ಕೆ ಅವರು ಮಾತ್ರವೇ ಸಾಟಿಯಾಗಿದ್ದರು ಎನ್ನಬಹುದು!

ಮಹಿಳೆಯರು ಏನಿದ್ದರೂ ತುಮರಿಯಂತಹ ಹಗುರವಾದ ರಾಗಗಳುಳ್ಳ ಸಾಮಾನ್ಯ ಸಂಗೀತಕ್ಕಷ್ಟೇ ಸರಿ ಎಂಬ ಮಾತನ್ನು ಸುಳ್ಳು ಮಾಡಿ ಹಿಂದೂಸ್ತಾನಿ ಸಂಗೀತ ಸಾಮ್ರಾಜ್ಯದಲ್ಲಿ ತಮ್ಮ ಅನನ್ಯ ಪ್ರತಿಭೆಯಿಂದ ನೂತನ ಅಧಿಪತ್ಯ ಸ್ಥಾಪಿಸಿದ ಅಪೂರ್ವ ಸಾಧಕಿ ಗಂಗೂಬಾಯಿ ಅವರೆಂದರೆ ಖಂಡಿತ ಅತಿಶಯೋಕ್ತಿಯಾಗಲಾರದು. ಸಂಗೀತವನ್ನು ಜೀವ, ಜೀವನ, ಜೀವದುಸಿರು, ಜೀವದಸಿರು ಮಾಡಿಕೊಂಡಿದ್ದ ಭಾರತೀಯ ಶಾಸ್ತ್ರೀಯ ಸಂಗೀತ, ಕಲೆ ಉಳಿಸಿ ಬೆಳೆಸುವುದೇ ನನ್ನ ಜೀವನದ ಗುರಿ ಎಂದು ಹೇಳುತ್ತಿದ್ದ ಇಂಥ ಸಂಗೀತ ರತ್ನ ಪಡೆದ ಕನ್ನಡಮ್ಮ ಮಹಾಭಾಗ್ಯಶಾಲಿಯೇ ಸರಿ.

ಇಂಥ ಗಾನಸಾಮ್ರಾಜ್ಞಿ ಗಂಗೂಬಾಯಿ ಹಾನಗಲ್ ಅವರಿಗೆ 1962ರ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ, 1971ರಲ್ಲಿ ಪದ್ಮಭೂಷಣ ಪ್ರಶಸ್ತಿ, 1973ರ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, 1984ರಲ್ಲಿ ತಾನ್‌ಸೇನ್ ಪ್ರಶಸ್ತಿ, 1990ರಲ್ಲಿ ಅಫೀಜ್ ಅಲಿಖಾನ್ ಮೆಮೋರಿಯಲ್ ಪ್ರಶಸ್ತಿ, 1992ರಲ್ಲಿ ಐ.ಟಿ.ಸಿ. ಸಂಗೀತ ಪ್ರಶಸ್ತಿ, ಅದೇ ವರ್ಷ ಕನಕಪುರಂದರ ಪ್ರಶಸ್ತಿ, 1995ರಲ್ಲಿ ಟಿ.ಚೌಡಯ್ಯ ಮೆಮೋರಿಯಲ್ ಪ್ರಶಸ್ತಿ, 1996ರಲ್ಲಿ ಕೇಂದ್ರದ ಫೆಲೋಷಿಪ್, 1997ರಲ್ಲಿ ಗಾನಯೋಗಿ ಪಂಚಾಕ್ಷರಿ ಪ್ರಶಸ್ತಿ, 1998ರಲ್ಲಿ ದೀನಾನಾಥ್ ಮಂಗೇಶ್ಕರ್ ಪ್ರಶಸ್ತಿ, 2002ರಲ್ಲಿ ಪದ್ಮವಿಭೂಷಣ ಪ್ರಶಸ್ತಿ, 2004ರಲ್ಲಿ ಉಸ್ತಾದ್ ಇನಾಯತ್ ಖಾನ್ ಮೆಮೋರಿಯಲ್ ಪ್ರಶಸ್ತಿ, ಅದೇ ವರ್ಷ ನ್ಯಾಷನಲ್ ಆರ್ಟಿಸ್ಟ್ ಅವಾರ್ಡ್, 2006ರಲ್ಲಿ ಭಾರತೀಯ ಸಂಗೀತ ಪ್ರಶಸ್ತಿ, 2007ರಲ್ಲಿ ಗುರುಗಂಧರ್ವ ಪ್ರಶಸ್ತಿ, 2008ರಲ್ಲಿ ಕೆರೆಮನೆ ಶಿವರಾಮ ಹೆಗಡೆ ಪ್ರಶಸ್ತಿ, 2007ರ ಈ ಟಿ.ವಿ. ವರ್ಷದ ಕನ್ನಡಿಗ ಪ್ರಶಸ್ತಿ ಸೇರಿದಂತೆ ಹಲವಾರು ರಾಜ್ಯ ಮತ್ತು ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಪ್ರಶಸ್ತಿಗಳು ಬಂದಿದ್ದವು.

ಕರ್ನಾಟಕ ವಿಶ್ವವಿದ್ಯಾಲಯ, ಗುಲ್ಬರ್ಗಾ ವಿಶ್ವವಿದ್ಯಾಲಯ, ದೆಹಲಿ ವಿಶ್ವವಿದ್ಯಾಲಯಗಳ ಗೌರವ ಡಾಕ್ಟರೇಟ್‌ಗಳು, ಹಂಪಿ ವಿಶ್ವವಿದ್ಯಾಲಯದ ನಾಡೋಜ ಪುರಸ್ಕಾರ, ಅಖಿಲ ಭಾರತೀಯ ಗಂಧರ್ವ ಮಹಾ ವಿದ್ಯಾಲಯ, ಮುಂಬೈನಿಂದ ಸಂಗೀತ ಮಹಾ ಮಹೋಪಾಧ್ಯಾಯ ಎಂಬ ಡಾಕ್ಟರ್ ಆಫ್ ಮ್ಯೂಸಿಕ್ ಪದವಿ, 2008ರ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಮತ್ತು 2003ರಲ್ಲಿ ಕರ್ನಾಟಕ ಸರ್ಕಾರದಿಂದ ಇವರ ಸಂಗೀತ ಸಾಧನೆಗೆ ಸಾಕ್ಷ್ಯಚಿತ್ರದ ಗೌರವ. ಗಂಗೂಬಾಯಿ ಅವರಿಗೆ ಸಂದಿದ್ದ ಅವರ ಗೌರವದ ಮತ್ತಷ್ಟು ಹೊನ್ನಗರಿಗಳು. ಗುರುವರ್ಯ ಸವಾಯಿ ಗಂಧರ್ವ ವಿಶ್ವಸ್ಥ ಸಂಸ್ಥೆಯು ಕೊಡ ಮಾಡುವ 2008ನೇ ಸಾಲಿನ ಪ್ರತಿಷ್ಠಿತ ಪ್ರಪ್ರಥಮ ಸವಾಯಿ ಗಂಧರ್ವ ರಾಷ್ಟ್ರೀಯ ಸಂಗೀತ ಪುರಸ್ಕಾರಕ್ಕೂ ಇವರು ಭಾಜನರಾಗಿದ್ದರು. ಇಂಥ ಸಾಧಕಿಯ ಸಂಸ್ಮರಣಾರ್ಥ ಇವರ ಹೆಸರಿನಲ್ಲಿ ಗಂಗೂಬಾಯಿ ಹಾನಗಲ್ ಸಂಗೀತ ವಿಶ್ವವಿದ್ಯಾನಿಲಯವನ್ನು ಮೈಸೂರಿನಲ್ಲಿ ಸ್ಥಾಪಿಸಿದೆ.

ಇಂಥ ಸಂಗೀತ ಲೋಕದ ಭೀಮಸದೃಶ ಮೇರುಗಿರಿ 2009 ಜುಲೈ 21ರ ಭೀಮನ ಅಮಾವಾಸ್ಯೆಯಂದು ಮುಂಜಾನೆ 7 ಗಂಟೆ 10 ನಿಮಿಷಕ್ಕೆ ಸರಿಯಾಗಿ ಜವರಾಯನೊಡನೆ ಹೊರಟುಬಿಟ್ಟರು. ಆದರೇನಂತೆ ಭೌತಿಕವಾಗಿ ಗಂಗೂಬಾಯಿಯವರು ಇಲ್ಲವಾಗಿರಬಹುದು. ಆದರೆ ತಮ್ಮ ಸಂಗೀತ ಸಾಧನೆ ಮೂಲಕ ಇವರು ಎಂದೆಂದೂ ಅಜರಾಮರರು.



ಬನ್ನೂರು ಕೆ.ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಬುಧವಾರ 4 ಮಾರ್ಚ್ 2026

ದುಬೈನಲ್ಲಿರುವ ಕನ್ನಡಿಗರ ಕರೆತರುವ ಸಂಬಂಧ ಕೇಂದ್ರದೊಂದಿಗೆ ಚರ್ಚೆ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿಶ್ವಾಸ



ಬೆಂಗಳೂರು,ಮಾ.3(ಕೆಎಂಶಿ)–ಅಮೆರಿಕ, ಇಸ್ರೇಲ್–ಇರಾನ್ ಯುದ್ಧ ನಡೆಯುತ್ತಿರುವ ಸಂದರ್ಭದಲ್ಲಿ ದುಬೈನಲ್ಲಿ ಸಿಲುಕಿ ಆತಂಕದಲ್ಲಿರುವ ಕನ್ನಡಿಗರನ್ನು ತಕ್ಷಣ ಕರ್ನಾಟಕಕ್ಕೆ ಕರೆದುಕೊಂಡು ಬರಲು ಕೇಂದ್ರ ಸರಕಾರದ ಜೊತೆ ಮಾತನಾಡುತ್ತೇನೆಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ದುಬೈನಲ್ಲಿ ಸಿಲುಕಿರುವ ಕನ್ನಡಿಗರನ್ನು ಸಂಪರ್ಕಿಸಿ, ಮಾತನಾಡಿದ್ದಲ್ಲದೆ, ಅವರಿಗೆ ಧೈರ್ಯ ತುಂಬಿರುವುದಾಗಿ ತಿಳಿಸಿದರು. ಕೆಲವರು ಹೋಟೆಲ್‌ನಲ್ಲಿ ತಂಗಿದ್ದು, ಅವರಲ್ಲಿ ಕೆಲವರು ಆತಂಕ ಹಂಚಿಕೊಂಡರು. ಇದೀಗ 7ನೇ ದಿನ ತಲುಪಿದೆ. ಇವತ್ತು ರಾತ್ರಿ ಇದ್ದ ವಿಮಾನವೂ ರದ್ದಾಗಿದೆ ಎಂದರು. ಪ್ರಧಾನಿ ಮೋದಿಜೀ ಅವರು ಇದರ ಸಂಬಂಧ ಆದ್ಯ ಗಮನ ಕೊಟ್ಟಿದ್ದಾರೆ. ಹಿಂದೆ ಉಕ್ರೇನ್‌ನಲ್ಲಿ ಇಂಥ ಸಮಸ್ಯೆ ಆದಾಗ ಕೇಂದ್ರ ಸರಕಾರವು ಅದನ್ನು ಬಗೆಹರಿಸಿತ್ತು. ಅಲ್ಲಿ ಸಿಲುಕಿದ್ದವರನ್ನು ಕರೆದುಕೊಂಡು ಬರುವ ವ್ಯವಸ್ಥೆ ಮಾಡಲಾಗಿತ್ತು. ಈ ಯುದ್ಧ ಅಚಾನಕ್ ಆಗಿ ಆರಂಭವಾಗಿದೆ. ದೆಹಲಿಯ ಸಂಬಂಧಿತರ ಜೊತೆ ನಾನು ಕೂಡ ಮಾತನಾಡುವೆ ಎಂದು ಧೈರ್ಯ ಹೇಳಿದ್ದೇನೆ.

ರೇಷ್ಮೆ ಕೃಷಿ ಲಾಭದಾಯಕ; ವೈಜ್ಞಾನಿಕತೆ ಅಳವಡಿಸಿಕೊಂಡು ಹೆಚ್ಚಿನ ಲಾಭ ಗಳಿಸಿ



● ಕೇಂದ್ರ ರೇಷ್ಮೆ ಮಂಡಳಿ ಅಧಿಕಾರಿ ಪಿ.ಎಸ್.ಗಿರೀಶ್ ಸಲಹೆ ● ರೇಷ್ಮೆಗೂಡಿಗೆ ಈಗ ಭಾರೀ ಬೇಡಿಕೆ ಇದೆ ● ಇತರ ಕೃಷಿ ಮಾಡುವವರೂ ರೇಷ್ಮೆ ಕಸುಬು ಕೈಗೊಂಡಿದ್ದಾರೆ



ಮೈಸೂರು ತಾಲೂಕಿನ ಉದ್ಬೂರು ಬಳಿ ಕಲ್ಯಾಣ ಮಂಟಪವೊಂದರಲ್ಲಿ ಮಂಗಳವಾರ ನಡೆದ 'ಸುಸ್ಥಿರ ರೇಷ್ಮೆ ಕೃಷಿಗಾಗಿ ಸುಧಾರಿತ ತಂತ್ರಜ್ಞಾನಗಳು' ವಿಷಯ ಕುರಿತು ಆಯೋಜಿಸಿದ್ದ 'ರೇಷ್ಮೆ ಕೃಷಿ ಮೇಳ–2026' ಕೇಂದ್ರ ರೇಷ್ಮೆ ಮಂಡಳಿಯ ಹಣಕಾಸು ವಿಭಾಗದ ನಿರ್ದೇಶಕ ಪಿ.ಎಸ್.ಗಿರೀಶ್ ಉದ್ಘಾಟಿಸಿದರು. ಬಲಚಿತ್ರದಲ್ಲಿ ಪ್ರಗತಿಪರ ರೇಷ್ಮೆ ಕೃಷಿ ರೈತರನ್ನು ಸನ್ಮಾನಿಸುತ್ತಿರುವುದನ್ನು ಕಾಣಬಹುದು.

ಮೈಸೂರು, ಮಾ.3(ಎಂಟಿವೈ)–ಜಾಗತಿಕ ಮಟ್ಟದಲ್ಲಿ ರೇಷ್ಮೆಗೆ ಭಾರಿ ಬೇಡಿಕೆಯಿದ್ದು, ಹೊಸ ರೇಷ್ಮೆ ಬೆಳೆಗಾರರನ್ನು ಪ್ರೋತ್ಸಾಹಿಸಲು ನೀಡುತ್ತಿರುವ ಸಬ್ಸಿಡಿ ಮೊತ್ತವನ್ನು ಹೆಚ್ಚಿಸಲು ಕೇಂದ್ರ ರೇಷ್ಮೆ ಮಂಡಳಿ ಶಿಫಾರಸ್ಸು ಮಾಡಿದೆ ಎಂದು ಕೇಂದ್ರ ರೇಷ್ಮೆ ಮಂಡಳಿಯ ಹಣಕಾಸು ವಿಭಾಗದ ನಿರ್ದೇಶಕ ಪಿ.ಎಸ್.ಗಿರೀಶ್ ತಿಳಿಸಿದ್ದಾರೆ.

ಮೈಸೂರು ತಾಲೂಕಿನ ಉದ್ಬೂರು ಬಳಿ ಕಲ್ಯಾಣ ಮಂಟಪವೊಂದರಲ್ಲಿ ಕೇಂದ್ರ ರೇಷ್ಮೆ ಮಂಡಳಿ, ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ ಹಾಗೂ ರೇಷ್ಮೆ ಇಲಾಖೆ ಸಂಯುಕ್ತಾಶ್ರಯದಲ್ಲಿ ಮಂಗಳವಾರ 'ಸುಸ್ಥಿರ ರೇಷ್ಮೆ ಕೃಷಿಗಾಗಿ ಸುಧಾರಿತ ತಂತ್ರಜ್ಞಾನಗಳು' ವಿಷಯ ಕುರಿತು ಆಯೋಜಿಸಿದ್ದ 'ರೇಷ್ಮೆ ಕೃಷಿ ಮೇಳ–2026' ಉದ್ಘಾಟಿಸಿ ಮಾತನಾಡಿದ ಅವರು, ಕಳೆದ ಕೆಲವು ವರ್ಷಗಳಿಂದ ರೇಷ್ಮೆ ಕೃಷಿ ಕ್ಷೇತ್ರದಲ್ಲಿ ಹೊಸ ಹೊಸ ತಂತ್ರಜ್ಞಾನ ಆವಿಷ್ಕಾರಗೊಂಡಿದೆ. ರೇಷ್ಮೆ ಕೃಷಿಯಲ್ಲಿ ಸಾಕಷ್ಟು ಬದಲಾವಣೆಯಾಗಿವೆ. ಈ ಹಿನ್ನೆಲೆಯಲ್ಲಿ ರೇಷ್ಮೆ ಕೃಷಿಕರು ಲಾಭದಾಯಕವಾಗಿ ಸಾಗಲು ಹಾಗೂ ಆರ್ಥಿಕವಾಗಿ ಪ್ರಗತಿ ಸಾಧಿಸಬೇಕಾದರೆ ರೇಷ್ಮೆ ಕೃಷಿಯಲ್ಲಿ ಕಡ್ಡಾಯವಾಗಿ ಹೊಸ ತಂತ್ರಜ್ಞಾನ ಅಳವಡಿಸಿಕೊಳ್ಳಬೇಕು ಎಂದರು.

ಇತ್ತೀಚಿನ ವರ್ಷಗಳಲ್ಲಿ ಎಲ್ಲೆಡೆ ಕೃಷಿ ಕಾರ್ಮಿಕರು ಸಿಗುತ್ತಿಲ್ಲ. ರೈತಾಪಿ ಕೆಲಸ ಮಾಡಲು ಜನ ಇಷ್ಟಪಡುತ್ತಿಲ್ಲ. ಗ್ರಾಮೀಣ ಪ್ರದೇಶದಿಂದ ನಗರ ಪ್ರದೇಶಕ್ಕೆ ಹೋಗಿ ಯಾವುದಾದರು ಕೆಲಸ ಮಾಡಬೇಕೆಂಬ ಹಂಬಲ ಹೊಂದಿದ್ದಾರೆ. 20 ಸಾವಿರ ರೂ. ಸಿಕ್ಕರೆ ಸಾಕು ಸೆಕ್ಯುರಿಟಿ ಕೆಲಸ ಮಾಡಲು ಮುಂದಾಗುತ್ತಿದ್ದಾರೆ. ಇದರಿಂದ ಕೃಷಿ ಕಾರ್ಮಿಕರ ಕೊರತೆ ಉದ್ಭವಿಸಿದೆ. ಆದರೆ, ಮುಂದಿನ 10–20 ವರ್ಷದಲ್ಲಿ ರೈತರಿಗೆ ಒಳ್ಳೆಯ ಕಾಲ ಬರುತ್ತದೆ. ರೈತರಿಗೆ ಬೇಡಿಕೆ ಬರುತ್ತದೆ. ರೈತರು ಬೆಳೆದ ವಸ್ತುಗಳಿಗೆಲ್ಲಾ ಭಾರೀ ಬೇಡಿಕೆ ಇದೆ. ಈ ಹಿನ್ನೆಲೆಯಲ್ಲಿ ರೈತರು ಸಾವಯವ ಪದ್ಧತಿ ಅಳವಡಿಸಿಕೊಂಡರೆ ಭವಿಷ್ಯ ಸದೃಢವಾಗಲಿದೆ ಎಂದು ಅಭಿಪ್ರಾಯಪಟ್ಟರು.

ಕೈ ಹಿಡಿಯಲಿದೆ ರೇಷ್ಮೆ ಕೃಷಿ: ರೇಷ್ಮೆ ಕೃಷಿಯಲ್ಲೂ ತಂತ್ರಜ್ಞಾನ ಬೆಳೆಯುತ್ತಿದೆ. 10–20 ವರ್ಷದ ಹಿಂದೆ ರೇಷ್ಮೆ ಗೂಡಿಗೆ ಚಂದ್ರಿಕೆ ಬಳಸಲಾಗುತ್ತಿತ್ತು. ಇಂದು ಪ್ಲಾಸ್ಟಿಕ್‌ನಲ್ಲಿ ಮಾಡಿರುವ ಚಂದ್ರಿಕೆ ರೈತರಿಗೆ ನೆರವಾಗಿದೆ. ಇದರಿಂದ ಗೂಡು ತೆಗೆಯುವುದು, ಸಾಗಿಸುವುದು ಸುಲಭವಾಗಿದೆ. ಅಭಿವೃದ್ಧಿಪಡಿಸಿರುವ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬೇಕು. ಇಂದು ಜಾಗತಿಕ ಮಟ್ಟದಲ್ಲಿ ರೇಷ್ಮೆಗೆ ತುಂಬ ಬೇಡಿಕೆ ಇದೆ ಎಂದರು.

ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ನ್ಯಾಷನಲ್ ಫೈಬರ್ ಮಿಷನ್ ಘೋಷಣೆ ಮಾಡಿದೆ. ಇದರಿಂದ ಎಲ್ಲಾ ದೇಶಗಳು ಅಗ್ರಿಮೆಂಟ್ ಮಾಡಿಕೊಳ್ಳುತ್ತಿವೆ. ಈ ಹಿಂದೆ ನಮ್ಮ ದೇಶದಿಂದ ಹೊರ ದೇಶಕ್ಕೆ ಕಾಟನ್, ಜ್ಯೂಟ್ ರಫ್ತು ಮಾಡಿದರೆ ಶೇ.100 ತಾರಿಫ್ (ಟ್ಯಾಕ್ಸ್) ಹಾಕುತ್ತಿದ್ದರು. ಆ ಕಾರಣದಿಂದ ನಮ್ಮ ದೇಶದ ವಸ್ತುಗಳ ದರ ಹೆಚ್ಚಾಗಿದೆ ಎಂದು ಕೊಂಡುಕೊಳ್ಳುತ್ತಿರಲಿಲ್ಲ. ಈಗ ಅದೆಲ್ಲಾ ಕಡಿಮೆ ಆಗಿದೆ. ಮುಂದಿನ 3–4 ವರ್ಷದಲ್ಲಿ ರೇಷ್ಮೆ ಬೆಳೆಯುವವರ ಸಂಖ್ಯೆ ಹೆಚ್ಚಾಗಲಿದೆ.

ಬೆಲೆ ಹೆಚ್ಚಾಗಲಿದೆ: ಪ್ರಸ್ತುತ ರೇಷ್ಮೆ ಗೂಡು ಕೆಜಿಗೆ 900ರಿಂದ ಸಾವಿರ ರೂ. ದರವಿದೆ. ಇಷ್ಟು ದರ ಇದ್ದರೂ ಉದ್ಯಮಿಗಳು ರೇಷ್ಮೆಗೂಡು ಸಿಗುತ್ತಿಲ್ಲ ಎಂದು ಅಳಲು ತೋಡಿಕೊಳ್ಳುತ್ತಿದ್ದಾರೆ. ಮುಂದಿನ ದಿನಗಳಲ್ಲಿ ರೇಷ್ಮೆಗೂಡಿನ ಬೆಲೆ ಇನ್ನಷ್ಟು ಹೆಚ್ಚಾಗಲಿದೆ. ರೈತರು ಹೊಸ ತಂತ್ರಜ್ಞಾನ ಅಳವಡಿಸಿಕೊಂಡರೆ ಶ್ರಮ ಕಡಿಮೆ ಮಾಡಿಕೊಳ್ಳಬಹುದು. ಇರುವ ಜಮೀನಿನಲ್ಲಿಯೇ ಹಿಪ್ಪುನೇರಳೆ ಬೆಳೆ ಹೆಚ್ಚಾಗಿ ಹೇಗೆ ಬೆಳೆಯಬಹುದು ಎಂದು ತಿಳಿದುಕೊಳ್ಳಬೇಕು. ಇಂದು ರೇಷ್ಮೆ ಕೃಷಿ ಉಳಿಯಬೇಕಾದರೆ ರೈತ ಕುಟುಂಬವೇ ಕಾರಣ. ಹಸು, ಕುರಿ ಸಾಕಾಣೆ ಸೇರಿದಂತೆ ಹೈನುಗಾರಿಕೆಯೊಂದಿಗೆ ರೇಷ್ಮೆ ಕೃಷಿ ಮಾಡಿಕೊಂಡು ಹೋಗುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಬ್ಸಿಡಿ ಹೆಚ್ಚಳ: ರೇಷ್ಮೆ ಮನೆ ನಿರ್ಮಾಣಕ್ಕೆ ಸಬ್ಸಿಡಿ, ಯಂತ್ರೋಪಕರಣ, ಹಿಪ್ಪುನೇರಳೆ ಬೆಳೆಯಲು ನೀಡುತ್ತಿರುವ ಸಬ್ಸಿಡಿಯನ್ನು ಹೆಚ್ಚಿಸುತ್ತೇವೆ. ರೇಷ್ಮೆ ಮನೆ ನಿರ್ಮಾಣ ಸೇರಿದಂತೆ 6–8 ಲಕ್ಷದವರೆಗೆ ಸಬ್ಸಿಡಿ ನೀಡುವಂತೆ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಅಲ್ಲದೆ, ಕೆಲವರು 100 ಮೊಟ್ಟೆ, ಮತ್ತೆ ಕೆಲವರು 500 ಮೊಟ್ಟೆ ಮೇಯಿಸುತ್ತಿದ್ದಾರೆ. ಮೊಟ್ಟೆಗೆ ಅನುಗುಣವಾಗಿ ಸಬ್ಸಿಡಿ ಹೆಚ್ಚಿಸಲು ಯೋಜನೆ ರೂಪಿಸಲಾಗುತ್ತಿದೆ. ಮುಂದಿನ 6 ತಿಂಗಳೊಳಗೆ ಯೋಜನೆ ಜಾರಿಯಾಗಲಿದೆ ಎಂದರು.

2017–18ರಲ್ಲಿ ತೆಲಂಗಾಣದ ಗ್ರಾಮವೊಂದರಲ್ಲಿ ಶಂಕ್ರುನಾಯಕ್ ರೇಷ್ಮೆ ಬೆಳೆಯಲು ಆರಂಭಿಸಿದರು. ಇಂದು ಆ ಗ್ರಾಮದಲ್ಲಿ 212 ಮಂದಿ ರೇಷ್ಮೆ ಬೆಳೆಯುವ ರೈತರಿದ್ದಾರೆ. ಇವರಿಗೆ ರೇಷ್ಮೆ ಮಂಡಳಿಯಿಂದ 25 ಕೋಟಿ ರೂ. ಸಬ್ಸಿಡಿ ನೀಡಲಾಗುತ್ತಿದೆ. ಈಗ ಬೇರೆ ಬೇರೆ ಕಡೆ ಕೆಲಸ ಮಾಡುತ್ತಿರುವವರೂ ರೇಷ್ಮೆ ಮಾಡುತ್ತಿದ್ದಾರೆ. ರೈತರ ಮಕ್ಕಳೇ ಇಂದು ರೈತರ ಕೆಲಸ ಮಾಡಲು ಇಷ್ಟಪಡುತ್ತಿಲ್ಲ. ಈ ಹಿನ್ನೆಲೆಯಲ್ಲಿ ರೇಷ್ಮೆ ಉಳಿಸಿಕೊಳ್ಳುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ತಿಳಿಸಿದರು.

ರೈತರಿಗೆ ಸನ್ಮಾನ: ಮೇಳದಲ್ಲಿ ಕಳೆದ ಹಲವು ವರ್ಷಗಳಿಂದ ರೇಷ್ಮೆ ಕೃಷಿ ಮಾಡಿ, ಹೆಚ್ಚಿನ ಇಳುವರಿ ಪಡೆಯುತ್ತಿರುವ ಹಲವು ರೈತರಿಗೆ ಸನ್ಮಾನ ಮಾಡಿ, ಪ್ರಶಂಸನಾ ಪ್ರಮಾಣ ಪತ್ರ ವಿತರಿಸಲಾಯಿತು. ರಾಜ್ಯದ ವಿವಿಧೆಡೆಯಿಂದ ಆಯ್ಕೆ ಮಾಡಲಾಗಿದ್ದ ರೇಷ್ಮೆ ಕೃಷಿಕರಾದ ಆದರ್ಶ, ಚಿಕ್ಕತಾಯಮ್ಮ, ರಮ್ಯಾ, ಬಸವಣ್ಣಿ, ರಾಘವೇಂದ್ರ, ರಮೇಶ್, ಎಂ.ಎನ್.ರಾಧಾ, ಗುರುಮಲ್ಲೇಶ್, ನಟರಾಜ್, ತಿಪ್ಪೇಸ್ವಾಮಿರೆಡ್ಡಿ, ಬೆಂಗಳೂರಿನ ಹಾರೋಹಳ್ಳಿ ರಮೇಶ್, ರವಿನಾಯಕ್, ಜಯಮ್ಮ, ಮಂಜುಳಾ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಿಎಫ್‌ಟಿಆರ್‌ಐ ನಿರ್ದೇಶಕ ಡಾ.ಗಿರಿಧರ್ ಪರ್ವತಂ, ಕೇಂದ್ರ ರೇಷ್ಮೆ ಮಂಡಳಿ ಸದಸ್ಯ ಬಿ.ಎಸ್.ನಂಜುಂಡಸ್ವಾಮಿ, ಕೇಂದ್ರ ರೇಷ್ಮೆ ಸಂಶೋಧನೆ–ತರಬೇತಿ ಸಂಸ್ಥೆ ನಿರ್ದೇಶಕರಾದ ಡಾ.ಪಿ.ದೀಪ, ರೇಷ್ಮೆ ಇಲಾಖೆ ಹೆಚ್ಚುವರಿ ನಿರ್ದೇಶಕ ವೈ.ಟಿ.ತಿಮ್ಮಯ್ಯ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಎನ್‌ಜೆ ಆಸ್ಪತ್ರೆಯಲ್ಲಿ ಯಶಸ್ವಿನಿ ಅಡಿ 100ಕ್ಕೂ ಅಧಿಕ ಮಂದಿಗೆ ಬೆನ್ನುಮೂಳೆ ಶಸ್ತ್ರಚಿಕಿತ್ಸೆ



ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಡಾ.ಮನುಪ್ರಕಾಶ್ ಮಾತನಾಡಿದರು.

ಮೈಸೂರು, ಮಾ.3(ಜಿಎ)–ಮೈಸೂರಿನ ಎನ್‌ಜೆ ಆಸ್ಪತ್ರೆಯಲ್ಲಿ ಯಶಸ್ವಿನಿ ಯೋಜನೆ ಅಡಿಯಲ್ಲಿ ಕಳೆದ ವರ್ಷ 100 ಮಂದಿಗೆ ಮೂಳೆ ಹಾಗೂ ಬೆನ್ನುಮೂಳೆ ಸಂಬಂಧಿ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ನೆರವೇರಿಸಲಾಗಿದೆ ಎಂದು ಎನ್‌ಜೆ ಆಸ್ಪತ್ರೆ ಅಧ್ಯಕ್ಷ ಡಾ. ದುರ್ಗೇಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಹಳಷ್ಟು ಖಾಸಗಿ ಆಸ್ಪತ್ರೆಗಳು ಯಶಸ್ವಿನಿ ಯೋಜನೆ ತಮ್ಮಲ್ಲಿ ಜಾರಿ ಮಾಡದೇ ಈ ಕಾರ್ಡ್ ಅಡಿಯಲ್ಲಿ ಚಿಕಿತ್ಸೆ ನಿರಾಕರಿಸುತ್ತಿವೆ. ಆದರೆ ಜನರಿಗೆ ಉತ್ತಮ ಆರೋಗ್ಯ ಸೇವೆಯನ್ನು ಬದ್ಧತೆಯಿಂದ ನೀಡಬೇಕೆಂಬ ಉದ್ದೇಶದ ಆಸ್ಪತ್ರೆ ನಮ್ಮದಾಗಿರುವುದರಿಂದ ಈ ಯೋಜನೆ ಅಡಿಯಲ್ಲಿ ಸುಮಾರು 2.50 ಲಕ್ಷ ವರೆಗಿನ ಮೂಳೆ ಮತ್ತು ಬೆನ್ನೆಲುಬು ಚಿಕಿತ್ಸೆಯನ್ನು ಯಾವುದೇ ವೆಚ್ಚವಿಲ್ಲದೇ ನೀಡಲಾಗುತ್ತಿದೆ. ಅರ್ಹ ಸುಮಾರು 100 ರೋಗಿಗಳು ಇದರ ಪ್ರಯೋಜನ ಪಡೆದಿದ್ದಾರೆಂದರು.

ನಿರಂತರ ಕೀಲು ನೋವು, ನಿರ್ಬಂಧಿತ ಚಲನೆ ಅಥವಾ ದೀರ್ಘಕಾಲದ ಬೆನ್ನುಮೂಳೆಗೆ ಸಂಬಂಧಿಸಿದ ಸಮಸ್ಯೆ ಅನುಭವಿಸುತ್ತಿರುವವರು ಆಸ್ಪತ್ರೆಗೆ ಭೇಟಿ ನೀಡಿ ಯಶಸ್ವಿನಿ ಯೋಜನೆ ಅಡಿಯಲ್ಲಿ ನಗದು ರಹಿತ ಸೇವೆ ಪಡೆಯಬಹುದು. ಪ್ರಮುಖವಾಗಿ ರೈತಾಪಿ ವರ್ಗದವರಿಗೆ ಅನುಕೂಲ ಮಾಡುವ ಉದ್ದೇಶದಿಂದ ಆಸ್ಪತ್ರೆಯಲ್ಲಿ ಯಶಸ್ವಿನಿ ಯೋಜನೆಯನ್ನು ಅಳವಡಿಸಿಕೊಂಡಿದ್ದೇವೆ ಎಂದು ತಿಳಿಸಿದರು.

ಡಾ.ಮನುಪ್ರಕಾಶ್ ಮಾತನಾಡಿ, ಮೂಳೆ ಮತ್ತು ಬೆನ್ನುಮೂಳೆಯ ಆರೋಗ್ಯ ಸಮಸ್ಯೆಗಳು ಚಲನಶೀಲತೆ ಹಾಗೂ ವ್ಯಕ್ತಿಯ ಸ್ವಾತಂತ್ರ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತವೆ. ಅನೇಕ ರೋಗಿಗಳು ಹಣಕಾಸಿನ ಸಮಸ್ಯೆ ಕಾರಣ ಚಿಕಿತ್ಸೆ ಪಡೆಯುವುದಿಲ್ಲ. ಹೀಗಾಗಿ ಈ ಯೋಜನೆ ಅಡಿಯಲ್ಲಿ ತಮ್ಮ ಆಸ್ಪತ್ರೆಯಲ್ಲಿ ಯಶಸ್ವಿ ಸೇವೆ ನೀಡಲಾಗುತ್ತಿದೆ. ಆಸ್ಪತ್ರೆಗೆ ಆಗಮಿಸಿ, ನಂತರ ಶಸ್ತ್ರ ಚಿಕಿತ್ಸೆ ಮುಗಿದು ಹೋಗುವವರೆಗೂ ಯಾವುದೇ ಹೆಚ್ಚುವರಿ ಶುಲ್ಕ ನೀಡುವಂತಿಲ್ಲ. ಶಸ್ತ್ರ ಚಿಕಿತ್ಸೆ ನಡೆದ ನಂತರ ಮರು ದಿನದಿಂದಲ್ಲೇ ಓಡಾಡಲು ಆರಂಭಿಸಬಹುದು ಎಂದರು. ಸುದ್ದಿಗೋಷ್ಠಿಯಲ್ಲಿ ಡಾ.ಸಿಂಧುಲಕ್ಷ್ಮಿ ಉಪಸ್ಥಿತರಿದ್ದರು.

ಜೆಎಸ್‌ಎಸ್ ಪದವಿ ಕಾಲೇಜಿಗೆ ಬಹುಮಾನ



ಮೈಸೂರಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ವಿದ್ಯಾರ್ಥಿಗಳು ಜೆಎಸ್‌ಎಸ್ ಸರಸ್ವತಿಪುರಂ ಮಹಿಳಾ ಕಾಲೇಜಿನಲ್ಲಿ ಆಯೋಜಿಸಿದ್ದ 2025–26ನೇ ಸಾಲಿನ ಚಾಮುಂಡಿ ವಲಯದ ಅಂತರ ಕಾಲೇಜುಗಳ ಮಹಿಳೆಯರ ಟೆನ್ನಿಕಾಯ್ಟ್‌ನಲ್ಲಿ ಪ್ರಥಮ, ಥ್ರೋಬಾಲ್‌ನಲ್ಲಿ ದ್ವಿತೀಯ ಸ್ಥಾನ ಗಳಿಸಿ, ಅಂತರ ವಲಯ ಸ್ಪರ್ಧೆಗೆ ಆಯ್ಕೆಯಾದ ವಿಜೇತರನ್ನು ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ. ಸಾಂಬಶಿವಯ್ಯ, ಪ್ರಾಂಶುಪಾಲ ಡಾ.ಎಂ.ಪ್ರಭು, ದೈಹಿಕ ಶಿಕ್ಷಣ ನಿರ್ದೇಶಕರಾದ ಎಂ.ಕಾರ್ತಿಕ್, ಸಿ.ಎಸ್.ನಿರಂಜನ್, ಬೋಧಕ–ಬೋಧಕೇತರರು ಅಭಿನಂದಿಸಿದ್ದಾರೆ.

ಉದ್ಯಾನವನ ಅಭಿವೃದ್ಧಿ ಕಾಮಗಾರಿಗೆ ಶಾಸಕ ಟಿ.ಎಸ್.ಶ್ರೀವತ್ಸ ಚಾಲನೆ...



ಕೇಂದ್ರ ಸರ್ಕಾರದ ಅಮೃತ್ 2.0 ಯೋಜನೆ ಅಡಿಯಲ್ಲಿ 50 ಲಕ್ಷ ರೂ. ವೆಚ್ಚದಲ್ಲಿ ಮೈಸೂರಿನ ಕುವೆಂಪುನಗರದ ವಾರ್ಡ್ 47ರ ಅಕ್ಬರ್ ಅಲಿ ಉದ್ಯಾನವನದ ಅಭಿವೃದ್ಧಿ ಕಾಮಗಾರಿಗೆ ಶಾಸಕ ಟಿ.ಎಸ್.ಶ್ರೀವತ್ಸ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾಜಿ ಮೇಯರ್ ಶಿವಕುಮಾರ್, ಕೆ.ಆರ್.ಕ್ಷೇತ್ರದ ಬಿಜೆಪಿ ಅಧ್ಯಕ್ಷ ಗೋಪಾಲ್‌ರಾಜೇ ಅರಸ್, ಪ್ರಧಾನ ಕಾರ್ಯದರ್ಶಿ ಜಯರಾಮ್, ಬಿಜೆಪಿ ಮುಖಂಡರಾದ ಪ್ರದೀಪ್‌ಕುಮಾರ್, ಶಾಂತವೀರಪ್ಪ, ಲಕ್ಷ್ಮೀದೇವಿ, ಉಪೇಂದ್ರ, ನಾಗೇಶ್, ಸೋಮು, ಶೋಭಾ, ಮಂಜುನಾಥ್, ಬಸವರಾಜು, ರಮೇಶ್ ಮತ್ತಿತರರು ಉಪಸ್ಥಿತರಿದ್ದರು.

ನಾಳೆ ಮೈಸೂರಲ್ಲಿ ವೆಂಡರ್ ಡೆವಲಪ್‌ಮೆಂಟ್ ಕಾರ್ಯಕ್ರಮ

ಮೈಸೂರು,ಮಾ.3–ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ವತಿಯಿಂದ ಆರ್‌ಎಎಂಪಿ ಯೋಜನೆಯಡಿ ವೆಂಡರ್ ಡೆವಲಪ್‌ಮೆಂಟ್ ಪ್ರೋಗ್ರಾಂ ಕಾರ್ಯಕ್ರಮವನ್ನು ಮಾ.5ರಂದು ಬೆಳಗ್ಗೆ 10:30ಕ್ಕೆ ವಿದ್ಯಾವರ್ಧಕ ಎಂಬಿಎ ಕಾಲೇಜ್ ಬಿ.ಸಿ. ಲಿಂಗಯ್ಯ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಕಾರ್ಯಕ್ರಮದಲ್ಲಿ ಕೇಂದ್ರ ಸರ್ಕಾರದ ಅಧೀನದ ಕಂಪನಿಗಳು, ಮೈಸೂರು ಜಿಲ್ಲೆಯ ಬೃಹತ್ ಕೈಗಾರಿಕೆಗಳು ಭಾಗವಹಿಸಿ, ಕಂಪನಿಗಳು ಪ್ರೊಕ್ಯೂರ್ ಮಾಡುವ ಸಾಮಗ್ರಿಗಳು, ಅನುಸರಿಸಬೇಕಾದ ಪ್ರಕ್ರಿಯೆಗಳ ಬಗ್ಗೆ ಮಾಹಿತಿ ನೀಡಲಿದ್ದಾರೆ. ಜಿಲ್ಲೆಯ ಎಂಎಸ್‌ಎಂಇ ಉದ್ದಿಮೆದಾರರು ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕೈಗಾರಿಕಾ ಕೇಂದ್ರ ಕಚೇರಿಯ ದೂ.ಸಂ: 0821 2449810 ಸಂಪರ್ಕಿಸಬಹುದಾಗಿದೆ.

ಪರಿಸರ ಸಂರಕ್ಷಣೆ ಬಗ್ಗೆ ಜಲವರ್ಣ ಚಿತ್ರ ರಚನಾ ಸ್ಪರ್ಧೆ

ಮೈಸೂರು, ಮಾ.3(ಬಿಎಲ್‌ಯು)– ಮೈಸೂರಿನ ಮಾನಸಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪರಿಸರ ರಕ್ಷಣೆ ಕುರಿತಂತೆ ಜಲವರ್ಣ ಚಿತ್ರ ರಚನಾ ಸ್ಪರ್ಧೆ ಆಯೋಜಿಸಲಾಗಿತ್ತು.

ಖ್ಯಾತ ಜಲವರ್ಣ ಚಿತ್ರ ಕಲಾವಿದ ತಿಪ್ಪೇಸ್ವಾಮಿ ಅವರ ಸ್ಮರಣಾರ್ಥ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು. ಪರಿಸರ ಪ್ರೇಮಿಯಾಗಿದ್ದ ತಿಪ್ಪೇಸ್ವಾಮಿ ಅವರನ್ನು ಸ್ಮರಿಸಿಕೊಳ್ಳುವುದರ ಜೊತೆಗೆ ಪರಿಸರ ರಕ್ಷಣೆ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸಲು ಸ್ಪರ್ಧೆಯ ಆಯೋಜನೆ ಮಾಡಲಾಗಿತ್ತು. ಪರಿಸರ ಸಂರಕ್ಷಣೆ ಹೇಗೆ, ಪರಿಸರ ಮಾಲಿನ್ಯದ ಪರಿಣಾಮಗಳು ಕುರಿತು ವಿಷಯ ವಸ್ತು ನೀಡಲಾಗಿತ್ತು. ಹಿರಿಯ ಹಾಗೂ ಕಿರಿಯ ವಿಭಾಗಕ್ಕೆ ಪ್ರತ್ಯೇಕವಾಗಿ ಆಯೋಜಿಸಿದ್ದ ಈ ಸ್ಪರ್ಧೆಯಲ್ಲಿ ಹಲವು ಮಕ್ಕಳು ಭಾಗವಹಿಸಿ ತಮ್ಮ ಸೃಜನ ಶೀಲತೆಯನ್ನು ಪ್ರದರ್ಶಿಸಿದರು.

ತರುವಾಯ ನಡೆದ ಬಹುಮಾನ ವಿತರಣಾ ಸಮಾರಂಭದಲ್ಲಿ ಕನ್ನಡ ಲೇಖಕಿಯರ ಸಂಘದ ಅಧ್ಯಕ್ಷೆ ಸುನಂದಮ್ಮ ಅವರು ಸ್ಪರ್ಧೆಯಲ್ಲಿ ವಿಜೇತ ಮಕ್ಕಳಿಗೆ ಬಹುಮಾನ ವಿತರಣೆ ಮಾಡಿದರು.



ಮೈಸೂರಿನ ಮಾನಸಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಮಂಗಳವಾರ ಜಲವರ್ಣ ಚಿತ್ರ ರಚನಾ ಸ್ಪರ್ಧೆ ಆಯೋಜಿಸಲಾಗಿತ್ತು.

ಮಾ.6, ಜೆಎಸ್‌ಎಸ್ ಅರ್ಬನ್‌ಹಾತ್‌ನಲ್ಲಿ ಕರಕುಶಲ ವಸ್ತುಗಳ ಗಾಂಧಿ ಶಿಲ್ಪ ಬಜಾರ್ ಮೇಳ ಆರಂಭ





ಮೈಸೂರು, ಮಾ.3(ಜಿಎ)–ಮೈಸೂರಿನ ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಮಾ.6ರಿಂದ 15ರವರೆಗೆ ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮೇಳ–ಗಾಂಧೀ ಶಿಲ್ಪ ಬಜಾರ್ ಮೇಳ ಆಯೋಜಿಸಲಾಗಿದೆ ಎಂದು ಕೇಂದ್ರ ಸರ್ಕಾರದ ಕರಕುಶಲ ಅಭಿವೃದ್ಧಿ ಸೇವಾ ಕೇಂದ್ರದ ಕರಕುಶಲ ಉತ್ತೇಜನ ಅಧಿಕಾರಿ ಸಬೀರಾ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದ ವಿವಿಧ ರಾಜ್ಯಗಳ ಕರಕುಶಲಕರ್ಮಿಗಳು ಹಾಗೂ ಕೈಮಗ್ಗ ನೇಕಾರರು, ಕರಕುಶಲ ಮತ್ತು ಕೈಮಗ್ಗ ಉತ್ಪನ್ನಗಳನ್ನು 70 ಮಳಿಗೆಗಳಲ್ಲಿ ಪ್ರದರ್ಶನ ಮತ್ತು ಮಾರಾಟ ಮಾಡಲಿದ್ದಾರೆ. ಮರದ ಕೆತ್ತನೆ, ಶಿಲಾ ಶಿಲ್ಪ, ಕಂಚಿನ ವಿಗ್ರಹಗಳು, ಮರದ ಕುಂದಣ ಕಲೆ, ಮಣ್ಣಿನ ಮಡಿಕೆಗಳು, ಪೇಪರ್, ರತ್ನಗಂಬಳಿ, ಹತ್ತಿ ಜಮಕಾನ, ಇಮಿಟೇಶನ್ ಆಭರಣಗಳು, ಮರದ ಅರಗಿನ ಕಲಾವಸ್ತುಗಳು, ಬೋಟಿಕ್, ಕಲಾಂಕಾರಿ ಚಿತ್ರಕಲೆ, ಚರ್ಮದ ಅಕರ್ಷಕ ವಸ್ತುಗಳು, ಕಲಾತ್ಮಕ ಚರ್ಮದ ಚಪ್ಪಲಿಗಳು, ಚನ್ನಪಟ್ಟಣದ ಗೊಂಬೆಗಳು, ಕಸೂತಿ ಕಲೆ, ತಮಿಳುನಾಡು ರಾಜ್ಯದ, ಮರದ ಕೆತ್ತನೆಗಳು, ಮಧ್ಯಪ್ರದೇಶ ರಾಜ್ಯದ ಮಹೇಶ್ವರಿ, ಚಂದೇರಿ ಸೀರೆಗಳು, ಬಿಹಾರ್ ರಾಜ್ಯದ ಮಧುಬನಿ ಚಿತ್ರಕಲೆ ಮೊದಲಾದವು ಇರಲಿವೆ ಎಂದರು.

ಒಡಿಶಾ ರಾಜ್ಯದ ಪಟ್ಟ ಚಿತ್ರ, ಬೆಳ್ಳಿಯ ಸೂಕ್ಷ್ಮ ವಿನ್ಯಾಸ ವಸ್ತುಗಳು, ಅಸ್ಸಾಂ ರಾಜ್ಯದ ಬಿದಿರು–ಬೆತ್ತದ ವಸ್ತುಗಳು, ಡ್ರೈ ಫ್ಲವರ್‌ಗಳು, ಉತ್ತರಪ್ರದೇಶ ರಾಜ್ಯದ ಚಿಕನ್ ಎಂಬ್ರಾಯ್ಡರಿ, ಕಲಾತ್ಮಕ ಕಲ್ಲಿನ ವಸ್ತುಗಳು, ಪಂಜಾಬ್ ರಾಜ್ಯದ ಫುಲ್ಕಾರಿ ಬಟ್ಟೆಗಳು, ಪಶ್ಚಿಮ ಬಂಗಾಳದ ಕಾಂತಾ ಸೀರೆಗಳು, ಕರಕುಶಲ ಉತ್ಪನ್ನಗಳು ಈ ಮೇಳದಲ್ಲಿ ಲಭ್ಯವಿರುತ್ತವೆ.

ಅರ್ಬನ್ ಹಾತ್ ಸಂಯೋಜನಾಧಿಕಾರಿ ರಾಕೇಶ್ ರೈ ಮಾತನಾಡಿ, ಕರಕುಶಲಕರ್ಮಿಗಳಿಂದ ಗ್ರಾಹಕರಿಗೆ ನೇರವಾಗಿ ಕೈಗೆಟಕುವ ಬೆಲೆಯಲ್ಲಿ ಲಭ್ಯವಾಗಲಿದೆ. ಗಾಂಧಿ ಶಿಲ್ಪ ಬಜಾರ್ ಮೇಳದಲ್ಲಿ ಭಾಗವಹಿಸುತ್ತಿರುವ ಕುಶಲಕರ್ಮಿಗಳಿಗೆ ಉಚಿತವಾಗಿ ಮಳಿಗೆಗಳನ್ನು ನೀಡಲಾಗುವುದು. ಜತೆಗೆ, ಪ್ರಯಾಣ ಭತ್ಯೆ, ದಿನಭತ್ಯೆಯನ್ನೂ ಕರಕುಶಲ ಅಭಿವೃದ್ಧಿ ಆಯುಕ್ತರ ಕಚೇರಿಯಿಂದ ನೀಡಲಾಗುವುದು ಎಂದು ತಿಳಿಸಿದರು.

ಮೇಳವನ್ನು ಮಾ.6ರಂದು ಸಂಜೆ 4ಗಂಟೆಗೆ ಮೈಸೂರು ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜವಳಿ ಮಂತ್ರಾಲಯದ ಪ್ರಾಂತೀಯ ನಿರ್ದೇಶಕ ಲಕ್ಷ್ಮಣ್‌ರಾವ್ ಅತುಕುರಿ, ಸಹಾಯಕ ನಿರ್ದೇಶಕ ಎಸ್.ವಿನೋದ್‌ಕುಮಾರ್, ಕಾವೇರಿ ಹ್ಯಾಂಡ್ ಲೂಮ್ಸ್‌ನ ವ್ಯವಸ್ಥಾಪಕ ನಿರ್ದೇಶಕಿ ಎಂ.ಸೌಮ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಭಾಗವಹಿಸಲಿದ್ದಾರೆ. ಮೇಳವು ಪ್ರತಿದಿನ ಬೆಳಿಗ್ಗೆ 10.30ರಿಂದ ರಾತ್ರಿ 9ರವರೆಗೆ ತೆರೆದಿರುತ್ತದೆ ಪ್ರವೇಶ ಉಚಿತ ಎಂದು ತಿಳಿಸಿದರು.

ಮೈಸೂರು ಜಿಪಂ ಸಿಇಓ ಯುಕೇಶ್‌ಕುಮಾರ್ ಕಾರ್ಯ ವೈಖರಿಗೆ ಜಿಲ್ಲಾಧಿಕಾರಿಗಳ ಪ್ರಶಂಸೆ



ಮೈಸೂರು ಜಿಲ್ಲಾ ಆರ್‌ಡಿಪಿಆರ್ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವಿಜೇತರಾದ ಸಿಬ್ಬಂದಿಗೆ ಜಿಲ್ಲಾಧಿಕಾರಿ ಲಕ್ಷ್ಮೀಕಾಂತರೆಡ್ಡಿ ಬಹುಮಾನ ವಿತರಿಸಿದರು.

ಮೈಸೂರು,ಮಾ.3(ಎಸ್‌ಪಿಎನ್)– ಈಗಿನ ಮೈಸೂರು ಜಿಪಂ ಸಿಇಓ ನೇತೃತ್ವದಲ್ಲಿ ಆರ್‌ಡಿಪಿಆರ್ ಇಲಾಖೆ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಅಂತೆಯೇ ರಾಜ್ಯದಲ್ಲಿ ಉತ್ತಮ ಐಎಎಸ್ ಅಧಿಕಾರಿಯಾಗಿ ಎಸ್.ಯುಕೇಶ್‌ಕುಮಾರ್ ಅವರು ಗುರುತಿಸಿಕೊಂಡಿದ್ದಾರೆ ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಮೆಚ್ಚುಗೆ ವ್ಯಕ್ತಪಡಿಸಿದರು.

ಮೈಸೂರು ಕಲಾಮಂದಿರದಲ್ಲಿ ಜಿಪಂ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಧಿಕಾರಿಗಳು ಮತ್ತು ನೌಕರರ ವೃಂದ ಸಂಘ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಯೋಗದಲ್ಲಿ ಏರ್ಪಡಿಸಿದ್ದ ಮೈಸೂರು ಜಿಲ್ಲಾ ಆರ್‌ಡಿಪಿಆರ್ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಬಹುಮಾನ ವಿತರಿಸಿ, ಸಮಾರೋಪದಲ್ಲಿ ಮಾತಾಡಿದರು.

ನನ್ನ ಸೇವಾವಧಿಯಲ್ಲಿ ಜಿಪಂ ಸಿಇಓ ಆಗಿ ಕೆಲಸ ಮಾಡಿದ್ದು ನನಗೆ ನಿಜವಾಗಿಯೂ ಹೆಚ್ಚು ತೃಪ್ತಿ ತಂದಿದೆ. ಜನರಿಗೆ ಹತ್ತಿರದಲ್ಲಿದ್ದುಕೊಂಡು ಅವರ ಬದುಕನ್ನು ಸುಧಾರಿಸುವ ನಿಟ್ಟಿನಲ್ಲಿ ಆರ್‌ಡಿಪಿಆರ್ ಇಲಾಖೆ ಕೆಲಸ ಮಾಡುತ್ತಿದ್ದು, ಈ ಹಿನ್ನಲೆಯಲ್ಲಿ ಈ ಇಲಾಖೆ ಸಿಬ್ಬಂದಿ ಜನಸ್ನೇಹಿಯಾಗಿ ಕೆಲಸ ಮಾಡಬೇಕು ಹಾಗೂ ಇಲಾಖೆಯ ನೌಕರರಿಗೆ ಎರಡು ದಿನಗಳ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಆಯೋಜಿಸಲಾಗಿದೆ. ಪೌರಾಣಿಕ ನಾಟಕ, ನೃತ್ಯ, ಜನಪದ ಗೀತೆ ಸೇರಿದಂತೆ ಅನೇಕ ಬಗೆಯ ಕಲಾ ಪ್ರದರ್ಶನ ಉತ್ತಮವಾಗಿತ್ತು ಎಂದು ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಜಿಪಂ ಸಿಇಓ ಎಸ್.ಯುಕೇಶ್ ಕುಮಾರ್ ಮಾತನಾಡಿ, ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿ ನೌಕರರು ಉತ್ಸಾಹದಿಂದ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ. ನೌಕರರು ತಮ್ಮ ಕಲಾ ಪ್ರತಿಭೆಯನ್ನು ಅನಾವರಣಗೊಳಿಸಿದ್ದಾರೆ. ಇದೇ ರೀತಿ ಕೆಲಸದ ನಡುವೆಯೂ ಸಮಯ ಸಿಕ್ಕಾಗ ಕಲಾ ಸೇವೆಯನ್ನು ಮುಂದುವರೆಸಬೇಕು ಹಾಗೂ ಇಷ್ಟೇ ಉತ್ಸಾಹದಿಂದ ಎಲ್ಲಾ ನೌಕರರು ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸಬೇಕು ಎಂದು ಸಲಹೆ ನೀಡಿದರು.

ಕ್ರೀಡಾಕೂಟದಲ್ಲಿ ಜಯಗಳಿಸಿದ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಜಿಪಂ ಉಪಕಾರ್ಯದರ್ಶಿ ಬಿ.ಎಂ.ಸವಿತ, ಭೀಮಪ್ಪ ಕೆ.ಲಾಳಿ, ಮುಖ್ಯ ಯೋಜನಾಧಿಕಾರಿ ಕೆ.ಪ್ರಭುಸ್ವಾಮಿ, ಮುಖ್ಯ ಲೆಕ್ಕಾಧಿಕಾರಿ ಸಿದ್ದಗಂಗಮ್ಮ, ಕಾರ್ಯನಿರ್ವಾಹಕ ಅಧಿಕಾರಿಗಳಾದ ಎಸ್.ಪಿ.ಧರಣೇಶ್, ಸಿ.ಕೃಷ್ಣ, ಪ್ರೇಮ್‌ಕುಮಾರ್, ವಿ.ಪಿ.ಕುಲದೀಪ್, ಎ.ಎನ್.ರವಿ, ಕೆ.ಹೊಂಗಯ್ಯ, ಸುನೀಲ್‌ಕುಮಾರ್, ಕೆ.ರಂಗಸ್ವಾಮಿ, ಪಿಡಿಓ ಸಂಘದ ಜಿಲ್ಲಾಧ್ಯಕ್ಷ ಕೆ.ರುಕ್ಮಾಂಗದ, ಪ್ರಕಾಶ್ ಸೇರಿದಂತೆ ಜಿಲ್ಲಾ, ತಾಲೂಕು ಘಟಕದ ಆರ್‌ಡಿಪಿಆರ್ ಅಧಿಕಾರಿಗಳು, ನೌಕರರ ವೃಂದ ಸಂಘಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿ ಪಿಡಿಓ, ಕಾರ್ಯದರ್ಶಿಗಳು, ಎಸ್‌ಡಿಎ, ಡಿಇಓ, ನರೇಗಾ ಸಿಬ್ಬಂದಿ ಇದ್ದರು.

ಮೈಸೂರು ಮಿತ್ರ ಬುಧವಾರ 4 ಮಾರ್ಚ್ 2026

ವೈಭವದ ಶ್ರೀಗಂಗಾಧರೇಶ್ವರಸ್ವಾಮಿ ಮಹಾ ರಥೋತ್ಸವ


ಆದಿಚುಂಚನ ಗಿರಿಯಲ್ಲಿ ಶ್ರೀಗಂಗಾಧರೇಶ್ವರಸ್ವಾಮಿ ಮಹಾ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ನಾಗಮಂಗಲ, ಮಾ.3– ಇತಿಹಾಸ ಪ್ರಸಿದ್ಧ ಪುಣ್ಯಕ್ಷೇತ್ರ ತಾಲೂಕಿನ ಆದಿಚುಂಚನಗಿರಿಯಲ್ಲಿ ಮಂಗಳವಾರ ಮುಂಜಾನೆ ಶ್ರೀಗಂಗಾಧರೇಶ್ವರಸ್ವಾಮಿ ಮಹಾ ರಥೋತ್ಸವ ಹಾಗೂ ಶ್ರೀನಿರ್ಮಲಾನಂದನಾಥ ಸ್ವಾಮೀಜಿ ಅವರ ಅಡ್ಡಪಲ್ಲಕ್ಕಿ ಉತ್ಸವ ಲಕ್ಷಾಂತರ ಭಕ್ತರ ನಡುವೆ ವಿಜೃಂಭಣೆಯಿಂದ ನೆರವೇರಿತು.

ತಾಲೂಕಿನ ಶ್ರೀಕ್ಷೇತ್ರ ಆದಿಚುಂಚನಗಿರಿಯಲ್ಲಿ ಹೋಳಿ ಹುಣ್ಣಿಮೆಯ ಬ್ರಾಹ್ಮಿ ಮುಹೂರ್ತ 4 ಗಂಟೆಗೆ ಸರಿಯಾಗಿ ಶ್ರೀಮಠದ ಪೀಠಾಧ್ಯಕ್ಷ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಅವರು ಆದಿಚುಂಚನಗಿರಿ ರಥ ಬೀದಿಯಲ್ಲಿ ಸರ್ವಾಲಂಕಾರಗೊಂಡಿದ್ದ ರಥಕ್ಕೆ ಪೂಜೆ ಸಲ್ಲಿಸುವ ಮೂಲಕ ಲಕ್ಷಾಂತರ ಭಕ್ತರ ಹರ್ಷೋದ್ಗಾರದ ನಡುವೆ ಮಹಾ ರಥೋತ್ಸವಕ್ಕೆ ಚಾಲನೆ ನೀಡಿದರು.

ರಥೋತ್ಸವದ ಅಂಗವಾಗಿ ಇಡೀ ರಾತ್ರಿ ಶ್ರೀಕ್ಷೇತ್ರದಲ್ಲಿ ತಿರುಗಣಿ ಉತ್ಸವ ಸೇರಿದಂತೆ ನಾನಾ ಪೂಜಾ ಕೈಂಕರ್ಯಗಳು ನಡೆದವು. ಗಂಗಾಧರೇಶ್ವರ ಸ್ವಾಮಿಯನ್ನು ಅಲಂಕೃತಗೊಂಡಿದ್ದ ರಥದಲ್ಲಿ ಪ್ರತಿಷ್ಠಾಪಿಸಲಾಗಿತ್ತು. ರಥೋತ್ಸವಕ್ಕೆ ಚಾಲನೆ ನೀಡುತ್ತಿದ್ದಂತೆ ನೆರೆದಿದ್ದ ಲಕ್ಷಾಂತರ ಭಕ್ತರು ರಥವನ್ನು ಎಳೆದರು. ಭಕ್ತರು ಹಣ್ಣು, ಜವನಗಳನ್ನು ಅರ್ಪಿಸಿ ಭಕ್ತಿ ಭಾವವನ್ನು ಮೆರೆದರು.

ರಥೋತ್ಸವಕ್ಕೆ ಚಾಲನೆ ಸಿಗುತ್ತಿದ್ದಂತೆ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಅವರ ಅಡ್ಡ ಪಲ್ಲಕ್ಕಿ ಉತ್ಸವವೂ ಕೂಡ ಪ್ರಾರಂಭವಾಯಿತು. ಒಂದೆಡೆ ಭಕ್ತರು ರಥವನ್ನು ಎಳೆದು ಧನ್ಯರಾಗುತ್ತಿದ್ದರೆ, ಇನ್ನೊಂದೆಡೆ ಸರ್ವಾಲಂಕಾರ ಭೂಷಿತರಾಗಿ ಚಿನ್ನದ ಕಿರೀಟ ಧರಿಸಿ ಪಲ್ಲಕ್ಕಿಯಲ್ಲಿ ಕುಳಿತು ಭಕ್ತಾದಿಗಳಿಗೆ ದರ್ಶನ ನೀಡುತ್ತಿದ್ದ ಶ್ರೀಗಳನ್ನು ನೋಡಿ ಕಣ್ತುಂಬಿಕೊಂಡರು.

ರಥೋತ್ಸವ ಮತ್ತು ಅಡ್ಡ ಪಲ್ಲಕ್ಕಿ ಉತ್ಸವ ರಥಬೀದಿಯಲ್ಲಿ ಸಂಚರಿಸಿ, ರಥಬೀದಿ ದಕ್ಷಿಣ ದಿಕ್ಕಿನಲ್ಲಿರುವ ಗಣಪತಿ ದೇವಸ್ಥಾನದವರೆಗೆ ಚಲಿಸಿತು. ಗಣಪತಿಗೆ ಪೂಜೆ ಸಲ್ಲಿಸಿದ ನಂತರ ವಾಪಸ್ ರಥಬೀದಿಯಲ್ಲೇ ಬಂದ ರಥೋತ್ಸವ ಮೂಲ ಸ್ಥಾನದಲ್ಲಿ ನಿಂತಿತು. ರಥೋತ್ಸವದ ಹಿನ್ನೆಲೆಯಲ್ಲಿ ಜಿಲ್ಲಾಡಳಿತದಿಂದ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಆದಿಚುಂಚನಗಿರಿ ಜಾತ್ರಾ ಮಹೋತ್ಸವಕ್ಕೆ ನಾಡಿನ ವಿವಿಧೆಡೆಗಳಿಂದ ಲಕ್ಷಾಂತರ ಭಕ್ತರು ಆಗಮಿಸಿದ್ದರು. ರಾತ್ರಿಯಿಡೀ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ರಥದ ಬೀದಿ, ಕಲ್ಯಾಣಿ ಬೀದಿ ಸೇರಿದಂತೆ ಮಠದ ಬೆಟ್ಟದ ತಪ್ಪಲಿನ ಇಕ್ಕೆಲಗಳಲ್ಲಿ ಭಕ್ತರು ತುಂಬಿ ತುಳುಕುತ್ತಿದ್ದರು. ಶ್ರೀರಂಗಪಟ್ಟಣ–ಬೀದರ್ ಹೆದ್ದಾರಿಯಲ್ಲಿರುವ ಕ್ಷೇತ್ರದ ಮುಖ್ಯದ್ವಾರದಿಂದ ತುಮಕೂರು ಹಾಗೂ ಮೈಸೂರು ಮಾರ್ಗಗಳ ಎರಡೂ ಬದಿಯಲ್ಲಿ ಕಿಲೋಮೀಟರ್ ವರೆಗೆ ವಾಹನಗಳು ನಿಂತಿದ್ದವು.

47.75 ಕೋಟಿ ವೆಚ್ಚದ ನಾಲೆಗಳ ಆಧುನೀಕರಣಕ್ಕೆ ಶಾಸಕರಿಂದ ಚಾಲನೆ

ಸೂಳೆಕೆರೆ ಮರುನಾಮಕರಣಕ್ಕೆ ಚಿಂತನೆ: ಶಾಸಕ ಕೆ.ಎಂ.ಉದಯ್


ಕಾರ್ಯಕ್ರಮದಲ್ಲಿ ಶಾಸಕ ಕೆ.ಎಂ.ಉದಯ್ ಮಾತನಾಡಿದರು.

ಭಾರತೀನಗರ, ಮಾ.3– ಈ ಭಾಗದಲ್ಲಿ ಸೂಳೆಕೆರೆ ಪ್ರಸಿದ್ಧಿಗೊಂಡಿದೆ. ಆದರೆ ಆ ಹೆಸರನ್ನು ಕೆಲವು ಅಧಿಕಾರಿಗಳು ಹೇಳಲು ಮುಜುಗರ ಪಡುತ್ತಿದ್ದಾರೆ. ಹೀಗಾಗಿ ಸೂಳೆಕೆರೆಗೆ ಮರು ನಾಮಕರಣ ಮಾಡಲು ಚಿಂತಿಸಲಾಗುತ್ತಿದೆ ಎಂದು ಶಾಸಕ ಕೆ.ಎಂ.ಉದಯ್ ತಿಳಿಸಿದರು.

ಗುರುದೇವರಹಳ್ಳಿಯಲ್ಲಿ ಕಾವೇರಿ ನೀರಾವರಿ ನಿಗಮದಿಂದ 47.75 ಕೋಟಿ ರೂ. ವೆಚ್ಚದಲ್ಲಿ ಸೂಳೆಕೆರೆ ನಾಲೆಗಳ ಆಧುನೀಕರಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಸೂಳೆಕೆರೆಯಲ್ಲಿ ಒತ್ತುವರಿ ಹಾಗೂ ಹೂಳು ತೆಗೆಯಲಾಗುತ್ತಿದೆ. ಇದರಿಂದ ರೈತರಿಗೆ ಮುಂದಿನ ದಿನಗಳಲ್ಲಿ ಸಾಕಷ್ಟು ಅನುಕೂಲವಾಗಲಿದೆ. ಸೂಳೆಕೆರೆಯಲ್ಲಿ ಉದ್ಯಾನ ಮಾಡಲು ಯೋಜನೆ ರೂಪಿಸಿದ್ದೇನೆ ಎಂದರು.


ಬಜೆಟ್‌ನಲ್ಲಿ ಮದ್ದೂರು ಕ್ಷೇತ್ರಕ್ಕೆ ಅನುದಾನ ಕೋರಿದ್ದೇನೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಮಂಡಿಸಲಿರುವ ಬಜೆಟ್‌ನಲ್ಲಿ ಮದ್ದೂರು ಕ್ಷೇತ್ರದ ನೀರಾವರಿಗೆ ಹೆಚ್ಚು ಅನುದಾನ ನೀಡಬೇಕೆಂದು ಕೋರಿದ್ದೇನೆ. ಮತ್ತೆ ಗುರುವಾರ ಭೇಟಿಯಾಗಲಿದ್ದೇನೆ. ಕ್ಷೇತ್ರಕ್ಕೆ ಹೆಚ್ಚು ಅನುದಾನ ಬಿಡುಗಡೆಗೊಳಿಸುತ್ತಾರೆಂಬ ನಂಬಿಕೆ ಇದೆ ಎಂದರು.

ಶಿಂಷಾನದಿಯಿಂದ ಆಚೆ ಇರುವ ಗ್ರಾಮಗಳಿಗೆ ನೀರಿನ ಸೌಲಭ್ಯವಿಲ್ಲ. ಹೀಗಾಗಿ ಏತ ನೀರಾವರಿ ಯೋಜನೆ ಜೊತೆಗೆ ಕೆರೆ ತೂಬು, ಕೋಡು, ಬಂಡುಗಳನ್ನು ಮಾಡುವುದರ ಜೊತೆಗೆ ಕೆರೆಗಳನ್ನು ಬಂದೋಬಸ್ತ್ ಮಾಡಲು ಕ್ರಮ ಕೈಗೊಂಡಿದ್ದೇನೆ. ಗ್ರಾಮಗಳ ವ್ಯಾಪ್ತಿಯ ರಸ್ತೆಗಳ ಅಭಿವೃದ್ಧಿಗೆ 200 ಕೋಟಿ ಬಿಡುಗಡೆಗೊಳಿಸಿಕೊಡಬೇಕೆಂದು ಕೇಳಿಕೊಂಡಿದ್ದೇನೆ. ಇದರಿಂದ ಕ್ಷೇತ್ರದ ಅಭಿವೃದ್ಧಿ ಒಂದು ಹಂತಕ್ಕೆ ಬರುತ್ತದೆ ಎಂದರು.

ಜಿಪಂ ಮಾಜಿ ಅಧ್ಯಕ್ಷ ಬಿ.ಬಸವರಾಜು, ಮಾಜಿ ಸದಸ್ಯ ಎ.ಎಸ್.ರಾಜೀವ್, ಮುಖಂಡರಾದ ಶಂಕರೇಗೌಡ, ಅಮೀನ್ ಶಿವಲಿಂಗಯ್ಯ, ಗುರುದೇವರಹಳ್ಳಿ ಅಪ್ಪಾಜಿ, ಅಜ್ಜಹಳ್ಳಿ ರಾಮಕೃಷ್ಣ, ಮುಟ್ಟನಹಳ್ಳಿ ಚಂದ್ರಶೇಖರ್, ಜೈಭೀಮ್ ಶಿವಲಿಂಗಯ್ಯ, ಕ್ಯಾತಘಟ್ಟ ವಿಜಿಕುಮಾರ್, ಬಿ.ಎಸ್.ಬೋರೇಗೌಡ, ಇಂಜಿನಿಯರ್‌ಗಳಾದ ಪ್ರಶಾಂತ್, ಅವಿನಾಶ್, ಗುತ್ತಿಗೆದಾರ್ ಪ್ರದೀಪ್ ಸೇರಿದಂತೆ ಹಲವರಿದ್ದರು.

ಚಂದ್ರ ಗ್ರಹಣ: ಚೆಲುವನ ದೇವಾಲಯ ಬಂದ್

ಮೇಲುಕೋಟೆ, ಮಾ.3– ಚಂದ್ರ ಗ್ರಹಣ ಹಿನ್ನೆಲೆಯಲ್ಲಿ ಇಲ್ಲಿನ ಶ್ರೀಚೆಲುವನಾರಾಯಣಸ್ವಾಮಿ ದೇವಾಲಯವನ್ನು ಮಧ್ಯಾಹ್ನದ ನಂತರ ಮಂಗಳವಾರ ಬಂದ್ ಮಾಡಲಾಗಿತ್ತು.



ಬೆಳಗ್ಗೆ ಎಂದಿನಂತೆ ದೇವರಿಗೆ ಪೂಜೆ ಸಲ್ಲಿಸಿದ ಬಳಿಕ ಮಧ್ಯಾಹ್ನ 12.30ಕ್ಕೆ ಚೆಲುವನಾರಾಯಣಸ್ವಾಮಿ ದೇವಾಲಯವನ್ನು ಮುಚ್ಚಲಾಗಿತ್ತು. ಸಂಜೆ ಕೇತುಗ್ರಸ್ಥ ಚಂದ್ರಗ್ರಹಣ ಮುಕ್ತಾಯವಾದ ನಂತರ ರಾತ್ರಿ 7.30ಕ್ಕೆ ದೇವಾಲಯ ತೆರೆದು ಶುಚಿಗೊಳಿಸಲಾಯಿತು. ನಂತರ ಚೆಲುವನಾರಾಯಣಸ್ವಾಮಿಗೆ ಗ್ರಹಣದ ಶಾಂತಿಗಾಗಿ ಅಭಿಷೇಕ ನೆರವೇರಿಸಿ ಲೋಕ ಕಲ್ಯಾಣಾರ್ಥಕ್ಕಾಗಿ ಸಂಕಲ್ಪ ನೆರವೇರಿಸಲಾಯಿತು. ಬಳಿಕ ದೇವಾಲಯದಲ್ಲಿ ಸಂಧ್ಯಾಕಾಲ ಮತ್ತು ರಾತ್ರಿ ಪೂಜೆ ನೆರವೇರಿತು. ಚಂದ್ರ ಗ್ರಹಣ ಹಿನ್ನೆಲೆಯಲ್ಲಿ ಭಕ್ತರಿಗೆ 4 ರಿಂದ ಸಂಜೆ 6 ರವರೆಗೆ ದೇವರ ದರ್ಶನ ನಿರ್ಬಂಧಿಸಲಾಗಿತ್ತು.

ಚಂದ್ರ ಗ್ರಹಣದ ಪರಿಣಾಮ ರಾಶಿಯಲ್ಲಿ ದೋಷವಿರುವ ಭಕ್ತರು ಜ್ಯೋತಿಷಿಗಳ ಸಲಹೆಯಂತೆ ಚೆಲುವನಾರಾಯಣಸ್ವಾಮಿ ದರ್ಶನ ಪಡೆದರು. ದೇವಾಲಯದ ಸ್ಥಾನೀಕ ಪರಿಚಾರಕ ಅರ್ಚಕ ಹಾಗೂ ಕೈಂಕರ್ಯಪರರು ಕಲ್ಯಾಣಿ ಹಾಗೂ ವಿವಿಧ ಕೊಳಗಳಲ್ಲಿ ಗ್ರಹಣದ ವೇಳೆ ಜಪ–ತಪಾದಿಗಳನ್ನು ಆಚರಿಸಿ ಮೋಕ್ಷ ಸ್ನಾನ ಮಾಡಿ ಚೆಲುವನಾರಾಯಣಸ್ವಾಮಿ ಕೈಂಕರ್ಯದಲ್ಲಿ ಭಾಗಿಯಾದರು.

ಕುಡಿಯುವ ನೀರಿಗಾಗಿ ಖಾಲಿ ಕೊಡ ಪ್ರದರ್ಶನ


ಕುಡಿಯುವ ನೀರಿಗಾಗಿ ಖಾಲಿ ಕೊಡ ಹಿಡಿದು ಪ್ರತಿಭಟನೆ ನಡೆಸಲಾಯಿತು.

ಕೆ.ಆರ್.ಪೇಟೆ, ಮಾ.3– ತಾಲೂಕಿನ ಹಿರೀಕಳಲೆ ಗ್ರಾಪಂ ವ್ಯಾಪ್ತಿಯ ಕರ್ನಾಟಕ ಹೌಸಿಂಗ್ ಬೋರ್ಡ್ ಕಾಲೋನಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗಹರಿಸಬೇಕು ಎಂದು ಆಗ್ರಹಿಸಿ ನಿವಾಸಿಗಳು ಖಾಲಿ ಕೊಡ ಹಿಡಿದು ಪ್ರತಿಭಟನೆ ನಡೆಸಿದರು.

ತಾಲೂಕಿನ ಹಿರೀಕಳಲೆ ಗ್ರಾಪಂ ಎದುರು ಖಾಲಿ ಕೊಡಗಳೊಂದಿಗೆ ಜಮಾಯಿಸಿದ ನಿವಾಸಿಗಳು ಗ್ರಾಪಂ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಹೌಸಿಂಗ್ ಬೋರ್ಡ್ ಕಾಲೋನಿಯಲ್ಲಿ 50ಕ್ಕೂ ಹೆಚ್ಚು ಕುಟುಂಬಗಳು ವಾಸಿಸುತ್ತಿದ್ದು, ಕುಡಿಯುವ ನೀರಿಗೆ ತೀವ್ರ ಹಾಹಾಕಾರ ಉಂಟಾಗಿದೆ. ಕೊಳವೆ ಬಾವಿಗಳಲ್ಲಿ ನೀರು ಕಡಿಮೆಯಾಗಿದೆ ಹಾಗಾಗಿ ಬೇಸಿಗೆಗೂ ಮುನ್ನವೇ ಹೌಸಿಂಗ್ ಬೋರ್ಡ್ ಕಾಲೋನಿಯಲ್ಲಿ ಕುಡಿಯುವ ನೀರಿಗೆ ತೀವ್ರ ಸಮಸ್ಯೆ ಎದುರಾಗಿದೆ. ಹಲವು ಬಾರಿ ಗ್ರಾಪಂ ಅಧಿಕಾರಿಗಳಿಗೆ ಮಾಹಿತಿ ನೀಡಿದರೂ ಸಹ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಿಲ್ಲ. ಇದರಿಂದ ಅನಿವಾರ್ಯವಾಗಿ ಪ್ರತಿಭಟನೆ ಹಮ್ಮಿಕೊಳ್ಳಬೇಕಾಯಿತು ಎಂದು ಬಡಾವಣೆ ನಿವಾಸಿಗಳು ತಿಳಿಸಿದರು.

ಕರ್ನಾಟಕ ಹೌಸಿಂಗ್ ಬೋರ್ಡ್ ಕಾಲೋನಿಯಲ್ಲಿ ಬೀದಿ ದೀಪ ಇಲ್ಲ. ಕುಡಿಯುವ ನೀರಿಗೆ ತೊಂದರೆಯಾಗಿದೆ. ಕಸ ಸಾಗಿಸುವ ವಾಹನವೂ ಸಹ ಬರುತ್ತಿಲ್ಲ. ಹೀಗಾಗಿ ಮೂಲಸೌಲಭ್ಯಗಳ ಕೊರತೆ ಎದುರಾಗಿದೆ. ಹಾಗಾಗಿ ಕೂಡಲೇ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು. ನಂತರ ಹಂತ ಹಂತವಾಗಿ ಎಲ್ಲಾ ಮೂಲಭೂತ ಸೌಲಭ್ಯ ಕಲ್ಪಿಸಬೇಕು ಎಂದು ಸ್ಥಳಕ್ಕಾಗಮಿಸಿದ ಗ್ರಾಪಂ ಅಧಿಕಾರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನಾಕಾರರಿಂದ ಮನವಿ ಸ್ವೀಕರಿಸಿದ ಮಾತನಾಡಿದ ಪಿಡಿಓ ನವೀನ್‌ಕುಮಾರ್, ಕುಡಿಯುವ ನೀರಿನ ಸಮಸ್ಯೆಯನ್ನು ಆದಷ್ಟು ಶೀಘ್ರ ಬಗೆಹರಿಸಲಾಗುವುದು. ಒಣಕಸ ಸಾಗಿಸುವ ವಾಹನವನ್ನು ನಾಳೆಯಿಂದಲೇ ಕಳುಹಿಸಲಾಗುವುದು. ಬೀದಿ ದೀಪಗಳನ್ನು ಅಳವಡಿಸಲಾಗುವುದು ಎಂದು ಭರವಸೆ ನೀಡಿದರು. ಪ್ರತಿಭಟನೆಯಲ್ಲಿ ತಾಪಂ ಮಾಜಿ ಅಧ್ಯಕ್ಷ ಜಯರಂಗ, ಮುಖಂಡರಾದ ವಾಸು, ಮಹಿಳೆಯರಾದ ವೇದಾವತಿ, ಮಣಿ, ರಶ್ಮಿ, ಇಂದ್ರಾಮಣಿ, ರುಕ್ಮಿಣಿ, ಸಿ.ಬಿ.ಚೇತನ್‌ಕುಮಾರ್, ಮಂಜುನಾಥ್, ಮುರುಗೇಶ್ ಸೇರಿದಂತೆ ಮತ್ತಿತರರಿದ್ದರು.

ಒಂದನೇ ಪುಟದಿಂದ

ಪ್ರಪಂಚದಲ್ಲಿ ತೈಲ ಬಿಕ್ಕಟ್ಟು ಭಯ...!

ಕೊಂಡಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಇರಾನ್‌ನ ಅತ್ಯಂತ ಹಿರಿಯ ಕಮಾಂಡರ್ ದಾವೂದ್ ಅಲಿ ಅವರು ಸಾವನ್ನಪ್ಪಿರುವುದಾಗಿ ಇಸ್ರೇಲ್ ಸೇನೆ ತಿಳಿಸಿದೆ. ಆದರೆ ಇರಾನ್ ತನ್ನ ವೈರಿ ರಾಷ್ಟ್ರಗಳ ಲೆಕ್ಕಾಚಾರ ತಲೆಕೆಳಗಾಗಿಸುವ ನಿಟ್ಟಿನಲ್ಲಿ ಭಾರೀ ಪ್ರತಿದಾಳಿ ನಡೆಸುತ್ತಿದೆ. ಭೀಕರ ದಾಳಿಯ ನಡುವೆಯೇ ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್, ಅಮೆರಿಕದ ಹೆಮ್ಮೆಯ ಮಿಸೈಲ್ ಟ್ರ್ಯಾಕಿಂಗ್ ವ್ಯವಸ್ಥೆಯನ್ನೇ ಧ್ವಂಸಗೊಳಿಸಿರುವುದಾಗಿ ಘೋಷಿಸಿದೆ. ಗಲ್ಫ್ ಪ್ರದೇಶದಲ್ಲಿನ ಅಮೆರಿಕದ ಅತಿದೊಡ್ಡ ರೇಡಾರ್ ಅನ್ನು ನಿಖರ ಕ್ಷಿಪಣಿ ದಾಳಿಯ ಮೂಲಕ ಸಂಪೂರ್ಣವಾಗಿ ನಾಶಪಡಿಸಿರುವುದಾಗಿ ಟೆಹ್ರಾನ್ ಟೈಮ್ಸ್ ವರದಿ ಮಾಡಿದೆ. ವಿಶ್ವದ ಐದನೇ ಒಂದು ಭಾಗ ತೈಲ ಹಾದು ಹೋಗುವ ಹಾರ್ಮುಜ್ ಜಲಸಂಧಿ ಮುಚ್ಚುವ ಮೂಲಕ ಇರಾನ್ ಪ್ರಪಂಚದಲ್ಲಿ ತೈಲಬಿಕ್ಕಟ್ಟು ಸೃಷ್ಟಿಸಿದೆ. ದೇಶದ ಕೆಲವು ಪಾರಂಪರಿಕ ತಾಣಗಳ ಮೇಲೆ ಅಮೆರಿಕಾ ಹಾಗೂ ಇಸ್ರೇಲ್ ಬಾಂಬ್ ದಾಳಿಗೆ ಮುಂದಾಗಿರುವ ಹಿನ್ನೆಲೆಯಲ್ಲಿ ಇರಾನ್ ಸರ್ಕಾರವು ಯುನೆಸ್ಕೋಗೆ ಔಪಚಾರಿಕವಾಗಿ ದೂರು ನೀಡಿದೆ.

ದಿನವಿಡೀ ಕದನ: ಇರಾನಿನ ಮಿಲಿಟರಿ ತಾಣಗಳು ಮತ್ತು ಹೆಜ್ಬೊಲ್ಲಾ ಗುರಿಯಾಗಿಸಿಕೊಂಡು ಇಸ್ರೇಲ್ ಮಂಗಳವಾರ ಬೆಳಿಗ್ಗೆ ಟೆಹ್ರಾನ್ ಮತ್ತು ಬೈರುತ್ ಮೇಲೆ ಏಕಕಾಲದಲ್ಲಿ ದಾಳಿ ನಡೆಸಿತು. ಈ ದಾಳಿ ಮೂಲಕ ಇಸ್ರೇಲ್ ಪಡೆಗಳು ದಕ್ಷಿಣ ಲೆಬನಾನ್‌ನಲ್ಲಿ ಹೆಚ್ಚಿನ ಸ್ಥಳಗಳನ್ನು ವಶಪಡಿಸಿಕೊಂಡವು. ಮಧ್ಯಾಹ್ನದ ವೇಳೆಗೆ ಇರಾನ್‌ನ ಹೊಸ ಸರ್ವೋಚ್ಚ ನಾಯಕನನ್ನು ಆಯ್ಕೆ ಮಾಡುವ ಪವಿತ್ರ ನಗರದ ಮೇಲೆ ದಾಳಿ ಮಾಡುವ ಉದ್ದೇಶವನ್ನು ಹೊಂದಿತ್ತಾದರೂ ಕಡೇ ಕ್ಷಣದಲ್ಲಿ ಯೋಜನೆ ಕೈಬಿಟ್ಟಿತು ಎಂದು ವರದಿಯಾಗಿದೆ. ಅಮೆರಿಕ ಹಾಗೂ ಇಸ್ರೇಲ್ ಜಂಟಿ ವೈಮಾನಿಕ ದಾಳಿ ವೇಳೆ ಇರಾನ್‌ನ ನಟಾಂಜ್ ಪರಮಾಣು ಸ್ಥಾವರದಲ್ಲಿನ ವಿಕಿರಣಶೀಲ ಲೋಹ ಶುದ್ಧೀಕರಣ ಘಟಕಕ್ಕೆ ಸ್ವಲ್ಪ ಮಟ್ಟಿನ ಹಾನಿಯಾಗಿದೆ. ಆದರೆ ವಿಕಿರಣ ಸೋರಿಕೆಯಾಗುವ ಸಾಧ್ಯತೆ ಕಡಿಮೆ ಎಂದು ಅಂತರರಾಷ್ಟ್ರೀಯ ಅಣುಶಕ್ತಿ ಏಜೆನ್ಸಿ ಮಂಗಳವಾರ ಹೇಳಿದೆ.

ಅಮೆರಿಕ ರಾಯಭಾರ ಕಚೇರಿ ಬಂದ್: ರಿಯಾದ್‌ನಲ್ಲಿರುವ ಒಂದು ರಾಯಭಾರ ಕಚೇರಿಗೆ ಎರಡು ಶಂಕಿತ ಇರಾನಿನ ಡ್ರೋನ್‌ಗಳು ಅಪ್ಪಳಿಸಿದ ಪರಿಣಾಮ ಅದನ್ನು ಮುಚ್ಚಲಾಗಿದೆ. ಕುವೈತ್‌ನಲ್ಲಿರುವ ಮತ್ತೊಂದು ಕಚೇರಿಯನ್ನೂ ಮುಂದಿನ ಸೂಚನೆವರೆಗೆ ಮುಚ್ಚುವುದಾಗಿ ಅಮೆರಿಕ ಘೋಷಿಸಿದೆ. ಭದ್ರತಾ ಕಾಳಜಿಯಿಂದಾಗಿ ಜೋರ್ಡಾನ್, ಬಹ್ರೇನ್, ಇರಾಕ್, ಕತಾರ್, ಕುವೈತ್ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್‌ನಿಂದ ತುರ್ತು ಸೇವೆಯಲ್ಲದ ಅಮೆರಿಕದ ಸರ್ಕಾರಿ ಸಿಬ್ಬಂದಿ ಮತ್ತು ಅವರ ಕುಟುಂಬಗಳು ಹೊರ ಹೋಗುವಂತೆ ಯುಎಸ್ ಸ್ಟೇಟ್ ಡಿಪಾರ್ಟ್‌ಮೆಂಟ್ ಆದೇಶಿಸಿರುವುದಾಗಿ ಹೇಳಲಾಗಿದೆ.

ಸಾವಿನ ಸಂಖ್ಯೆ ಏರಿಕೆ: ಯುದ್ಧ ಪ್ರಾರಂಭವಾದಾಗಿನಿಂದ ಇರಾನ್‌ನಲ್ಲಿ 787 ಕ್ಕೂ ಹೆಚ್ಚು ಜನ ಸಾವನ್ನಪ್ಪಿದ್ದಾರೆ ಎಂದು ಇರಾನ್‌ನ ರೆಡ್ ಕ್ರೆಸೆಂಟ್ ಅನ್ನು ಉಲ್ಲೇಖಿಸಿ ವರದಿ ಮಾಡಲಾಗಿದೆ. ಇರಾನ್ ವಿರುದ್ಧ ಅಮೆರಿಕದ ದಾಳಿಗಳ ದೊಡ್ಡ ಅಲೆ ಎದ್ದಿದ್ದು, ಸಾವಿನ ಸಂಖ್ಯೆ ಮತ್ತಷ್ಟು ಹೆಚ್ಚುವ ಸಾಧ್ಯತೆ ಇದೆ. ಇಸ್ರೇಲ್ ನಲ್ಲಿ ಕ್ಷಿಪಣಿಯ ಚೂರು ಬಿಡಿದು ಏಳು ಜನರಿಗೆ ಗಾಯಗಳಾಗಿವೆ. ಇರಾನ್ ಡ್ರೋನ್ ಅವಶೇಷಗಳು ಯುಎಇಯ ಫುಜೈರಾ ತೈಲ ಕೈಗಾರಿಕಾ ವಲಯದಲ್ಲಿ ಬಿದ್ದು ಬೆಂಕಿ ಉಂಟಾಗಿದ್ದು, ಅಪಾಯದ ಬಗ್ಗೆ ವರದಿಯಾಗಿಲ್ಲ.

ಆಪರೇಷನ್ ಎಪಿಕ್ ಫ್ಯೂರಿ: ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ನಡೆಸುತ್ತಿರುವ ಆಪರೇಷನ್ ಎಪಿಕ್ ಫ್ಯೂರಿ ಇರಾನ್‌ನ ಇಡೀ ಆಡಳಿತ ಯಂತ್ರವನ್ನೇ ಬುಡಮೇಲು ಮಾಡಿದೆ. ಇರಾನ್ ಸರ್ವೋಚ್ಚ ನಾಯಕರಾಗಿದ್ದ ಅಯತೊಲ್ಲಾ ಅಲಿ ಖಮೇನಿ ಅವರ ಸಾವಿನ ಬೆನ್ನಲ್ಲೇ ಕೇವಲ ಎರಡು ದಿನಗಳ ಅಂತರದಲ್ಲಿ ಇರಾನ್‌ನ ಇಬ್ಬರು ರಕ್ಷಣಾ ಸಚಿವರು ಹತ್ಯೆಯಾಗಿರುವುದರಿಂದ ಇರಾನ್ ಈಗ ನಾಯಕನಿಲ್ಲದ ದೇಶವಾಗಿ ಮಾರ್ಪಟ್ಟಿದೆ. ದಿ ಸ್ಪೆಕ್ಟೇಟರ್ ಇಂಡೆಕ್ಸ್ ವರದಿಯ ಪ್ರಕಾರ, ಮೊದಲ ದಿನದ ದಾಳಿಯಲ್ಲಿ ಇರಾನ್ ರಕ್ಷಣಾ ಸಚಿವ ಅಮೀರ್ ನಾಸಿ ರ್ಜಾದೆ ಮತ್ತು ರೆವಲ್ಯೂಷನರಿ ಗಾರ್ಡ್ಸ್ ಕಮಾಂಡರ್ ಮೊಹಮ್ಮದ್ ಪಕ್ಪೋರ್ ಹತರಾಗಿದ್ದರಿಂದ ಅವರ ಸ್ಥಾನಕ್ಕೆ ತಕ್ಷಣವೇ ನೇಮಕಗೊಂಡಿದ್ದ ಹೊಸ ರಕ್ಷಣಾ ಸಚಿವ ಸೈಯದ್ ಮಜಿದ್ ಇಬ್ ಅಲ್–ರೆಜಾ ಅವರು ಕೂಡ ಅಧಿಕಾರ ವಹಿಸಿಕೊಂಡ ಕೆಲವೇ ಗಂಟೆಗಳಲ್ಲಿ ಇಸ್ರೇಲ್‌ನ ಭೀಕರ ವೈಮಾನಿಕ ದಾಳಿಗೆ ಬಲಿಯಾಗಿದ್ದಾರೆ. ಈ ಟಾರ್ಗೆಟೆಡ್ ಕಿಲ್ಲಿಂಗ್ ಇರಾನ್ ಮಿಲಿಟರಿಯ ನೈತಿಕ ಸ್ಥೈರ್ಯವನ್ನೇ ಕುಗ್ಗಿಸಿದೆ. ಇದೇ ವೇಳೆ ಯುಎಸ್ ಸೆಂಟ್ರಲ್ ಕಮಾಂಡ್ 1700ಕ್ಕೂ ಹೆಚ್ಚು ಗುರಿಯೊಂದಿಗೆ ದಾಳಿ ಮುಂದುವರೆಸಿದೆ ಎನ್ನಲಾಗಿದೆ.

ಇರಾನ್‌ನ ಹೆಚ್ಚಿನ ಮಿಲಿಟರಿ ಸ್ಥಾಪನೆಗಳನ್ನು ಧ್ವಂಸಗೊಳಿಸಲಾಗಿದೆ ಎಂದು ಘೋಷಿಸಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಮುಂದಿನ ಹೊಸ ದಾಳಿಗಳು ಇರಾನ್ ನಾಯಕತ್ವವನ್ನು ಗುರಿಯಾಗಿಸಿ ಕೊಂಡಿವೆ ಎಂದು ಹೇಳಿದ್ದಾರೆ. ಇರಾನ್ ಕೂಡ ಅಮೆರಿಕಾ–ಇಸ್ರೇಲ್ ವಿರುದ್ಧ ಸೆಡ್ಡು ಹೊಡೆದಿರುವುದರಿಂದ ಯುದ್ಧ ಮತ್ತೊಂದು ಹಂತಕ್ಕೇರುವ ಸಾಧ್ಯತೆ ದಟ್ಟವಾಗಿದೆ. ಪರೋಕ್ಷ ಪರಿಣಾಮದಿಂದ ವಿಶ್ವದ ಹಲವು ದೇಶಗಳಲ್ಲೂ ಆತಂಕ ಸೃಷ್ಟಿಯಾಗಿದೆ.

ಸೈಪ್ರಸ್‌ನಲ್ಲಿ ಇರಾನ್ ದಾಳಿ: ಇಂಗ್ಲೆಂಡ್ ವಾಯು ನೆಲೆ ಇರುವ ಸೈಪ್ರಸ್‌ನಲ್ಲಿ ಇರಾನ್ ದಾಳಿ ನಡೆಸಿದೆ. ಈ ಹಿನ್ನೆಲೆಯಲ್ಲಿ ತನ್ನ ನೆಲೆ ಕಾಪಾಡಿಕೊಳ್ಳಲು ಇಂಗ್ಲೆಂಡ್ ಯುದ್ಧ ನೌಕೆಯನ್ನು ಅಲ್ಲಿಗೆ ರವಾನಿಸಿದೆ.

ಟ್ರಂಪ್ ಬೇಸರ: ನ್ಯಾಟೋ ರಾಷ್ಟ್ರಗಳ ಬಗ್ಗೆ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಸಮಾಧಾನ ಹೊರ ಹಾಕಿದ್ದಾರೆ. ಜರ್ಮನಿ ತಮ್ಮ ನೆರವಿಗೆ ಇದೆ. ಸ್ಪೇನ್ ಜೊತೆಗಿನ ಎಲ್ಲಾ ಸಂಬಂಧ ಕಡಿದುಕೊಳ್ಳುವುದಾಗಿ ಹೇಳಿದ್ದಾರೆ. ಅಲ್ಲದೆ ಬ್ರಿಟನ್ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿರುವ ಟ್ರಂಪ್, ಅಮೆರಿಕಾ ಬಿಟ್ಟರೆ ಯಾವುದೇ ದೇಶ ಸಮರ್ಥ ಸೇನೆ ಹೊಂದಿಲ್ಲ ಎಂದು ಬೇಸರ ಹೊರ ಹಾಕಿದ್ದಾರೆ.

ಯುದ್ಧ ಉಲ್ಬಣ ಸಂಭವ

ಆಗಬಹುದು. 'ಚಂದ್ರ' ಒಂದು ಶೀತಗ್ರಹ. ಚಂದ್ರನ ರಾಶಿಯು ಕರ್ಕಾಟಕವಾಗಿದ್ದು, ಕರ್ಕಾಟಕ (ಏಡಿ) ಇದು ವಾಸ ಮಾಡುವುದು ಕೂಡ ನೀರಿನಲ್ಲೇ ಆಗಿದೆ. ಹಾಗಾಗಿ ಮಳೆ ವ್ಯಾಪಕಗೊಂಡು ಪ್ರವಾಹ ತಲೆದೂರಬಹುದು ಎಂದು ತಿಳಿಸಿದರು.

ಕೇತುಗ್ರಸ್ತ ಚಂದ್ರಗ್ರಹಣ ಸಂಭವಿಸಿರುವ ಕಾರಣ ದೇಶ ದೇಶಗಳ ನಡುವೆ ಯುದ್ಧ ಹೆಚ್ಚಾಗಬಹುದು. ಏಕೆಂದರೆ ಕೇತುಗ್ರಹವನ್ನು ಕುಜಗ್ರಹದ ಸಮೀಪ ಗ್ರಹ ಎಂದು ಕರೆಯಲಾಗಿದೆ. ಕುಜ ಎಂದರೆ ವಾರಿಯರ್ (ಕ್ಷತ್ರೀಯ). ಕೈಯ್ಯಲ್ಲಿ ಯಾವಾಗಲೂ ಆಯುಧ ಹಿಡಿದಿರುತ್ತಾನೆ. ಕೆಂಪು ಕಣ್ಣು, ಉಗ್ರ ಸ್ವರೂಪದ ಹಿನ್ನೆಲೆಯಲ್ಲಿ ಕೇತುಗ್ರಸ್ತ ಚಂದ್ರಗ್ರಹಣದಿಂದ ದೇಶ–ದೇಶಗಳ ಮಧ್ಯೆ ಯುದ್ಧ ಉಲ್ಬಣಿಸಬಹುದು. ದುರ್ಗೆ, ಶಿವಾರಾಧನೆ, ಉಪಾಸನೆ ಮಾಡುವುದರಿಂದ ತಕ್ಕಮಟ್ಟಿಗೆ ಪರಿಹಾರ ದೊರೆಯಲಿದೆ. ಚಂದ್ರನನ್ನು ಮನೋ ಕಾರಕ ಗ್ರಹ ಎಂದು ಕರೆಯಲಾಗಿದೆ. ಕೇತುಗ್ರಸ್ತ ಚಂದ್ರ ಗ್ರಹಣದ ಕಾರಣ ಮನುಷ್ಯರ ಮನಸ್ಸಿನ ಮೇಲೆ ವಿಕಾರಗಳು ಉಂಟಾಗಲಿದೆ. ಅದು ಸಾಧುವಾಗಿ ಇರುವುದಿಲ್ಲ. ಕುಕೃತ್ಯಗಳು ಹೆಚ್ಚಳವು ಸಮಾಜದಲ್ಲಿ ಕಂಡುಬರಲಿದೆ. ಅವುಗಳಿಂದ ತಕ್ಕಮಟ್ಟಿಗೆ ಪಾರಾಗಲು ಶಿವರಾಧನೆ, ದುರ್ಗರಾಧನೆ ಮೊರೆ ಹೋಗಬಹುದು. ಗ್ರಹಣದ ಕಂಪನ ಮತ್ತು ವಿಕಿರಣ ಕಾರಣಕ್ಕೆ ಗ್ರಹಣದ ಸಮಯದಲ್ಲಿ ದೇವಸ್ಥಾನಗಳ ಬಾಗಿಲು ಮುಚ್ಚಲಾಗುತ್ತದೆ. ಏಕೆಂದರೆ ದೇವರ ಮೂರ್ತಿಯಲ್ಲಿ ಆವಿರ್ಭಾವವಾಗಿರುವ ಶಕ್ತಿ ಕಡಿಮೆಯಾಗುತ್ತದೆ. ಅದೇ ಕಾರಣಕ್ಕೆ ಶುದ್ಧೀಕರಣ ಮಾಡಲಾಗುತ್ತದೆ. ಆ ಮೂಲಕ ದೇವರ ಮೂರ್ತಿಯಲ್ಲಿ ಆವಿರ್ಭಾವವಾದ ಶಕ್ತಿ ಕುಂದದಂತೆ ನೋಡಿಕೊಳ್ಳಲಾಗುತ್ತದೆ ಎಂದು ಅವರು ತಿಳಿಸಿದರು.

ಇರಾನ್ ಶಾಲಾ ಬಾಲಕಿಯರು ಬಲಿ



ಇರಾನಿನ ಸರ್ಕಾರಿ ಮಾಧ್ಯಮ ವರದಿ ಮಾಡಿದೆ. ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಈ ವಿಡಿಯೋ ಪೋಸ್ಟ್ ಮಾಡಿರುವ ಸರ್ಕಾರಿ ಮಾಧ್ಯಮ, ಮಿನಾಬ್ ಎಲಿಮೆಂಟರಿ ಶಾಲೆಯ ಮೇಲೆ ಯುಎಸ್ ಮತ್ತು ಇಸ್ರೇಲಿ ಆಡಳಿತದಿಂದ ನಡೆದ ಭಯೋತ್ಪಾದಕ ದಾಳಿಗೆ ಬಲಿಯಾದರ ಅಂತ್ಯಕ್ರಿಯೆ ಮೆರಣಿಗೆಯಾಗಿದೆ.

ಶನಿವಾರ US ಮತ್ತು ಇಸ್ರೇಲ್‌ನಿಂದ ಹತ್ಯೆಯಾದ 165ಕ್ಕೂ ಹೆಚ್ಚು ಅಮಾಯಕ ಇರಾನಿನ ಶಾಲಾ ಬಾಲಕಿಯರ ಅಂತ್ಯಕ್ರಿಯೆಯ ಮೆರವಣಿಗೆಯಲ್ಲಿ ಜನಸಾಗರವೇ ಹರಿದುಬಂದಿತು ಎಂದು ಹೇಳಿದೆ. ಇರಾನ್‌ನಲ್ಲಿ ಯುಎಸ್–ಇಸ್ರೇಲಿ ದಾಳಿಯ ನಂತರ ದೇಶದ ಹಾರ್ಮೋಜ್ಗನ್ ಪ್ರಾಂತ್ಯದ ಮಿನಾಬ್ ಬಾಲಕಿಯರ ಪ್ರಾಥಮಿಕ ಶಾಲೆಯಲ್ಲಿ ಸುಮಾರು 100 ಮಂದಿ ಗಾಯಗೊಂಡಿರುವುದಾಗಿ ಯುಎನ್ ನ್ಯೂಸ್ ವರದಿ ಮಾಡಿದೆ. ಅಮೆರಿಕ, ಇಸ್ರೇಲ್ ನ ಈ ಮಿಲಿಟರಿ ದಾಳಿ ಬಗ್ಗೆ ಗಓಇಖಅಔ ತೀವ್ರ ಕಳವಳ ವ್ಯಕ್ತಪಡಿಸಿದೆ. ಅಂತಾರಾಷ್ಟ್ರೀಯ ಮಾನವೀಯ ಕಾನೂನಿನ ಅಡಿಯಲ್ಲಿ ವಿದ್ಯಾರ್ಥಿಗಳನ್ನು ರಕ್ಷಿಸಬೇಕಾಗಿದೆ. ಕ್ಷಣ ಸಂಸ್ಥೆಗಳ ವಿರುದ್ಧದ ದಾಳಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಅಪಾಯವನ್ನುಂಟುಮಾಡುತ್ತವೆ ಮತ್ತು ಶಿಕ್ಷಣದ ಹಕ್ಕನ್ನು ಹಾಳುಮಾಡುತ್ತವೆ ಎಂದು ಸಾಮಾಜಿಕ ಜಾಲತಾಣದಲ್ಲಿ ಯುನೆಸ್ಕೋ ಹೇಳಿಕೆ ಬಿಡುಗಡೆ ಮಾಡಿದೆ.

ನಭೋಮಂಡಲದ ವಿಸ್ಮಯಕ್ಕೆ ನಿಬ್ಬೆರಗಾದ ಜನ

ಆದ ಕಾರಣ 6.50ರ ವೇಳೆಗೆ ಚಂದ್ರ, ಗಾಢ ಕೆಂಪು ಬಣ್ಣಕ್ಕೆ ತಿರುಗಿತು. ಮೈಸೂರಿನಲ್ಲಿ ಗ್ರಹಣ ಗೋಚರವಾಗುವುದಿಲ್ಲವೆಂಬ ಕಾರಣಕ್ಕೆ ಎಲ್ಲಿಯೂ ವೀಕ್ಷಣಾ ಕೇಂದ್ರಗಳನ್ನು ಸ್ಥಾಪಿಸಿರಲಿಲ್ಲ. ಆದರೆ ಅಚ್ಚರಿಯೆಂಬಂತೆ ಸಂಜೆ ಸುಮಾರು 6.50ರ ವೇಳೆಗೆ ಮೈಸೂರಿನಲ್ಲಿ ಕಾಣಿಸಿಕೊಂಡ ಚಂದ್ರ ಗ್ರಹಣ ಗಾಢ ಕೆಂಪು ಬಣ್ಣದಿಂದ ಗಮನ ಸೆಳೆಯಿತು. 10 ನಿಮಿಷಗಳ ಕಾಲ ತನ್ನ ವಿಶಿಷ್ಟ ಕಾಂತಿಯಿಂದ ಸೀಡುಗರ ನಿಬ್ಬೆರಗಾಗಿಸಿತು. ನಿಧಾನವಾಗಿ ತಾಮ್ರ ಬಣ್ಣಕ್ಕೆ ಮರಳಿ, ಸ್ವಲ್ಪ ಹೊತ್ತಿನಲ್ಲೇ ಸಹಜ ಸ್ಥಿತಿ ತಲುಪಿತು. ಮೈಸೂರಲ್ಲಿ ಗೋಚರವಾದ ಚಂದ್ರಗ್ರಹಣದ ಬಗ್ಗೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಮೈಸೂರು ಸೈನ್ಸ್ ಫೌಂಡೇಷನ್ ಪ್ರಧಾನ ಕಾರ್ಯದರ್ಶಿ ಜಿ.ಬಿ.ಸಂತೋಷ್ ಕುಮಾರ್, ಮೈಸೂರು ಭಾಗದಲ್ಲಿ 6.47ರ ವರೆಗೂ ಬೆಳಕೇ ಇರುವುದರಿಂದ ಗ್ರಹಣ ಗೋಚರಿಸದು ಎನ್ನಲಾಗಿತ್ತು. ಅಚ್ಚರಿಯೆಂಬಂತೆ ಚಂದ್ರ ಗ್ರಹಣ ಸಂಜೆ 7ವರೆಗೂ ಸಂಭವಿಸಿ, ಮೈಸೂರಿಗರಿಗೂ ಗೋಚರಿಸಿತು. ಆ ಮೂಲಕ ಹೆಚ್ಚಿನ ಕೆಂಪು ಬಣ್ಣದಿಂದ ಕಂಗೊಳಿಸಿ ಖಗೋಳ ವಿಸ್ಮಯಕ್ಕೆ ಸಾಕ್ಷಿಯಾಯಿತು ಎಂದರು.

ಯಾವುದೇ ದೋಷವಿಲ್ಲ: ಗ್ರಹಣ ಎಂಬುದು ಒಂದು ನೈಸರ್ಗಿಕ ಪ್ರಕ್ರಿಯೆ. ಇದರಿಂದ ಯಾವುದೇ ದೋಷಗಳು ಉಂಟಾಗುವುದಿಲ್ಲ. ಸೂರ್ಯ ಮತ್ತು ಚಂದ್ರರ ನಡುವೆ ಭೂಮಿ ಬಂದು ಚಂದ್ರನ ಮೇಲೆ ನೆರಳು ಉಂಟಾಗುತ್ತದೆ. ಸೂರ್ಯನ ಬೆಳಕು ಭೂಮಿಯ ಮೂಲಕ ವಕ್ರೀಭವನಕ್ಕೆ ಒಳಪಟ್ಟು, ಕೆಂಪು ಬಣ್ಣವನ್ನು ಸೂಸುವುದರಿಂದ ಹೀಗೆ ಕೆಂಪು ಚಂದ್ರ ಗ್ರಹಣ ಉಂಟಾಗುತ್ತದೆ. ಅದನ್ನು ಬಿಟ್ಟು ಈ ಗ್ರಹಣಕ್ಕೆ ರಕ್ತ ಚಂದ್ರ ಗ್ರಹಣ ಎಂದು ಕರೆಯುವುದರಲ್ಲಿ ವಿಶೇಷ ಅರ್ಥವಿಲ್ಲ ಎಂದು ಹೇಳಿದರು.

ಚಂದ್ರನಿಗೆ ಯಾವುದೇ ನೈಸರ್ಗಿಕ ಬೆಳಕು ಇಲ್ಲ, ಅದೊಂದು ಭೂಮಿಯ ಉಪಗ್ರಹ. ಈ ಚಂದ್ರಗ್ರಹಣ ಬರಿಗಣ್ಣಿನಿಂದ ಎಲ್ಲರೂ ನೋಡಬಹುದಾದ ಅಪರೂಪದ ವಿದ್ಯಮಾನ. ನೋಡಲು ಯಾವುದೇ ಉಪಕರಣದ ಅಗತ್ಯವಿಲ್ಲ. ಹಾಗಾಗಿ ಇಂತಹ ಖಗೋಳ ವಿದ್ಯಮಾನದ ವಿಸ್ಮಯಗಳನ್ನು ಕಣ್ತುಂಬಿಕೊಳ್ಳುವ ಮೂಲಕ ಮೌಢ್ಯಕ್ಕೆ ಸೆಡ್ಡು ಹೊಡೆಯಬೇಕು ಜಿ.ಬಿ.ಸಂತೋಷ್ ಕುಮಾರ್ ವಿವರಿಸಿದರು.



▶ ಸೂರ್ಯ ಮತ್ತು ಚಂದ್ರರ ನಡುವೆ ಭೂಮಿ ಬಂದಾಗ ಚಂದ್ರನ ಮೇಲೆ ನೆರಳು ಕವಿಯುತ್ತದೆ. ಸೂರ್ಯನ ಬೆಳಕು ಭೂಮಿಯ ವಾತಾವರಣದ ಮೂಲಕ ವಕ್ರೀಭವನಕ್ಕೆ ಒಳಪಟ್ಟು, ಕೆಂಪು ಬಣ್ಣವನ್ನು ಮಾತ್ರ ಸೂಸುವುದರಿಂದ ಈ ಕೆಂಪು ಚಂದ್ರ ಗ್ರಹಣ ಉಂಟಾಗುತ್ತದೆ. ಅದನ್ನು ಬಿಟ್ಟು ಈ ಗ್ರಹಣಕ್ಕೆ ರಕ್ತ ಚಂದ್ರ ಗ್ರಹಣ ಎಂದು ಕರೆಯುವುದರಲ್ಲಿ ಯಾವುದೇ ವಿಶೇಷ ಅರ್ಥವಿಲ್ಲ.

-ಜಿ.ಬಿ.ಸಂತೋಷ್ ಕುಮಾರ್, ಪ್ರಧಾನ ಕಾರ್ಯದರ್ಶಿ, ಸೈನ್ಸ್ ಫೌಂಡೇಷನ್.



▶ ಗ್ರಹಣವನ್ನು ವೈಜ್ಞಾನಿಕ ಮನೋಭಾವದಿಂದ ನೋಡಿ, ಮೌಢ್ಯತೆಗೆ ಒಳಗಾಗಬೇಡಿ. ಮನುಷ್ಯನ ಜೀವನಕ್ಕೂ ಇದಕ್ಕೂ ಯಾವುದೇ ಸಂಬಂಧವಿಲ್ಲ. ನಿಜವಾದ ಅರ್ಥದಲ್ಲಿ ಹೇಳುವುದಾದರೆ ಇದೊಂದು ಸ್ವಾಭಾವಿಕ ಪ್ರಕ್ರಿಯೆಯಷ್ಟೆ.

-ಡಾ.ಎಸ್.ಎನ್.ಪ್ರಸಾದ್, ಆರ್‌ಐಇ ಮಾಜಿ ಪ್ರಾಂಶುಪಾಲ.

ಗ್ರಹಣ ಹಿನ್ನೆಲೆಯಲ್ಲಿ ಬಹುತೇಕ ದೇವಸ್ಥಾನಗಳು ಬಂದ್

- ಚಾಮುಂಡೇಶ್ವರಿ ದೇಗುಲದಲ್ಲಿ ಭಕ್ತರಿಗೆ ಪ್ರವೇಶ ನಿರ್ಬಂಧಿಸಿ ವಿಶೇಷ ಪೂಜೆ
- ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯದಲ್ಲಿ ಭಕ್ತರಿಗೆ ಮುಕ್ತ ಪ್ರವೇಶ


ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಆವರಣದಲ್ಲಿ ವಿಶೇಷ ಹೋಮ ನಡೆಸಲಾಯಿತು.

ಮೈಸೂರು, ಮಾ.3(ವಿವಿಹೆಚ್)– ಅಪರೂಪದ ಚಂದ್ರಗ್ರಹಣ ಹಿನ್ನೆಲೆಯಲ್ಲಿ ಮಂಗಳವಾರ ಮೈಸೂರು ನಗರ ಮತ್ತು ಜಿಲ್ಲೆಯಲ್ಲಿ ಬಹುತೇಕ ದೇವಸ್ಥಾನಗಳನ್ನು ಮುಚ್ಚಿದ್ದರೆ, ಕೆಲ ದೇಗುಲಗಳಲ್ಲಿ ಭಕ್ತರ ಪ್ರವೇಶಕ್ಕೆ ಮುಕ್ತ ಅವಕಾಶದೊಂದಿಗೆ ವಿಶೇಷ ಪೂಜಾ ವಿಧಿವಿಧಾನಗಳು ನೆರವೇರಿದವು.

ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಗ್ರಹಣದ ಸಮಯದಲ್ಲಿ ಭಕ್ತರಿಗೆ ದೇವಿಯ ದರ್ಶನಕ್ಕೆ ನಿರ್ಬಂಧ ಇದ್ದರೆ, ದಕ್ಷಿಣ ಕಾಶಿ ಎಂದೇ ಹೆಸರಾದ ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದಲ್ಲಿ ಯಾವುದೇ ನಿರ್ಬಂಧ ಇಲ್ಲದೆ ದೇವರ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಶ್ರೀರಂಗಪಟ್ಟಣದ ರಂಗನಾಥ ದೇವಾಲಯ, ಕೊಡಗಿನ ತಲಾಕಾವೇರಿ, ಭಗಂಡೇಶ್ವರ ದೇವಾಲಯಗಳೂ ಗ್ರಹಣದ ವೇಳೆ ಬಂದ್ ಆಗಿದ್ದವು.

ರಾತ್ರಿ 8.30ಕ್ಕೆ ತೆರೆದ ಚಾಮುಂಡೇಶ್ವರಿ ದೇಗುಲ: ಪೂರ್ಣ ರಕ್ತಚಂದ್ರ ಗ್ರಹಣ ಪ್ರಯುಕ್ತ ನಾಡಿನ ಅಧಿದೇವತೆ ಚಾಮುಂಡೇಶ್ವರಿ ದೇವಾಲಯವನ್ನು ಅರ್ಧದಿನ ಬಂದ್ ಮಾಡಲಾಗಿತ್ತು. ಮಧ್ಯಾಹ್ನ 3 ಗಂಟೆಗೆ ಸರಿಯಾಗಿ ದೇವಸ್ಥಾನದ ಮುಖ್ಯದ್ವಾರವನ್ನು ಮುಚ್ಚಲಾಯಿತು. ಇದೇ ವೇಳೆಗೆ ದೇವಾಲಯದ ಒಳಗೆ ಪ್ರಧಾನ ಅರ್ಚಕ ಡಾ.ಶಶಿಶೇಖರ ದೀಕ್ಷಿತ್ ನೇತೃತ್ವದಲ್ಲಿ ಚಾಮುಂಡಿ ತಾಯಿಗೆ ವಿಶೇಷ ಪೂಜೆ ನೆರವೇರಿಸಲಾಯಿತು. ರಾತ್ರಿ 8.30ರ ಬಳಿಕ ದೇವಿಯನ್ನು ಶುದ್ಧಿಗೊಳಿಸಿ, ವಿಶೇಷ ಪೂಜೆ ಸಲ್ಲಿಸಲಾಯಿತು. ಆ ಬಳಿಕ ಭಕ್ತರು ದೇವಿ ದರ್ಶನ ಮಾಡಲು ಅವಕಾಶ ನೀಡಲಾಯಿತು.

ಶ್ರೀಕಂಠೇಶ್ವರ ದೇಗುಲ: ನಂಜನಗೂಡಿನ ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದಲ್ಲಿ ಯಾವುದೇ ಗ್ರಹಣವಾದರೂ ದೇಗುಲ ಪ್ರವೇಶಕ್ಕೆ ಭಕ್ತರಿಗೆ ನಿರ್ಬಂಧ ಇರಲಿಲ್ಲ. ಅಂತೆಯೇ ಮಂಗಳವಾರ ಗ್ರಹಣದ ವೇಳೆಯಲ್ಲಿ ಇಲ್ಲಿ ಶಿವಲಿಂಗಕ್ಕೆ ಅಭಿಷೇಕ ಸೇರಿದಂತೆ ವಿಶೇಷ ಪೂಜೆ ನೆರವೇರಿಸಲಾಯಿತಲ್ಲದೆ, ದೇವರ ದರ್ಶನ ಮಾಡಲು ಭಕ್ತರಿಗೆ ಯಾವುದೇ ನಿರ್ಬಂಧ ಇರಲಿಲ್ಲ.

ಬೆಳಗ್ಗೆ 12 ಗಂಟೆಯಿಂದ ಮಧ್ಯಾಹ್ನ 1ರವರೆಗೆ ಭಕ್ತರಿಗೆ ಫಲಹಾರದ ವ್ಯವಸ್ಥೆಯನ್ನೂ ಮಾಡಲಾಗಿತ್ತು. ಗ್ರಹಣ ಕಾಲದಲ್ಲಿ ಆಹಾರ ಸೇವನೆ ಮಾಡಬಾರದು ಎಂಬ ನಂಬಿಕೆ ಇರುವ ಹಿನ್ನೆಲೆಯಲ್ಲಿ ಮಧ್ಯಾಹ್ನದ ಪ್ರಸಾದ ಹಾಗೂ ಸಂಜೆಯ ಪ್ರಸಾದ ವ್ಯವಸ್ಥೆ ಕೈಬಿಡಲಾಗಿತ್ತು. ಮೈಸೂರಿನ ಮಾತೃಮಂಡಳಿ ವೃತ್ತದಲ್ಲಿರುವ ಶ್ರೀ ಚಂದ್ರಮೌಳೇಶ್ವರ ಸ್ವಾಮಿ ದೇವಸ್ಥಾನ, ವಿವಿ ಮೊಹಲ್ಲಾದ ಕೆಆರ್‌ಎಸ್ ರಸ್ತೆ ಶ್ರೀ ಲಕ್ಷ್ಮಿ ವೆಂಕಟರಮಣ ಸ್ವಾಮಿ ದೇವಸ್ಥಾನ, ವಿಜಯನಗರ ಮೊದಲ ಹಂತದಲ್ಲಿರುವ ಶ್ರೀ ಯೋಗನರಸಿಂಹಸ್ವಾಮಿ ದೇವಸ್ಥಾನ, ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ, ದೇವರಾಜ ಅರಸು ರಸ್ತೆಯಲ್ಲಿರುವ ಶ್ರೀ ಜಯ ದೇವಾಂಜನೇಯ ಸ್ವಾಮಿ ದೇವಸ್ಥಾನ ಸೇರಿದಂತೆ ಹಲವು ದೇವಾಲಯಗಳು ಗ್ರಹಣದ ವೇಳೆ ಮುಚ್ಚಲ್ಪಟ್ಟಿದ್ದವು.

ಮೈಸೂರು ಮಿತ್ರ ಬುಧವಾರ 4 ಮಾರ್ಚ್ 2026

ಮಾ.13ರಿಂದ ದಸರಾ ವಸ್ತು ಪ್ರದರ್ಶನದಲ್ಲಿ ಸೀರೆ ಮೇಳ

ಮೈಸೂರು, ಮಾ.3(ಜಿಎ)–ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದಿಂದ ಸೀರೆ ಆಯೋಜಿಸಲಾಗುತ್ತದೆ. ಮೈಸೂರಿನ ವಸ್ತು ಪ್ರದರ್ಶನ ಮೈದಾನದಲ್ಲಿ ಮಾ.13ರಿಂದ 22ರವರೆಗೆ ವಸ್ತುಪ್ರದರ್ಶನ ಪ್ರಾಧಿಕಾರದ ವತಿಯಿಂದ ಮಹಿಳಾ ದಿನಾಚರಣೆ ಅಂಗವಾಗಿ ಸೀರೆ ಮತ್ತು ಉಡುಪು ಮೇಳ ಆಯೋಜಿಸುತ್ತಿದ್ದು, ಮೇಳದಲ್ಲಿ ಸಣ್ಣ ಅಮ್ಯೂಸ್‌ಮೆಂಟ್ ಪಾರ್ಕ್, ತಿಂಡಿ–ತಿನಿಸು ಮಳಿಗೆಗಳು ಮತ್ತು ಕರಕುಶಲಗಳ ಮಾರಾಟಕ್ಕೆ ಅವಕಾಶ ಕಲ್ಪಿಸಲಾವುದು ಎಂದು ಪ್ರಾಧಿಕಾರ ಅಧ್ಯಕ್ಷ ಅಯೂಬ್ ಖಾನ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಪ್ರಮುಖವಾಗಿ ಮನೆಯಲ್ಲಿ ಕುಳಿತು ಸೀರೆ ವ್ಯಾಪಾರ ಮಾಡುವ ಮಹಿಳಾ ಉದ್ಯಮಿಗಳಿಗೆ ಮೊದಲ ಆದ್ಯತೆ ನೀಡಲಾಗುತ್ತಿದೆ. ಮೈಸೂರು ಜಿಲ್ಲೆಯಲ್ಲಿ ಸೀರೆ ಉದ್ಯಮ ಮಾಡುವವರು, ಗಾರ್ಮೆಂಟ್ಸ್ ಅವರಿಗೆ ಅವಕಾಶವಿದೆ. ಸಣ್ಣ ಅಮ್ಯೂಸ್‌ಮೆಂಟ್ ಪಾರ್ಕ್, ತಿಂಡಿ–ತಿನಿಸು ಮಳಿಗೆಗಳು ಮತ್ತು ಕರಕುಶಲಗಳ ವಸ್ತುಗಳ ಮಾರಾಟ ಮಾಡುವವರಿಗೆ ಮಳಿಗೆ ನೀಡಲಾಗುವುದು ಆಸಕ್ತರು ಮಾ.7ರೊಳಗೆ ಪ್ರಾಧಿಕಾರದ ಕಚೇರಿಗೆ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದು. ಮಾಹಿತಿಗಾಗಿ 8431517909 ಸಂಪರ್ಕಿಸಿ ಎಂದ ಅವರು, ಈ ಮೇಳದ ಬೇಸಿಗೆ ಮೇಳವು ಆರಂಭವಾಗಲಿದೆ ಎಂದರು.

ಇರಾನ್‌ನಲ್ಲಿ ಭೂಕಂಪ: ಅಮೆರಿಕ–ಕೊಲ್ಲಿ ರಾಷ್ಟ್ರಗಳ ದಾಳಿ ಬೆನ್ನಲ್ಲೇ 4.3 ತೀವ್ರತೆಯ ಕಂಪನ

ಇರಾನ್: ದಕ್ಷಿಣ ಇರಾನ್ ನ ಗೆರಾಶ್ ನಲ್ಲಿ 4.3 ತೀವ್ರತೆಯ ಭೂಕಂಪ ಸಂಭವಿಸಿದೆ. ಅಮೆರಿಕಾ–ಇಸ್ರೇಲ್, ಕೊಲ್ಲಿ ರಾಷ್ಟ್ರಗಳ ಪ್ರತಿ ದಾಳಿಗಳಿಗೆ ತುತ್ತಾಗಿರುವ ಇರಾನ್ ನಲ್ಲಿ ಪ್ರಕೃತಿ ವಿಕೋಪ ಉಂಟಾಗಿದೆ. ಕಡಿಮೆ ತೀವ್ರತೆಯಾದ್ದರಿಂದ ಅದೃಷ್ಟವಶಾತ್ ಸಾವು–ನೋವುಗಳ ವರದಿಯಾಗಿಲ್ಲ. ಅಮೆರಿಕದ ಭೂವೈಜ್ಞಾನಿಕ ಸಮೀಕ್ಷೆಯ ಪ್ರಕಾರ ರಿಕ್ಟರ್ ಮಾಪನದಲ್ಲಿ ಭೂಕಂಪದ ತೀವ್ರತೆ 4.3 ಎಂದು ದಾಖಲಾಗಿದ್ದು, ಇದರ ಕೇಂದ್ರಬಿಂದು ಗೆರಾಶ್ ಮಗರದ ಸಮೀಪವಿದ್ದು, ಭೂಮಿಯ ಮೇಲ್ಮೈಯಿಂದ ಕೇವಲ 10 ಕಿಮೀ ಆಳದಲ್ಲಿ ಸಂಭವಿಸಿದೆ. ದಕ್ಷಿಣ ಇರಾನ್‌ನ ಈ ಭಾಗ 'ಜಾಗ್ರೋಸ್ ಫಾಲ್ಟ್ ಸಿಸ್ಟಮ್' ವ್ಯಾಪ್ತಿಯಲ್ಲಿ ಬರುವುದರಿಂದ ಇಲ್ಲಿ ಇಂತಹ ಕಡಿಮೆ ಆಳದ ನೈಸರ್ಗಿಕ ಕಂಪನಗಳು ಸಹಜ ಎಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

ಗೆರಾಶ್ ನಗರವು, ಇರಾನ್ ನ ಪ್ರಮುಖ ಇಂಧನ ಮತ್ತು ಸೇನಾ ನೆಲೆಗಳ ಕಾರಿಡಾರ್ ನಲ್ಲಿದೆ. ಇನ್ನು ವಿವಾದಕ್ಕೆ ಒಳಗಾಗಿರುವ ಗ್ಚಿನ್ ಯುರೇನಿಯಂ ಗಣಿ ಭೂಕಂಪದ ಕೇಂದ್ರದಿಂದ ಆಗ್ನೇಯ ದಿಕ್ಕಿಗೆ 150–180 ಕಿಮೀ ದೂರದಲ್ಲಿದೆ. ಅಲ್ಲದೆ ಬುಶೆಹ್ರ್ ಪರಮಾಣು ಸ್ಥಾವರ –ಇದು ವಾಯುವ್ಯಕ್ಕೆ 250–300 ಕಿಮೀ ದೂರದಲ್ಲಿದೆ. ಭೂಕಂಪದಿಂದ ಈ ಸ್ಥಾವರಗಳಿಗೆ ಹಾನಿಯಾದ ಬಗ್ಗೆ ವರದಿಗಳಿಲ್ಲ.

ಜೆಎಸ್‌ಎಸ್ ಪದವಿ ಕಾಲೇಜಿಗೆ ಬಹುಮಾನ



ಮೈಸೂರಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ವಿದ್ಯಾರ್ಥಿಗಳು ಮೈಸೂರು ವಿಶ್ವವಿದ್ಯಾನಿಲಯ ಆಯೋಜಿಸಿದ್ದ 2025–26ನೇ ಸಾಲಿನ ಚಾಮುಂಡಿ ವಲಯದ ಅಂತರ ಕಾಲೇಜುಗಳ ಪುರುಷರ ಸಾಫ್ಟ್‌ಬಾಲ್‌ನಲ್ಲಿ ಪ್ರಥಮ, ಕ್ರಿಕೆಟ್, ಹ್ಯಾಂಡ್‌ಬಾಲ್ ಪಂದ್ಯಾವಳಿಗಳಲ್ಲಿ ದ್ವಿತೀಯ ಸ್ಥಾನ ಗಳಿಸಿ ಅಂತರ ವಲಯ ಸ್ಪರ್ಧೆಗಳಿಗೆ ಆಯ್ಕೆಯಾದ ವಿಜೇತರನ್ನು ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ. ಸಾಂಬಶಿವಯ್ಯ, ಪ್ರಾಂಶುಪಾಲ ಡಾ.ಎಂ.ಪ್ರಭು, ದೈಹಿಕ ಶಿಕ್ಷಣ ನಿರ್ದೇಶಕರಾದ ಎಂ.ಕಾರ್ತಿಕ್, ಸಿ.ಎಸ್.ನಿರಂಜನ್, ಬೋಧಕ–ಬೋಧಕೇತರರು ಅಭಿನಂದಿಸಿದ್ದಾರೆ.

ಬೀಳ್ಕೊಡುಗೆ...



ಮೈಸೂರಿನ ಡಿ.ಬನುಮಯ್ಯ ಪ್ರೌಢಶಾಲೆಯಲ್ಲಿ 35 ವರ್ಷ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತರಾದ ಹೆಚ್.ಪಿ.ಹರೀಶ್ ಅವರನ್ನು 1994ನೇ ಸಾಲಿನ ಹಳೆ ವಿದ್ಯಾರ್ಥಿಗಳ ಬಳಗದ ವತಿಯಿಂದ ಸನ್ಮಾನಿಸಿ, ಬೀಳ್ಕೊಡಲಾಯಿತು. ಈ ವೇಳೆ ಬಳಗದ ಎಸ್.ಎನ್.ರಾಜೇಶ್, ಎಂ.ಆರ್.ಕಿಶೋರ್‌ಕುಮಾರ್, ಎಸ್.ಪ್ರದೀಪ್ ಕುಮಾರ್, ಟಿ.ವಿನೋದ್‌ಕುಮಾರ್, ಎನ್.ಶ್ರೀಧರ್, ಎಸ್.ಸತೀಶ್, ಟಿ.ಸಂಪತ್, ಶಾಂತರಾಮ್, ದೇವ, ಕುಮಾರ ಹಲವಾರು ಹಳೆ ವಿದ್ಯಾರ್ಥಿಗಳು ಇದ್ದರು.

ವರ್ಷಗೆ ಪಿಹೆಚ್.ಡಿ



ಮೈಸೂರು: ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿವಿಯ ಕಂಪ್ಯೂಟರ್ ಸೈನ್ಸ್ ಅಂಡ್ ಎಂಜಿನಿಯರಿಂಗ್ ವಿಭಾಗದ ಸಹಾಯಕ ಪ್ರಾಧ್ಯಾಪಕಿ ವರ್ಷ ಅವರು ಪ್ರೊ.ಡಾ.ಶಿವಪ್ರಕಾಶ್ ಮಾರ್ಗದರ್ಶನದಲ್ಲಿ ಮಂಡಿಸಿದ ಮಹಾಪ್ರಬಂಧಕ್ಕೆ ಜೆಎಸ್‌ಎಸ್ ವಿಜ್ಞಾನ–ತಂತ್ರಜ್ಞಾನ ವಿವಿಯು ಪಿಹೆಚ್.ಡಿ ಪದವಿ ಪ್ರದಾನ ಮಾಡಿದೆ.



ಮಂಜುಳಾ ಎಂ.ಎಲ್.

ಮೈಸೂರು ವಿಶ್ವವಿದ್ಯಾನಿಲಯದ ವಾಣಿಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ.ಎ.ಥನಾಪಾಕಿಯಂ ಅವರ ಮಾರ್ಗದರ್ಶನದಲ್ಲಿ ಕುವೆಂಪುನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯ ಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕಿ ಮಂಜುಳ.ಎಂ.ಎಲ್ ಅವರು ವಾಣಿಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್‌ಡಿ ಪದವಿಗೆ ಅಂಗೀಕರಿಸಿದೆ

ನಿಧಾನವಾಗಿ ಚಲಿಸುವಂತೆ ತಿಳಿ ಹೇಳಿದ್ದಕ್ಕೆ ಕಾರು ಹರಿಸಿ ಯುವಕನ ಹತ್ಯೆ

ಹಾಸನ: ನಿಧಾನವಾಗಿ ಕಾರು ಓಡಿಸುವಂತೆ ತಿಳಿ ಹೇಳಿದ ಯುವಕನಿಗೆ ಗುದ್ದಿಸಿ ಹತ್ಯೆ ಮಾಡಿದ ಘಟನೆ ಹೊಳೆನರಸೀಪುರ ತಾಲೂಕಿನ ಸೂರನಹಳ್ಳಿ ಗ್ರಾಮದಲ್ಲಿ ನಡೆದಿದೆ.



ಹತ್ಯೆಯಾದ ಯುವಕನನ್ನು ಮನು(27) ಎಂದು ಗುರುತಿಸಲಾಗಿದೆ. ನಿನ್ನೆ ರಾತ್ರಿ 12 ಗಂಟೆ ಸಮಯದಲ್ಲಿ ಮನು, ಅಭಿಷೇಕ್, ರಾಕೇಶ್ ಹಾಗೂ ಕುಶಾಲ್ ರಸ್ತೆ ಪಕ್ಕದಲ್ಲಿ ನಿಂತು ಮಾತನಾಡುತ್ತಿದ್ದರು. ಈ ವೇಳೆ ಅಪರಿಚಿತ ವ್ಯಕ್ತಿ ಚಾಲನೆ ಮಾಡುತ್ತಿದ್ದ ಕಾರು ವೇಗವಾಗಿ ಬಂದಿದೆ. ಇದನ್ನು ಕಂಡ ಯುವಕರ ತಂಡ, ಕಾರು ಚಾಲಕನಿಗೆ ನಿಧಾನವಾಗಿ ಹೋಗು ಎಂದು ತಿಳಿ ಹೇಳಿದ್ದಾರೆ. ಇದರಿಂದ ಕೋಪಗೊಂಡ ಕಾರು ಚಾಲಕ ಸ್ವಲ್ಪ ದೂರು ಹೋಗಿ ತಿರುಗಿಸಿಕೊಂಡು ಬಂದು, ಮಾತನಾಡುತ್ತ ನಿಂತಿದ್ದವರಿಗೆ ಡಿಕ್ಕಿ ಹೊಡೆಸಿ, ಪರಾರಿಯಾಗಿದ್ದಾನೆ. ಘಟನೆಯಲ್ಲಿ ತೀವ್ರವಾಗಿ ಗಾಯಗೊಂಡ ಮನು ಸ್ಥಳದಲ್ಲೇ ಸಾವನ್ನಪ್ಪಿದ್ದು, ಮೂವರು ಸ್ನೇಹಿತರು ಗಾಯಗೊಂಡಿದ್ದಾರೆ. ಕೂಡಲೇ ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದು, ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಸ್ಥಳೀಯರು ಪ್ರತಿಭಟನೆ ನಡೆಸಿ, ಆರೋಪಿಯನ್ನು ಬಂಧಿಸುವಂತೆ ಆಗ್ರಹಿಸಿದ್ದಾರೆ.

ಸ್ವಚ್ಛ ಮೈಸೂರು ನಮ್ಮಿಂದಲೇ ಆರಂಭ; ಮಾ.8ಕ್ಕೆ 'ಸ್ವಚ್ಛತಾ ರೋಡ್ ಶೋ'

ಮೈಸೂರು, ಮಾ.3– ಸ್ವಚ್ಛ ಭಾರತ ಮಿಷನ್ ಅಭಿ ಯಾನದ ಅಂಗವಾಗಿ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಸ್ವಚ್ಛ ಮೈಸೂರು ನಮ್ಮಿಂದಲೇ ಆರಂಭ ಎಂಬ ಧ್ಯೇಯದೊಂದಿಗೆ ಮಾ.8ರಂದು ಅರಮನೆ ಆವರಣದಿಂದ ಮೈಸೂರು ವಿಶ್ವವಿದ್ಯಾನಿಲಯದ ಓವೆಲ್ ಮೈದಾನದವರೆಗೆ 'ಸ್ವಚ್ಛತಾ ರೋಡ್ ಶೋ' ಆಯೋಜಿಸ ಲಾಗಿದ್ದು, ಈ ಸಂಬಂಧ ಪೋಸ್ಟರ್ ಬಿಡುಗಡೆ ಕಾರ್ಯ ಕ್ರಮವನ್ನು ಮಾ.4ರಂದು ಬೆಳಗ್ಗೆ 11ಕ್ಕೆ ಪಾಲಿಕೆಯ ಜಯ ಚಾಮರಾಜೇಂದ್ರ ಒಡೆಯರ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ನಗರಪಾಲಿಕೆ ಪ್ರಕಟಣೆ ತಿಳಿಸಿದೆ.

ಕೈವಾರ ತಾತಯ್ಯ ಒಂದು ಸಮುದಾಯಕ್ಕೆ ಸೀಮಿತರಲ್ಲ

ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಹರೀಶ್‌ಗೌಡ ಅಭಿಮತ



ಮೈಸೂರಿನ ದೇವರಾಜ ಅರಸು ರಸ್ತೆಯಲ್ಲಿ ಶ್ರೀ ಯೋಗಿ ನಾರೇಯಣ ಯತೀಂದ್ರ (ಕೈವಾರ ತಾತಯ್ಯ) ಜಯಂತ್ಯೋತ್ಸವ.

ಮೈಸೂರು, ಮಾ. 3– ಮಹನೀಯರ ಜಯಂತಿಗಳು ಆಚರಣೆಗಷ್ಟೆ ಸೀಮಿತವಾಗದೆ ಅವರ ಆದರ್ಶ ತತ್ವಗಳನ್ನು ನಾವು ಮೈಗೂಡಿಸಿಕೊಳ್ಳಬೇಕು. ಜೀವನ ಸಾರ್ಥಕತೆಗಾಗಿ ಸಮಾಜದ ಒಳಿತಿಗೆ ಶ್ರಮಿಸುವ ಮೂಲಕ ಪ್ರತಿಯೊಬ್ಬರೂ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ಶಾಸಕ ಹರೀಶ್‌ಗೌಡ ಹೇಳಿದರು.

ಮೈಸೂರು ನಗರದ ಡಿ.ದೇವರಾಜ ಅರಸು ರಸ್ತೆಯಲ್ಲಿ ಶ್ರೀ ಯೋಗಿ ನಾರೇಯಣ ಯತೀಂದ್ರ (ಕೈವಾರ ತಾತಯ್ಯ) ರವರ 300ನೇ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ನಂತರ ಸಾರ್ವಜನಿಕರಿಗೆ ಮಜ್ಜಿಗೆ ಹಾಗೂ ಸಿಹಿ ವಿತರಿಸಿ ಮಾತನಾಡಿದ ಅವರು, ತ್ರಿಕಾಲ ಜ್ಞಾನಿಯಾಗಿದ್ದ ಕೈವಾರ ತಾತಯ್ಯ ಅವರು ಪ್ರಾಪಂಚಿಕ ಆಗು–ಹೋಗುಗಳನ್ನು ಅರಿತು ಮನುಕುಲದ ಒಳಿತಿಗಾಗಿ ಅಪಾರ ಕೊಡುಗೆ ನೀಡಿದ್ದಾರೆ.

17ನೇ ಶತಮಾನದಲ್ಲಿ ಜೀವಿಸಿದ್ದ ಕೈವಾರ ತಾತಯ್ಯ ಅವರು ಪವಾಡ ಪುರುಷರಾಗಿದ್ದರು. ತಾತಯ್ಯ ಅವರನ್ನು ಒಂದೇ ಸಮುದಾಯಕ್ಕೆ ಸೀಮಿತಗೊಳಿಸದೆ ಎಲ್ಲಾ ಸಮಾಜಗಳು ಸ್ಮರಿಸಿಕೊಳ್ಳಬೇಕಿದೆ. ಸಮಾಜದಲ್ಲಿನ ಅಂಕುಡೊಂಕುಗಳನ್ನು ತಿದ್ದಿ, ತಾರತಮ್ಯ, ಅಸಮಾನತೆ ಹೋಗಲಾಡಿಸಲು ತಾತಯ್ಯರು ಕೈಗೊಂಡ ಸಾಮಾಜಿಕ ಸುಧಾರಣೆ ಕಾರ್ಯ ಇಂದಿಗೂ ಮಾದರಿ.

ದೇಶದ ಅಭ್ಯುದಯಕ್ಕೆ ಕೊಡುಗೆ ನೀಡಿದ ಮಹಾನ್ ವ್ಯಕ್ತಿಗಳ ಸ್ಮರಣೆ ಭಾರತದ ಪರಂಪರೆ. ಸಮಾಜದ ಶ್ರೇಯೋಭಿವೃದ್ಧಿಗೆ ದುಡಿದವರು ಇತಿಹಾಸ ಸೃಷ್ಟಿಸುತ್ತಾರೆ. ಅಂತಹ ಶ್ರೇಷ್ಠ ದಾರ್ಶನಿಕರಲ್ಲಿ ತಾತಯ್ಯ ಅಗ್ರಗಣ್ಯರು. ಕಾಲಜ್ಞಾನ ಭವಿಷ್ಯವನ್ನು ಇಡೀ ಜಗತ್ತಿಗೆ ತೋರಿಸಿಕೊಟ್ಟವರು ಕೈವಾರ ತಾತಯ್ಯ ಎಂದು ಬಣ್ಣಿಸಿದರು.

ತಾತಯ್ಯ ಅವರು ಸಮಾಜ ಸುಧಾರಣೆಗೆ ಅಪಾರ ಕೊಡುಗೆ ನೀಡಿದ್ದಾರೆ. ಕೈವಾರ ಕ್ಷೇತ್ರ ಬಹಳ ಪವಿತ್ರವಾದದ್ದು ಹಾಗೂ ಧಾರ್ಮಿಕ ಪ್ರಾಸಿ ತಾಣವೂ ಆಗಿದೆ ಎಂದರು.

ಮಾಜಿ ಸಂಸದ ಪ್ರತಾಪ್ ಸಿಂಹ, ಸಮಾಜ ಸೇವಕ ರಘುರಾಮ್ ವಾಜಪೇಯಿ, ಮುಖಂಡರಾದ ಆನಂದ್ ಶೆಟ್ಟಿ, ನಗರ ಪಾಲಿಕೆ ಮಾಜಿ ಸದಸ್ಯ ಪ್ರಶಾಂತ್ ಗೌಡ, ಮೈಲ್ಯಾಕ್ ಮಾಜಿ ಅಧ್ಯಕ್ಷ ವೆಂಕಟೇಶ್, ಮುಡಾ ಮಾಜಿ ಸದಸ್ಯ ನವೀನ್ ಕುಮಾರ್, ಕೆಪಿಸಿಸಿ ಸದಸ್ಯರಾದ ಜಿ.ಶ್ರೀನಾಥ್ ಬಾಬು, ಪರಮೇಶ್‌ಗೌಡ, ಗುರುರಾಜ್ ಶೆಟ್ಟಿ, ಎಸ್ .ಎನ್.ರಾಜೇಶ್, ವಿನಯ್ ಉಮೇಶ್ ಶ್ರೀರಾಂಪುರ ಕುಮಾರ್, ನೀತು, ಆರ್.ಶೇಖರ್, ರಮೇಶ್, ಗುರುಪ್ರಸಾದ್, ಪ್ರಮೋದ್ ಗೌಡ, ನಂದ, ರವಿಚಂದ್ರ, ಸಂದೇಶ್, ಧನಲಕ್ಷ್ಮಿ, ಪ್ರಿಯಾಂಕಾ, ಶಿಲ್ಪ ಸೇರಿದಂತೆ ಇನ್ನಿತರರು ಹಾಜರಿದ್ದರು.

ಮೈಸೂರಲ್ಲಿ ಕೈವಾರ ತಾತಯ್ಯ ಜಯಂತಿ ಆಚರಣೆ



ಸರಸ್ವತಿಪುರಂನಲ್ಲಿರುವ ಬಣಜಿಗ (ಬಲಿಜ) ವಿದ್ಯಾರ್ಥಿನಿಲಯದಲ್ಲಿ ಕೈವಾರ ತಾತಯ್ಯನವರ ಜಯಂತಿ ಆಚರಿಸಲಾಯಿತು.

ಮೈಸೂರು,ಮಾ.3–ಮೈಸೂರಿನ ಸರಸ್ವತಿಪುರಂನಲ್ಲಿರುವ ಬಣಜಿಗ (ಬಲಿಜ) ವಿದ್ಯಾರ್ಥಿನಿಲಯದಲ್ಲಿ ಕೈವಾರ ತಾತಯ್ಯನವರ ಜಯಂತಿ ಆಚರಿಸಲಾಯಿತು.

ಈ ವೇಳೆ ಶ್ರೀ ಯೋಗಿ ನಾರೇಯಣ ಯತೀಂದ್ರರ ಪ್ರಚಾರ ಸಭಾ ಪ್ರಧಾನ ಸಂಚಾಲಕ, ಮೈಲ್ಯಾಕ್ ಮಾಜಿ ಅಧ್ಯಕ್ಷ ಎಚ್.ಎ.ವೆಂಕಟೇಶ್, ತಾತಯ್ಯನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿ, ಕೈವಾರ ತಾತಯ್ಯನವರು ಈ ನಾಡು ಕಂಡ ಅಪರೂಪದ ಸಂತರು. ಸಮಾಜ ಸುಧಾರಕರು, ಮಹಾನ್ ಜ್ಞಾನಿಗಳು, ಯೋಗಿಗಳು, ಸಿದ್ಧಪುರುಷರು ಹಾಗೂ ತ್ರಿಕಾಲ ಜ್ಞಾನಿಗಳು. ಸದಾ ಭಕ್ತಿ, ಭಜನೆ, ಧ್ಯಾನ ಮತ್ತು ಉಪದೇಶಗಳ ಮೂಲಕ ಅಂತ ರಂಗ ಶುದ್ಧಿಗೆ ಒತ್ತು ಕೊಟ್ಟರು. ಶಾಂತ ಸ್ವಭಾವ, ಪ್ರೀತಿ, ಸರಳ ಬದುಕನ್ನು ಜಗತ್ತಿಗೆ ಸಾರಿದ ಮಹಾನ್ ಚೇತನ ಎಂದು ಬಣ್ಣಿಸಿದರು.

ಕೈವಾರ ನಾರೇಯಣ ಯತೀಂದ್ರರು ಕ್ರಿ.ಶ.1730 ರಿಂದ 1840 ವರಗೆ 110 ವರ್ಷಗಳ ಸುದೀರ್ಘ ಬದುಕಿನಲ್ಲಿ ಅರ್ಧಶತಕ ಪ್ರಾಪಂಚಿಕ ಜೀವನವನ್ನು ಉಳಿದರ್ಧ ಬಾಳನ್ನು ಯೋಗಿಯಾಗಿ ಬಾಳಿದವರು. ಒಂದು ಸಾಧಾರಣ ಸಂಸಾರದಲ್ಲಿದ್ದು ಒಬ್ಬ ಬಳೆ ವ್ಯಾಪಾರಿಯಾಗಿ ಜೀವನ ಸಾಗಿಸುತ್ತಾ ಮಕ್ಕಳನ್ನು ಪಡೆದು, ನಂತರ ದಿನಗಳಲ್ಲಿ ಸಂಸಾರ ತ್ಯಜಿಸಿ ಸನ್ಯಾಸ ಸ್ವೀಕರಿಸಿ, ಸಮಾಜವನ್ನು ಆಧ್ಯಾತ್ಮಿಕ ಮಾರ್ಗಕ್ಕೆ ಕೊಂಡೊಯ್ಯುವ ಕೆಲಸದಲ್ಲಿ ತೊಡಗಿಸಿಕೊಂಡರು. ನಿಜಕ್ಕೂ ಕೈವಾರ ತಾತಯ್ಯನವರ ಜೀವನ ಒಂದು ಅದ್ಭುತ ಪವಾಡ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಎಂ.ನಾರಾಯಣ್, ಪ್ರಧಾನ ಕಾರ್ಯದರ್ಶಿ ಎಚ್.ಆರ್.ಗೋಪಾಲಕೃಷ್ಣ, ಖಜಾಂಚಿ ಕೆ.ಚಂದ್ರಶೇಖರ್, ನಿರ್ದೇಶಕರಾದ ಬಿ.ಕೆ.ಸುರೇಶ್, ಟಿ.ಎಸ್. ರಮೇಶ್, ಎ.ಚನ್ನಕೇಶವ, ನಿವೃತ್ತ ಶಿಕ್ಷಕ ರಮೇಶ್, ಮಂಜುನಾಥ್ ವ್ಯವಸ್ಥಾಪಕ ಎಚ್. ಆರ್. ವೆಂಕಟೇಶ್, ನಿಲಯಪಾಲಕ ರಾಮಕೃಷ್ಣಯ್ಯ, ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳು–ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

ಭಾರತೀಯ ಸಾಹಿತ್ಯ–ಸಿನಿಮಾದಲ್ಲಿ ಮಹಿಳಾ ಧ್ವನಿ ಕುರಿತು ವಿಚಾರ ಸಂಕಿರಣ

ಮೈಸೂರು,ಮಾ.3–ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ), ಆಂಗ್ಲಭಾಷಾ ವಿಭಾಗ ಮತ್ತು ಆಂತರಿಕ ಗುಣಮಟ್ಟದ ಭರವಸೆ ಕೋಶ ಸಹಯೋಗದಲ್ಲಿ ಮಾ.5ರಂದು ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಾಗಿದೆ.

ಸಂಪ್ರದಾಯಗಳು ಮತ್ತು ಪರಿವರ್ತನೆಗಳ ನಡುವೆ–ಸಮಕಾಲೀನ ಭಾರತೀಯ ಸಾಹಿತ್ಯ ಮತ್ತು ಸಿನಿಮಾದಲ್ಲಿ ಮಹಿಳಾ ಧ್ವನಿ ವಿಷಯ ಕುರಿತಾಗಿ ವಿಚಾರ ಸಂಕಿರಣ ಜರುಗಲಿದೆ.

ಶಸ್ತ್ರವೈದ್ಯೆ ಹಾಗೂ ಕಾದಂಬರಿಗಾರ್ತಿ ಡಾ.ಕಾವೇರಿ ನಂಬಿಸನ್ ಈ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಪ್ರಧಾನ ಭಾಷಣ ಮಾಡಲಿದ್ದಾರೆ. ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದು, ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಶೈಕ್ಷಣಿಕ ಸಲಹೆಗಾರರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್. ರಮೇಶ್ ಉಪಸ್ಥಿತರಿರುತ್ತಾರೆ.

ಹಿರಿಯ ಪ್ರಾಧ್ಯಾಪಕರಾದ ವಿಜಯ್ ಶೇಷಾದ್ರಿ, ಡಾ.ಎಚ್.ಕೆ.ಕಲ್ಪನರಾವ್, ಡಾ. ಶಿವಲಿಂಗಸ್ವಾಮಿ ಎಚ್.ಕೆ. ಅವರು ಸಮಗ್ರ ಅಧಿವೇಶನಗಳನ್ನು ನಡೆಸಿಕೊಡಲಿದ್ದಾರೆ. ಪ್ರಾಧ್ಯಾಪಕಿ ನಿರ್ಮಲ ಸಿ.ಪ್ರಕಾಶ್ ಸಮಾರಂಭದ ಸಮಾರೋಪ ಭಾಷಣ ಮಾಡಲಿದ್ದಾರೆ. ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಭಾಗವಹಿಸಲು ಇಚ್ಛಿಸುವವರು ಮಾ.5ರಂದು ಬೆಳಗ್ಗೆ 9ರಿಂದ 9.45 ರೊಳಗಾಗಿ ಸ್ಥಳದಲ್ಲೇ ನೋಂದಣಿ ಮಾಡಿಕೊಳ್ಳಬಹುದೆಂದು ಕಾಲೇಜಿನ ಪ್ರಾಂಶುಪಾಲರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ಮಾ.3–ಮೈಸೂರಿನ ಲಕ್ಷ್ಮೀಪುರಂನ ವಾಣಿವಿಲಾಸ ರಸ್ತೆಯಲ್ಲಿರುವ ಪ್ರೀತಿ ಕ್ಯಾನ್ಸರ್ ಸೆಂಟರ್ ವತಿಯಿಂದ ಮಾ.5 ರಂದು ಬೆಳಗ್ಗೆ 10 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ.

ಒಂದು ತಿಂಗಳಿಗೂ ಮೇಲ್ಪಟ್ಟ ವಾಸಿಯಾಗದ ಗಾಯ, ರಕ್ತಸ್ರಾವ, ಊತ, ಗಡಸುತನ, ಗಂಟಲಲ್ಲಿ ನುಂಗುವಾಗ ತೊಂದರೆ, ಉರಿ, ಧ್ವನಿ ಬದಲಾವಣೆ ಸಮಸ್ಯೆ ಇರುವವರು ಈ ಶಿಬಿರದಲ್ಲಿ ಭಾಗಿಯಾಗಬಹುದು. ತಪಾಸಣೆ ವೇಳೆ ಕ್ಯಾನ್ಸರ್ ಪತ್ತೆಯಾದ ರೋಗಿಗಳಿಗೆ ರಿಯಾಯಿತಿ ದರದಲ್ಲಿ ಚಿಕಿತ್ಸೆ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗೆ ದೂ.ಸಂಖ್ಯೆ: 0821–4259259 ಮೂಲಕ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭಾರತದಲ್ಲಿ ಅಶ್ಲೀಲ ಕಮೆಂಟ್ ನಿಷೇಧಿಸಿದ ಎಕ್ಸ್

ನವದೆಹಲಿ: ವಿಶ್ವದ ನಂಬರ್ 1 ಶ್ರೀಮಂತ ಉದ್ಯಮಿ ಎಲಾನ್ ಮಸ್ಕ್ ಒಡೆತನದ ಎಕ್ಸ್ ಪ್ಲಾಟ್‌ಫಾರ್ಮ್, ಹೊಸ ಐಟಿ ನಿಯಮಗಳಿಗೆ ಅನುಸಾರ ವಾಗಿ ತನ್ನ ವೇದಿಕೆಯಲ್ಲಿ ಅಶ್ಲೀಲ ಕಂಟೆಂಟ್‌ಗಳನ್ನು ನಿಷೇ ಧಿಸುವ ಮೂಲಕ ಕೇಂದ್ರ ಸರ್ಕಾರದ ಸಲಹೆಯನ್ನು ಪಾಲಿಸಿದೆ.

ಅಶ್ಲೀಲ ಕಂಟೆಂಟ್‌ಗಳನ್ನು ನಿಷೇಧಿಸುವ ಸಂಬಂಧ ಬಳಕೆದಾರರ ಪ್ರಶ್ನೆಗಳಿಗೆ ಪ್ರತಿಕ್ರಿಯೆಯಾಗಿ, ಎಐ ಚಾಲಿತ ಚಾಟ್ ಬಾಟ್ ಗ್ರೋಕ್ ಬ್ಯಾನ್ ಮಾಡಿರುವ ಉತ್ತರವನ್ನು ನೀಡಿದೆ.

ಭಾರತದಲ್ಲಿ ವಯಸ್ಕರ ಮತ್ತು ಲೈಂಗಿಕ ವಿಷಯವನ್ನು ಬ್ಲಾಕ್ ಮಾಡಲಾಗಿದೆ. ಈ ಒಂದು ಕ್ರಮವು ಭಾರತದ ಮಾಹಿತಿ ತಂತ್ರಜ್ಞಾನ ಕಾಯ್ದೆ ಅನುಸರಿಸುತ್ತದೆ. ಇದು ಆನ್‌ಲೈನ್ ನಲ್ಲಿ ಅಶ್ಲೀಲ ವಸ್ತುಗಳ ಪ್ರಕಟಣೆ ಅಥವಾ ಪ್ರಸರಣವನ್ನು ನಿಷೇಧಿಸುತ್ತದೆ. ಭಾರತದಲ್ಲಿನ ಬಳಕೆದಾರರು ಇನ್ನು ಮುಂದೆ ಅಂತಹ ವಿಷಯವನ್ನು ಎಕ್ಸ್‌ನಲ್ಲಿ ನೋಡಲು ಸಾಧ್ಯವಾಗುವುದಿಲ್ಲ. ಆದರೆ, ಇಂತಹ ಕಂಟೆಂಟ್‌ಗಳು ಇತರ ದೇಶಗಳಲ್ಲಿ ಗೋಚರಿಸಬಹುದು ಎಂದು ಗ್ರೋಕ್ ಹೇಳಿದೆ. ಅಂದಹಾಗೆ, ಎಕ್ಸ್‌ನ ಈ ಕ್ರಮವು ಅನೇಕರಿಂದ ಪ್ರಶಂಸೆಗೆ ಪಾತ್ರವಾದರೆ, ಕೆಲವರು ನೀವು ತಡವಾಗಿ ನಿರ್ಧಾರ ತೆಗೆದುಕೊಂಡಿದ್ದೀರಿ ಎಂದು ಹೇಳಿದ್ದಾರೆ. ಎಕ್ಸ್ ಇನ್ನು ಮುಂದೆ ಅಶ್ಲೀಲತಾಣವಾಗಿ ಉಳಿಯುತ್ತಿಲ್ಲ ಎಂದು ಅನೇಕರು ಹರ್ಷಿಸಿದ್ದಾರೆ. ಈ ಒಂದು ಕ್ರಮ ಸ್ವಾತಂತ್ರ್ಯ ಮೊಟಕುಗೊಳಿಸುವ ಕೃತ್ಯ, ಇದರಿಂದ ಸರ್ಕಾರವು ಭಾವಿಸಿದ ಯಾವುದೇ ಸಮಸ್ಯೆ ಬಗೆಹರಿಯುವುದಿಲ್ಲ.









ಅಕ್ರಮ ಬಾಂಗ್ಲಾ ವಲಸಿಗರ ಗಡಿಪಾರಿಗೆ ಆಗ್ರಹಿಸಿ ಪ್ರತಿಭಟನೆ

ಮಡಿಕೇರಿ, ಮಾ.3–ಅಕ್ರಮ ಬಾಂಗ್ಲಾ ವಲಸಿಗರನ್ನು ಗಡೀಪಾರು ಮಾಡಬೇಕು. ಅವರುಗಳಿಗೆ ಆಶ್ರಯ ನೀಡಿದವರ ವಿರುದ್ಧವೂ ಕ್ರಮ ಕೈಗೊಳ್ಳ ಬೇಕೆಂದು ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆಯ ಪ್ರವೀಣ್ ಶೆಟ್ಟಿ ಬಣ ಸೋಮವಾರ ಪಟ್ಟಣದಲ್ಲಿ ಪ್ರತಿಭಟನೆ ನಡೆಸಿತು.

ಪಟ್ಟಣದ ಕಕ್ಕೆಹೊಳೆ ಜಂಕ್ಷನ್‌ನಿಂದ ಮಡಿಕೇರಿ ರಸ್ತೆ, ಸಿ.ಕೆ.ಸುಬ್ಬಯ್ಯ ರಸ್ತೆ, ಖಾಸಗಿ ಬಸ್ ನಿಲ್ದಾಣದ ಮೂಲಕ ಜೇಸೀ ವೇದಿಕೆಯವರೆಗೆ ಪ್ರತಿ ಭಟನಾ ಮೆರವಣಿಗೆ ನಡೆಸಿದ ಕಾರ್ಯಕರ್ತರು, ಅಕ್ರಮ ವಲಸಿಗರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ಆಗ್ರಹಿಸಿದರು. ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ಜಿಲ್ಲಾಧ್ಯಕ್ಷ ಕೆ.ಎನ್. ದೀಪಕ್, ಅಕ್ರಮ ಬಾಂಗ್ಲಾ ವಲಸಿಗರು ಅಸ್ಸಾಮಿಗರ ಸೋಗಿನಲ್ಲಿ ನೆಲೆಸುತ್ತಿದ್ದಾರೆ. ಇದರಿಂದಾಗಿ ಸ್ಥಳೀಯ ಕಾರ್ಮಿಕರ ಬದುಕು ಬೀದಿಗೆ ಬರುತ್ತಿದೆ. ಎಂದು ಆರೋಪಿಸಿದರು.

ವಲಸಿಗರು ಇತ್ತೀಚೆಗಷ್ಟೇ ಶಾಂತಳ್ಳಿಯಲ್ಲಿ ಆಟೋ ಚಾಲಕನಿಗೆ ತೀವ್ರ ಹಲ್ಲೆ ನಡೆಸಿದ್ದಾರೆ. ಅಸ್ಸಾಮಿಗರು ಬರುವುದಕ್ಕಿಂತ ಮುಂಚೆ ತೋಟಗಳಲ್ಲಿ ಸ್ಥಳೀಯ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಮಾಲೀಕರಿಗೆ ನಿಯತ್ತಾಗಿದ್ದರು. ಇದೀಗ ಅಸ್ಸಾಮಿಗರು ಮಾಲೀಕರುಗಳ ಮೇಲೆಯೇ ಹಲ್ಲೆ ನಡೆಸುತ್ತಿದ್ದಾರೆ. ಎಲ್ಲೆಡೆ ಅಸ್ಸಾಮಿಗರು ತುಂಬಿದ್ದಾರೆ. ಹೀಗೆಯೇ ಮುಂದುವರೆದರೆ ಮುಂದಿನ ದಿನಗಳಲ್ಲಿ ತೋಟದ ಮಾಲೀಕರಿಗೂ ಭದ್ರತೆ ಇರುವುದಿಲ್ಲ ಎಂದು ಎಚ್ಚರಿಸಿದರು. ಕಾನೂನು ಸಲಹೆಗಾರ ಕಾಟ್ನಮನೆ ವಿಠಲ್ ಗೌಡ, ತಾಲೂಕು ಅಭಿವೃದ್ಧಿ ಹೋರಾಟ ಸಮಿತಿ ಅಧ್ಯಕ್ಷ ಅರುಣ್ ಕಾಳಪ್ಪ, ಅರೆ ಸೇನಾ ಪಡೆಯ ಜಿಲ್ಲಾಧ್ಯಕ್ಷ ರಮೇಶ್ ಮಾತನಾಡಿದರು.

ಕಾರ್ಮಿಕ ಸಂಘಟನೆಯ ಮುಖಂಡ ಹೆಚ್.ಎಂ. ಸೋಮಪ್ಪ, ನಿರ್ವಾಣಪ್ಪ, ಜಿಲ್ಲಾ ರೈತ ಸಂಘದ ಉಪಾಧ್ಯಕ್ಷ ಹೂವಯ್ಯ ಮಾಸ್ಟರ್, ಕರವೇ ಯುವ ಘಟಕದ ಅಧ್ಯಕ್ಷ ವಸಂತ್ ಆಚಾರ್ಯ, ತಾಲೂಕು ಅಧ್ಯಕ್ಷ ರೋಹಿತ್ ಗೌಡ, ಸೋಮವಾರಪೇಟೆ ನಗರ ಘಟಕದ ಅಧ್ಯಕ್ಷ ಬಿ.ಎಸ್. ಮಂಜುನಾಥ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಂಜುನಾಥ್, ಕಾರ್ಮಿಕ ಘಟಕದ ಅಧ್ಯಕ್ಷ ದುರ್ಗೇಶ್, ಕೆ.ಪಿ. ರವೀಶ್, ಅಬ್ಬಾಸ್, ಮಹಿಳಾ ಘಟಕದ ವೇದಾವತಿ, ಶೃತಿ, ಲತಾ ಸೇರಿದಂತೆ ಮತ್ತಿತರರು ಹಾಜರಿದ್ದರು.

ಕರವೇ ಸಂಘಟನೆಯ ನೂರಾರು ಮಂದಿ ಕಾರ್ಯಕರ್ತರು, ನಿವೃತ್ತ ಜಿಲ್ಲಾ ಅರೆಸೇನಾ ಪಡೆಯ ಪದಾಧಿಕಾರಿಗಳು, ಸಾರ್ವಜನಿಕರು, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು.


ಅಕ್ರಮ ಬಾಂಗ್ಲಾ ವಲಸಿಗರ ಗಡೀಪಾರಿಗೆ ಆಗ್ರಹಿಸಿ ಕರವೇ ಕಾರ್ಯಕರ್ತರು ಮಂಗಳವಾರ ಪ್ರತಿಭಟನೆ ನಡೆಸಿದರು.

ಏ.8ರಿಂದ 3 ದಿನಗಳ ಕಾಲ ಪಾಸ್‌ಪೋರ್ಟ್ ಮೇಳ

ಮೈಸೂರು, ಫೆ.3– ಸಂಸದ ಯದುವೀರ್ ಪರಿಶ್ರಮದ ಫಲವಾಗಿ ಕೊಡಗಿನಲ್ಲಿ ಪಾಸ್‌ಪೋರ್ಟ್ ಮೇಳ ಆಯೋಜಿಸಲು ಬೆಂಗಳೂರು ವಿಭಾಗೀಯ ಪಾಸ್‌ಪೋರ್ಟ್ ಕಚೇರಿ ನಿರ್ಧರಿಸಿದೆ.

ಏ.8ರಿಂದ ಮೂರು ದಿನಗಳ ಕಾಲ ಕೊಡಗು ಜಿಲ್ಲೆಯಲ್ಲಿ ಪಾಸ್‌ಪೋರ್ಟ್ ಮೇಳ ನಡೆಯಲಿದೆ. ಕಳೆದ ಫೆಬ್ರವರಿ ತಿಂಗಳಿನಲ್ಲಿ ವಿದೇಶಾಂಗ ಸಚಿವಾಲಯದ ಕಾರ್ಯದರ್ಶಿಗಳಿಗೆ ಪತ್ರ ಬರೆದಿದ್ದ ಯದುವೀರ್ ಕೊಡಗು ಜಿಲ್ಲೆಯಲ್ಲಿ ಪಾಸ್‌ಪೋರ್ಟ್ ಮೇಳ ಆಯೋಜಿಸುವಂತೆ ಮನವಿ ಮಾಡಿದ್ದರು.

ಇದಕ್ಕೆ ಸ್ಪಂದಿಸಿರುವ ಬೆಂಗಳೂರು ರೀಜನಲ್ ಪಾಸ್‌ಪೋರ್ಟ್ ಅಧಿಕಾರಿಗಳು ಸಂಸದರಿಗೆ ಪತ್ರ ಬರೆದು, ಏ.8 ರಿಂದ 10ರ ವರೆಗೆ ಮೇಳ ಆಯೋಜಿಸಲಾಗುವುದು ಹಾಗೂ 8 ರಂದು ಈ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಲು ಆಗಮಿಸಬೇಕು ಎಂದು ಸಂಸದರಿಗೆ ಮನವಿ ಮಾಡಿದ್ದಾರೆ. ಜಿಲ್ಲೆಯ ಹಲವಾರು ಮಂದಿ ಪಾಸ್‌ಪೋರ್ಟ್ ಬೇಕು ಎಂಬ ಮನವಿ ಸಲ್ಲಿಸಿದ್ದರು.

ಒರಿಸ್ಸಾ ಮೂಲದ ಕಾರ್ಮಿಕನ ಹತ್ಯೆ: ಆರೋಪಿ ಬಂಧನ


ಮಹೇಶ್

ಮಡಿಕೇರಿ, ಮಾ.3– ಕಾಫಿ ತೋಟದ ಲೈನ್‌ಮನೆಯಲ್ಲಿ ವಾಸವಾಗಿದ್ದ ಒರಿಸ್ಸಾ ಮೂಲದ ಕಾರ್ಮಿಕನನ್ನು ಅಂಗಡಿಗೆಂದು ಕರೆದೊಯ್ದು ಕೊಲೆ ಮಾಡಿರುವ ಘಟನೆ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಚೆಟ್ಟಳ್ಳಿಯಲ್ಲಿ ನಿನ್ನೆ ನಡೆದಿದೆ.

ಒರಿಸ್ಸಾ ಮೂಲದ ಅಶ್ವಿನಾಗೊಮಾಗೊ (32) ಎಂಬಾತನೇ ಕೊಲೆಯಾದ ದುರ್ದೈವಿಯಾಗಿದ್ದು, ಚೆಟ್ಟಳ್ಳಿ ಮೂಲದ ಕಾರ್ಮಿಕ ಲೈನ್‌ಮನೆಯಲ್ಲೇ ವಾಸವಾಗಿದ್ದ ಮಹೇಶ್(26) ಎಂಬವನೇ ಹತ್ಯೆಗೈದ ಆರೋಪಿಯಾಗಿದ್ದಾನೆ.

ನಿನ್ನೆ ಮಧ್ಯಾಹ್ನ 2 ಗಂಟೆಗೆ ಮಹೇಶ್ ಅಶ್ವಿನಾಗೊಮಾಗೊ ಅವನನ್ನು ಅಂಗಡಿಗೆ ಕರೆದುಕೊಂಡು ಹೋಗಿದ್ದ ಎನ್ನಲಾಗಿದೆ. ಸಂಜೆ ವೇಳೆ ಮಹೇಶ್ ಒಬ್ಬನೇ ಮನೆಗೆ ವಾಪಸ್ಸಾಗಿದ್ದು, ತಡವಾದರೂ ಅಶ್ವಿನಾ ಗೊಮಾಗೊ ಮನೆಗೆ ಮರಳಿರಲಿಲ್ಲವೆನ್ನಲಾಗಿದೆ. ಇದರಿಂದ ಸಂಶಯಗೊಂಡ ಪತ್ನಿ ಸುಂಭಾರಿಗೊಮಾಗೊ ಹಾಗೂ ಇತರ ಕಾರ್ಮಿಕರು ಕಾಫಿ ತೋಟದಲ್ಲಿ ಹುಡುಕಾಟ ನಡೆಸಿದ್ದಾರೆ. ಈ ವೇಳೆ ತೋಟದ ಬೇಲಿಯ ಸಮೀಪ ಕಾಫಿ ಗಿಡದ ಕೆಳಗೆ ಅಶ್ವಿನಾಗೊಮಾಗೊ ಮೃತದೇಹ ಪತ್ತೆಯಾಗಿದೆ. ಮುಖ ಭಾಗ ದಲ್ಲಿ ರಕ್ತದ ಗಾಯಗಳು ಕಂಡು ಬಂದಿದ್ದು, ಈ ಹಿಂದೆಯೂ ಇವರಿಬ್ಬರ ನಡುವೆ ವೈಯಕ್ತಿಕ ವಿಚಾರವಾಗಿ ಜಗಳ ನಡೆದಿತ್ತು ಎನ್ನಲಾಗಿದೆ. ಈ ಕುರಿತು ಪತ್ನಿ ಸುಂಭಾರಿಗೊಮಾಗೊ ಚೆಟ್ಟಳ್ಳಿ ಉಪ ಠಾಣೆಯಲ್ಲಿ ದೂರು ನೀಡಿದ್ದು, ಕೊಲೆ ಆರೋಪದಲ್ಲಿ ಕಾರ್ಮಿಕ ಮಹೇಶ್‌ನನ್ನು ಪೊಲೀಸರು ಬಂಧಿಸಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್. ಬಿಂದುಮಣಿ, ಡಿವೈಎಸ್‌ಪಿ ಸೂರಜ್, ಗ್ರಾಮಾಂತರ ಸಿಪಿಐ ಚಂದ್ರಶೇಖರ್, ಅಪರಾಧ ವಿಭಾಗದ ಸಿಬ್ಬಂದಿಗಳು, ಚೆಟ್ಟಳ್ಳಿ ಉಪ ಠಾಣಾ ಸಿಬ್ಬಂದಿಗಳು ಸ್ಥಳಕ್ಕಾಗಮಿಸಿ ಪರಿಶೀಲಿಸಿದರು. ಚೆಟ್ಟಳ್ಳಿ ಪೊಲೀಸರು ಮೊಕದ್ದಮೆ ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಅಗ್ನಿ ಅಪಘಾತಕ್ಕೆ ಮಾಜಿ ಯೋಧ ಬಲಿ



ಮಡಿಕೇರಿ, ಮಾ.3– ಆಕಸ್ಮಿಕ ಅಗ್ನಿ ಅವಘಡದಲ್ಲಿ ಸಿಆರ್‌ಪಿಎಫ್ ಮಾಜಿ ಯೋಧರೊಬ್ಬರು ಸಾವನ್ನಪ್ಪಿರುವ ಘಟನೆ ಸೋಮವಾರಪೇಟೆ ತಾಲೂಕಿನ ತೋಳೂರು ಶೆಟ್ಟಳ್ಳಿ ಗ್ರಾಮದಲ್ಲಿ ನಡೆದಿದೆ. ಹೆಚ್.ಎ. ವೆಂಕಟೇಶ್(64) ಎಂಬವರೇ ಮೃತ ದುರ್ದೈವಿಯಾಗಿದ್ದಾರೆ. ಮೃತರು ಪತ್ನಿ ಮತ್ತು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

ತೋಟದ ಯಂತ್ರಗಳ ಬಳಕೆಗೆಂದು ಮನೆಯಲ್ಲಿ ಶೇಖರಿಸಿಡಲಾಗಿದ್ದ ಪೆಟ್ರೋಲ್‌ಗೆ ಆಕಸ್ಮಿಕವಾಗಿ ಬೆಂಕಿ ತಗುಲಿ ಕ್ಷಣಾರ್ಧದಲ್ಲೇ ಮನೆಯ ಕೊಠಡಿಗೆಲ್ಲಾ ವ್ಯಾಪಿಸಿದೆ. ಹೆಚ್.ಎ.ವೆಂಕಟೇಶ್ ಗ್ಯಾಂಗ್ರೀನ್‌ನಿಂದ ಕಾಲನ್ನು ಕಳೆದುಕೊಂಡಿದ್ದು, ಬೆಂಕಿಯಿಂದ ಪಾರಾಗಲು ಸಾಧ್ಯವಾಗದೆ ಅಸು ನೀಗಿದ್ದಾರೆ. ಬೆಂಕಿಯ ತೀವ್ರತೆಗೆ ಮನೆಯ ಒಂದು ಭಾಗ ಸಂಪೂರ್ಣ ಸುಟ್ಟು ಕರಕಲಾಗಿದೆ. ಮನೆಯಿಂದ ಹೊಗೆ ಬರುತ್ತಿರುವುದನ್ನು ನೋಡಿದ ಸ್ಥಳೀಯರು ಸ್ಥಳಕ್ಕಾಗಮಿಸಿ ಬೆಂಕಿ ನಂದಿಸಲು ಪ್ರಯತ್ನಿಸಿದ್ದಾರೆ. ಆ ಹೊತ್ತಿಗಾಗಲೇ ವೆಂಕಟೇಶ್ ಸಾವನ್ನಪ್ಪಿದ್ದರು.

ಘಟನಾ ಸ್ಥಳಕ್ಕೆ ಸೋಮವಾರಪೇಟೆ ವೃತ್ತ ನಿರೀಕ್ಷಕ ಮುದ್ದು ಮಹದೇವ ಮತ್ತು ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸೋಮವಾರಪೇಟೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಅರೆಭಾಷೆ ಸಂಸ್ಕೃತಿ, ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳ ಪ್ರಕಟ


ಅನಂತರಾಜ


ಲೋಕೇಶ್ವರಿ


ಲಲಿತ

ಮಡಿಕೇರಿ, ಮಾ.3– ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯು 2025ನೇ ಸಾಲಿನ ಗೌರವ ಪ್ರಶಸ್ತಿಯನ್ನು ಘೋಷಿಸಿದ್ದು, ಸಾಹಿತ್ಯ ಮತ್ತು ಸಂಶೋಧನಾ ಕ್ಷೇತ್ರದಿಂದ ಪುತ್ತೂರಿನ ಅನಂತರಾಜ ಗೌಡ, ಅರೆಭಾಷಿಕ ಸಂಘಟನಾ ಕ್ಷೇತ್ರದಲ್ಲಿ ಬೆಳ್ತಂಗಡಿಯ ಲೋಕೇಶ್ವರಿ ವಿನಯ ಚಂದ್ರ, ಅರೆಭಾಷೆ ಸಾಹಿತ್ಯ ಕ್ಷೇತ್ರದಿಂದ ಮಡಿಕೇರಿಯ ಕಟ್ಟತನ ಲಲಿತ ಅಯ್ಯಣ್ಣ ಅವರನ್ನು ಆಯ್ಕೆ ಮಾಡಲಾಗಿದೆ ಪ್ರಶಸ್ತಿಯು 50 ಸಾವಿರ ರೂ. ನಗದು ಹಾಗೂ ಪ್ರಶಸ್ತಿ ಫಲಕವನ್ನು ಒಳಗೊಂಡಿರುತ್ತದೆ. ಎಂದು ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ ತಿಳಿಸಿದ್ದಾರೆ.

ಕೊಡಗು ಜಿಲ್ಲೆಯಲ್ಲಿ ನಡೆಯುವ ಕ್ರೀಡಾಕೂಟದಲ್ಲಿ ಲಿಂಗ ಭೇದವಿಲ್ಲ

ಮಡಿಕೇರಿ, ಮಾ.3– ಸ್ತ್ರೀ-ಪುರುಷ ಎಂಬ ಭೇದಭಾವ ಇಲ್ಲದೆ ಎಲ್ಲರೂ ಒಂದು ತಂಡವಾಗಿ ಕ್ರೀಡಾಕೂಟಗಳಲ್ಲಿ ಪಾಲ್ಗೊಳ್ಳುವುದು ಕೇವಲ ಜಿಲ್ಲೆಯಲ್ಲಿ ಮಾತ್ರವೇ ಕಾಣಲು ಸಾಧ್ಯ ಇಂತಹ ಹೊಂದಾಣಿಕೆಯ ಕ್ರೀಡಾಕೂಟ ದೇಶದ ಬೇರ್ಯಾವ ಭಾಗದಲ್ಲಿಯೂ ಕಂಡು ಬರುವುದಿಲ್ಲ ಎಂದು ಅಂತರ್ ರಾಷ್ಟ್ರೀಯ ಬಾಸ್ಕೆಟ್‌ಬಾಲ್ ಕ್ರೀಡಾಪಟು ಡಾ.ಮಂಡೇಪಂಡ ಪುಷ್ಪ ಕುಟ್ಟಣ್ಣ ಮೆಚ್ಚುಗೆ ವ್ಯಕ್ತಪಡಿಸಿದರು.

ಚೆಟ್ಟಿ ಮುಕ್ಕಾಟಿರ ಕುಟುಂಬಸ್ಥರು ಈ ಬಾರಿ ಕೊಡವ ಕುಟುಂಬಗಳ ನಡುವೆ ಏಪ್ರಿಲ್-ಮೇ ತಿಂಗಳಲ್ಲಿ ಮೂರ್ನಾಡು ಹಾಗೂ ಅರಮೇರಿಯಲ್ಲಿ ನಡೆಯಲಿರುವ 24ನೇ ವರ್ಷದ 'ಮುಕ್ಕಾಟಿರ ಕ್ರಿಕೆಟ್ ನಮ್ಮೆ' ಆತಿಥ್ಯ ವಹಿಸಿದ್ದು, ಮೂರ್ನಾಡಿನ ಕೊಡವ ಸಮಾಜದಲ್ಲಿ ಆಯೋಜಿಸಲಾಗಿದ್ದ ಕ್ರಿಕೆಟ್ ಪಂದ್ಯಾವಳಿಯ ವೆಬ್‌ಸೈಟ್ ಬಿಡುಗಡೆ ಮತ್ತು ತಂಡಗಳ ನೋಂದಣಿ ಪ್ರಕ್ರಿಯೆಯಲ್ಲಿ ಮಾತನಾಡಿ, ಕೊಡಗಿನಲ್ಲಿ ಆಯೋಜಿಸುವ ಹಾಕಿ, ಕ್ರಿಕೆಟ್ ಸೇರಿದಂತೆ ಇತರ ಕ್ರೀಡಾ ಕೂಟಗಳಲ್ಲಿ ಒಂದು ತಂಡವಾಗಿ ಪುರುಷರು ಮತ್ತು ಮಹಿಳೆಯರು ಜೊತೆಯಾಗಿ ಪಾಲ್ಗೊಳ್ಳುತ್ತಾರೆ. ಇದು ಹೆಮ್ಮೆಯ ವಿಚಾರ ಇಂಥ ವಾತಾವರಣ ಬೇರೆಲ್ಲೂ ಕಂಡುಬರುವುದಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.


ಡಾ.ಮಂಡೇಪಂಡ ಪುಷ್ಪ ಕುಟ್ಟಣ್ಣ ಕ್ರೀಡಾಕೂಟಕ್ಕೆ ಚಾಲನೆ ನೀಡಿದರು.

ದಾನಿಗಳ ನೆರವು ಅಗತ್ಯ: ಅಂತರ ರಾಷ್ಟ್ರೀಯ ರೆಫ್ರಿ ಆಟಗಾರ ಮಾದಂಡ ತಿಮ್ಮಯ್ಯ ಮಾತನಾಡಿ, ಜಿಲ್ಲೆಯಲ್ಲಿ ಹಾಕಿ ಕ್ರೀಡೆಗೆ ಮೊದಲ ಆದ್ಯತೆ ನೀಡಲಾಗುತ್ತಿದೆ. ಉದ್ಯಮಿಗಳು ಪಂದ್ಯಾವಳಿ ಆಯೋಜಿಸುವ ಕುಟುಂಬಕ್ಕೆ ಆರ್ಥಿಕ ನೆರವು ನೀಡಲು ಮುಂದೆ ಬಂದು ಸಹಕಾರ ನೀಡುವಂತಾಗಬೇಕು ಎಂದು ಮಾದಂಡ ತಿಮ್ಮಯ್ಯ ಮನವಿ ಮಾಡಿದರು.

ವೆಬ್‌ಸೈಟ್ ಮತ್ತು ತಂಡಗಳ ನೋಂದಣಿ ಪ್ರಕ್ರಿಯೆಗಳ ಕುರಿತು ಅಜ್ಜೆಟ್ಟಿರ ವಿಕ್ರಮ್ ಉತ್ತಪ್ಪ ವಿವರಿಸಿದರು. ಇದೇ ಸಂದರ್ಭ ಕ್ರಿಕೆಟ್ ನಮ್ಮೆಯ ಕುರಿತು ಮುಕ್ಕಾಟಿರ ಮೌನಿ ಅವರು ಬರೆದಿರುವ ಸಣ್ಣುವಂಡ ನಿಶಾರಕ್ಷಾ ಅವರ ಕಂಠದಲ್ಲಿ ಮೂಡಿ ಬಂದಿರುವ ಹಾಡಿನ ವಿಡಿಯೋವನ್ನು ಬಿಡುಗಡೆ ಮಾಡಲಾಯಿತು. ಸಭಾ ಕಾರ್ಯಕ್ರಮದಲ್ಲಿ ಮುಕ್ಕಾಟಿರ ರವಿ ಚೀಯಣ್ಣ ಸ್ವಾಗತಿಸಿ, ಕ್ರಿಕೆಟ್ ಪಂದ್ಯಾಟಕ್ಕೆ ಎಲ್ಲರ ಬೆಂಬಲ ಕೋರಿದರು. ಮುಕ್ಕಾಟಿರ ಸರಸು ನವೀನ್ ಪ್ರಾರ್ಥಿಸಿದರು. ಮೊಳ್ಳಂಡ ಬೋಳ್ಳಮ್ಮ ಕಾರ್ಯಕ್ರಮ ನಿರೂಪಿಸಿದರು.

ಕಾರ್ಯಕ್ರಮದಲ್ಲಿ ಮುಕ್ಕಾಟಿರ ಕ್ರಿಕೆಟ್ ನಮ್ಮೆಯ ಅಧ್ಯಕ್ಷ ಸುರೇಶ್ ಪೆಮ್ಮಯ್ಯ, ಪಂದ್ಯಾಟದ ಕಾರ್ಯದರ್ಶಿ ಮುಕ್ಕಾಟಿರ ಪೊನ್ನಣ್ಣ ಖಜಾಂಚಿ ಮುಕ್ಕಾಟಿರ ಗಣಪತಿ, ಕೊಡವ ಕ್ರಿಕೆಟ್ ಅಕಾಡೆಮಿ ಅಧ್ಯಕ್ಷ ಕೀತಿಯಂಡ ಎನ್.ಕಾರ್ಸನ್ ಕಾರ್ಯಪ್ಪ ಪ್ರಧಾನ ಕಾರ್ಯದರ್ಶಿ ಕುಂಡ್ರಂಡ ಎಂ. ಬೋಪಣ್ಣ, ಕಾಂತಮೂರ್ನಾಡು ನಾಡುತಕ್ಕರಾದ ಪಳಂಗಂಡ ಮೇದಪ್ಪ, ಕೋಟೇರ ಮುತ್ತಣ್ಣ, ಮಾದೆಯಂಡ ಚಂಗಪ್ಪ ಸೇರಿದಂತೆ ತಕ್ಕರು, ಮುಕ್ಕಾಟಿರ ಮತ್ತು ವಿವಿಧ ಕೊಡವ ಕುಟುಂಬಗಳ ಸದಸ್ಯರು ಉಪಸ್ಥಿತರಿದ್ದರು.

ಇಂದು ಕೈಗಾರಿಕೋದ್ಯಮಿಗಳಿಗೆ ಜಾಗೃತಿ ಕಾರ್ಯಕ್ರಮ

ಮಡಿಕೇರಿ, ಮಾ.3–ಆರ್‌ಎಎಂಪಿ ಯೋಜನೆಯಡಿಯಲ್ಲಿ ಝುಡ್ ಇ.ಡಿ ಮತ್ತು ಲೀನ್ ಯೋಜನೆ ಕುರಿತು ಒಂದು ದಿನದ ಅರಿವು ಕಾರ್ಯಕ್ರಮವು ಮಾ.4 ರಂದು ಪಟ್ಟಣದ ಹೋಟೇಲ್ ಕನ್ನಿಕಾ ಇಂಟರ್ ನ್ಯಾಷನಲ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್, ಕಾಸಿಯಾ ಅಧ್ಯಕ್ಷ ಬಿ.ಆರ್. ಗಣೇಶ್ ರಾವ್ , ಉಪಾಧ್ಯಕ್ಷ ನಿಂಗಣ್ಣ ಎಸ್.ಬಿರಾದರ, ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಬಿ.ಆರ್.ನಾಗೇಂದ್ರ ಪ್ರಸಾದ್, ಕೈಗಾರಿಕಾ ಪ್ರದೇಶ ಉದ್ಯಮಿಗಳ ಸಂಘದ ಅಧ್ಯಕ್ಷ ಎ.ಎನ್.ಪ್ರವೀಣ್, ಕೊಡಗು ಎಸ್‌ಎಲ್‌ಎನ್ ಎಕ್ಸ್‌ಪೋರ್ಟ್ ವ್ಯವಸ್ಥಾಪಕ ನಿರ್ದೇಶಕ ಎನ್.ವಿಶ್ವನಾಥನ್, ಜಿಲ್ಲಾ ಸಣ್ಣ ಕೈಗಾರಿಕೆಗಳ ಸಂಘದ ಅಧ್ಯಕ್ಷ ಸುದೀಶ್ ಕುಮಾರ್ ಬಿ.ಕೆ, ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಕೆ. ಹನುಮಂತರಾಯ ಪಾಲ್ಗೊಳ್ಳುವರು.

ಸೋಮಕ್ಕ ನಿಧನ



ನಾಪೋಕ್ಲು, ಮಾ.3– ಕುಯ್ಯಂಗೇರಿ ಗ್ರಾಮದ ಕುರಿಕಡ ಸೋಮಕ್ಕ(75) ಸೋಮವಾರ ದೈವಾಧೀನರಾದರು. ಅವಿವಾಹಿತರಾಗಿದ್ದ ಮೃತರು ಸಹೋದರ ಬಸಪ್ಪ ಅವರನ್ನು ಅಗಲಿದ್ದಾರೆ. ಮೃತರ ಅಂತಿಮ ಸಂಸ್ಕಾರ ಮಂಗಳವಾರ ನೆರವೇರಿತು.

ಬಾಳೆಯಡ ವಿನೋದ್



ನಾಪೋಕ್ಲು: ಸ್ಥಳೀಯ ಗ್ರಾಮದ ನಿವಾಸಿ ದಿವಂಗತ ಬಾಳೆಯಡ ಅಪ್ಪಣ್ಣ ಅವರ ಪುತ್ರ ಬಾಳೆಯಡ ವಿನೋದ್(49) ಸೋಮವಾರ ಅನಾರೋಗ್ಯದಿಂದ ನಿಧನರಾದರು. ಮೃತರು ಅವಿವಾಹಿತರಾಗಿದ್ದು, ತಾಯಿ, ಸಹೋದರಿಯನ್ನು ಅಗಲಿದ್ದಾರೆ. ಮೃತರ ಅಂತಿಮ ಸಂಸ್ಕಾರ ಮಂಗಳವಾರ ನೆರವೇರಿತು.

ಎ.ಆರ್.ಮೇರಿ



ನಾಪೋಕ್ಲು: ಇಲ್ಲಿಯ ಹಳೇತಾಲೂಕು ನಿವಾಸಿ ದಿವಂಗತ ರಫೈಲ್ ಅವರ ಪತ್ನಿ ಎ.ಆರ್.ಮೇರಿ(85) ಸೋಮವಾರ ನಿಧನರಾದರು. ಮೃತರು ಮೂವರು ಪುತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಮಂಗಳವಾರ ನಡೆಯಿತೆಂದು ಕುಟುಂಬದ ಮೂಲಗಳು ತಿಳಿಸಿವೆ.

ವಿಜೃಂಭಣೆಯ ಮಹದೇಶ್ವರ ಸ್ವಾಮಿ ಜಾತ್ರಾ ಉತ್ಸವ

ಬೇಗೂರು, ಮಾ. 3(ವಿಎನ್)–ಗ್ರಾಮದ ಶ್ರೀ ಬಂಡಿಗೆರೆ ಮಹದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಜಯ ಘೋಷದೊಂದಿಗೆ ವಿಜೃಂಭಣೆಯಿಂದ ನಡೆಯಿತು.

ಬಂಡಿಗೆರೆ ಮಹದೇಶ್ವರಸ್ವಾಮಿ ದೇವಾಲಯದ ಬಳಿ ಇರುವ ಬೇವಿನ ಮರದ ಬಳಿ ಮಹದೇಶ್ವರ ಸ್ವಾಮಿಯ ರಥವನ್ನು ಗ್ರಾಮಸ್ಥರು ಬಣ್ಣ ಬಣ್ಣದ ಬಟ್ಟೆಗಳಿಂದ ವಿವಿಧ ಬಗೆ ಬಗೆಯ ಹೂಗಳಿಂದ ರಥವನ್ನು ಅಲಂಕರಿಸಿದ್ದರು. ಮಂಗಳವಾರ ಸಂಜೆ ಬಂಡಿಗೆರೆ ಮಹದೇಶ್ವರ ಸ್ವಾಮಿಯ ಉತ್ಸವ ಮೂರ್ತಿಯನ್ನು ದೇವಾಲಯದಿಂದ ಛತ್ರಿ ಚಾಮರ ವಾದ್ಯ ಮೇಳ, ಸತ್ತಿಗೆ ಸೂರಪಾಣಿ, ತಮಟೆ ಸದ್ದಿನ ಮೂಲಕ ರಥದಲ್ಲಿರಿಸಿ ಪೂಜೆ ಸಲ್ಲಿಸಿದ ನಂತರ ಭಕ್ತರು ಉಘೇ ಮಾದಪ್ಪ ಎಂಬ ಜಯ ಘೋಷದೊಂದಿಗೆ ರಥವನ್ನು ಎಳೆದು ಸಂಭ್ರಮಿಸಿದರು. ಕಮರಹಳ್ಳಿಯ ಶ್ರೀ ಬಸವೇಶ್ವರ ಸ್ವಾಮಿ ಹಾಗೂ ಬೆಳೆಚಲವಾಡಿಯ ರಾಮಲಿಂಗೇಶ್ವರ ಸ್ವಾಮಿ ಹಾಗೂ ವಾನರಗಳು ರಥದ ನಡುವೆ ದೇವಾಲಯದ ಸುತ್ತ ಪ್ರದಕ್ಷಿಣೆ ಹಾಕಿದವು

ಕೊಂಡಮಹೋತ್ಸವ : ಮಂಗಳವಾರ ಬೆಳಗಿನ ಜಾವ ಉತ್ಸವ ಮೂರ್ತಿಗಳು ಬಂಡಿಗೆರೆ ಮಹದೇಶ್ವರ ಸ್ವಾಮಿ ದೇವಾಲಯದ ಆವರಣಕ್ಕೆ ತಲುಪಿದ ನಂತರ ವೀರಗಾಸೆ ಮತ್ತು ಉತ್ಸವ ಮೂರ್ತಿಗಳನ್ನು ಹೊತ್ತು ಕೊಂಡವನು ಹಾಯಲಾಯಿತು ನಂತರ ಹರಕೆ ಹೊತ್ತ ಭಕ್ತಾದಿಗಳು ಕೊಂಡವನ್ನು ಹಾಯುವ ಮೂಲಕ ಹರಕೆ ಹರಕೆ ತೀರಿಸಿದರು ಹಾಗೂ ಹರಕೆ ಹೊತ್ತು ಭಕ್ತರು ಸಂಜೆ ರಥೋತ್ಸವ ನಡೆಯುವವರೆಗೂ ದೇವಾಲಯದ ಸುತ್ತ ಹುಲಿ ವಾಹನ ಉತ್ಸವ ನಡೆಸಿದರು

ವಿಶೇಷ ಪೂಜೆ : ಜಾತ್ರೆಯ ಅಂಗವಾಗಿ ಬಂಡಿಗೆರೆ ಮಹದೇಶ್ವರ ಸ್ವಾಮಿಗೆ ವಿಶೇಷ ರುದ್ರಾಭಿಷೇಕ, ಶಿರಾಭಿಷೇಕ, ಗಂಗೆ, ಗಣಪತಿ ನವಗ್ರಹ ಪೂಜೆ ನಡೆಸಲಾಯಿತು ಹಾಗೂ ಗಣಪತಿ ಮತ್ತು ಮೃತ್ಯುಂಜಯ ಹೋಮ ಸೇರಿದಂತೆ ವಿವಿಧ ಪೂಜಾ ನಡೆಸಲಾಯಿತು ಹಾಗೂ ಜಾತ್ರೆಯ ಅಂಗವಾಗಿ ಗ್ರಾಮದಲ್ಲಿರುವ ಎಲ್ಲಾ ದೇವಾಲಯಗಳಲ್ಲೂ ವಿಶೇಷ ಪೂಜೆ ನಡೆಸಲಾಯಿತು ಎಲ್ಲಾ ದೇವಾಲಯಗಳನ್ನು ತಳಿರು ತೋರಣ ಹಾಗೂ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು ಭಕ್ತಾದಿಗಳು ಸರದಿ ಸಲಿನಲ್ಲಿ ನಿಂತು ದೇವರ ದರ್ಶನ ಪಡೆದರು. ಈ ಜಾತ್ರಾ ಮಹೋತ್ಸವದಲ್ಲಿ ಬೆಂಗಳೂರು ಮೈಸೂರು ಕೇರಳ ತಮಿಳುನಾಡು ಸೇರಿದಂತೆ ಬೇಗೂರು ಕಾಳನಹುಂಡಿ ಹಾಲಹಳ್ಳಿ, ನಿಟ್ರೆ ಕೋಟೆಕೆರೆ ಸೋಮಹಳ್ಳಿ ಸೇರಿದಂತೆ ಸುತ್ತಮುತ್ತಲ ಗ್ರಾಮಗಳ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದರು


ಮಹದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಕೆರೆ–ಕಟ್ಟೆ, ಚೆಕ್ ಡ್ಯಾಂ ತುಂಬಿಸಲು 490 ಕೋಟಿ ರೂ. ಯೋಜನೆ ಬಜೆಟ್‌ನಲ್ಲಿ ಸೇರ್ಪಡೆ

ಸಂಸದ ಸುನೀಲ್ ಬೋಸ್ ಇಂಗಿತ



ಚಾಮರಾಜನಗರ, ಮಾ.3–ಕೊಳ್ಳೇಗಾಲ ತಾಲೂಕಿನ ಸರಗೂರು ಗ್ರಾಮದ ಬಳಿಯ ಕಾವೇರಿ ನದಿಯಿಂದ ನೀರನ್ನು ಎತ್ತಿ ಹನೂರು ತಾಲೂಕಿನ ಉಡುತೊರೆ ಹಳ್ಳ ಜಲಾಶಯ ಮತ್ತು ಕುರಟ್ಟಿಹೊಸೂರು ಹಾಗೂ ಸಂತೇಕಾನೆ ಸುತ್ತಮುತ್ತಲಿನ ಕೆರೆ–ಕಟ್ಟೆಗಳು, ಚೆಕ್‌ಡ್ಯಾಮ್‌ಗಳನ್ನು ತುಂಬಿ ಸಲು 490 ಕೋಟಿ ರೂ. ಮೊತ್ತಕ್ಕೆ ವಿಸ್ತೃತ ಯೋಜನಾ ವರದಿ ತಯಾರಿಸಲಾಗಿದ್ದು, ಈ ಬಾರಿಯ ಬಜೆಟ್‌ಗೆ ಸೇರ್ಪಡೆಗೊಳ್ಳುವ ವಿಶ್ವಾಸವಿದೆ ಎಂದು ಸಂಸದ ಸುನೀಲ್ ಬೋಸ್ ಇಂಗಿತ ವ್ಯಕ್ತಪಡಿಸಿದ್ದಾರೆ

ಜಿಲ್ಲೆಯ ಹನೂರು ತಾಲೂಕಿನ ಕುರಟ್ಟಿಹೊಸೂರು, ಕೌದಳ್ಳಿ, ಮಾರ್ಟಳ್ಳಿ ಗ್ರಾ. ಪಂ. ವ್ಯಾಪ್ತಿಯ ಗ್ರಾಮಸ್ಥರು ಕುಡಿಯುವ ನೀರಿಗೆ ತೊಂದರೆ ಮತ್ತು ಅಂತರ್ಜಲ ಮಟ್ಟ ವ್ಯಾಪಕವಾಗಿ ಕುಸಿದಿರುವ ಬಗ್ಗೆ ಗಮನ ಸೆಳೆದಿದ್ದಾರೆ. ಈ ಸಂಬಂಧ ಉಂಟಾಗುತ್ತಿರುವ ಸಾಮಾಜಿಕ ಮತ್ತು ಆರ್ಥಿಕ ತೊಂದರೆಗಳ ಬಗ್ಗೆ ವಿವರಿಸಿದ್ದಾರೆ. ಎಂದರು.

ಈ ಸಂಬಂಧವಾಗಿ ಜಲಸಂಪನ್ಮೂಲ ಇಲಾಖೆಯ ಅಧಿಕಾರಿಗಳೊಂದಿಗೆ ಹಲವು ಹಂತಗಳಲ್ಲಿ ಸಭೆಗಳನ್ನು ನಡೆಸಲಾಗಿದೆ. ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ಹನೂರು ತಾಲೂಕಿನ ಕುರಟ್ಟಿ ಹೊಸೂರು, ಕೌದಳ್ಳಿ, ಮಾರ್ಟಳ್ಳಿ, ದಿನ್ನಳ್ಳಿ ಗ್ರಾಪಂ. ಗಳಿಗೆ ಒಳಪಡುವ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಸಮಗ್ರವಾಗಿ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲು ಸೂಚನೆ ನೀಡಲಾಗಿತ್ತು. ಅದರಂತೆ ಕೊಳ್ಳೇಗಾಲ ತಾಲೂಕಿನ ಸರಗೂರು ಗ್ರಾಮದ ಬಳಿಯ ಕಾವೇರಿ ನದಿಯಿಂದ ನೀರನ್ನು ಎತ್ತಿ ಹನೂರು ತಾಲೂಕಿನ ಉಡುತೊರೆ ಹಳ್ಳ ಜಲಾಶಯ ಮತ್ತು ಕುರಟ್ಟಿ ಹೊಸೂರು ಹಾಗೂ ಸಂತೇಕಾನೆ ಸುತ್ತ ಮುತ್ತಲಿನ ಕೆರೆ–ಕಟ್ಟೆಗಳು, ಚೆಕ್ ಡ್ಯಾಮ್‌ಗಳನ್ನು ತುಂಬಿಸಲು 490 ಕೋಟಿ ರೂ. ಮೊತ್ತಕ್ಕೆ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲಾಗಿದೆ ಎಂದು ಹೇಳಿದರು

ಸದರಿ ಯೋಜನೆಯಡಿ ಕಾವೇರಿ ನದಿಯಿಂದ ನೀರೆತ್ತಿ, ಏರು ಕೊಳವೆಯ ಮೂಲಕ ಅಜ್ಜಿಪುರ ಗ್ರಾಮದ ಬಳಿ ವಿತರಣಾ ತೊಟ್ಟಿಗೆ ನೀರು ಹರಿಸುವುದು. ಗುರುತ್ವಾಕರ್ಷಣಾ ಮೂಲಕ ಉಡುತೊರೆ ಹಳ್ಳ ಜಲಾಶಯ ಮತ್ತು ದಂಟಳ್ಳಿ, ಕುರಟ್ಟಿಹೊಸೂರು ಹಾಗೂ ಮಾರ್ಟಳ್ಳಿ ಗ್ರಾಮದ ಸುತ್ತಮುತ್ತಲಿನ ಕೆರೆ ಕಟ್ಟೆ ಹಾಗೂ ರಾಮಾಪುರ–ಕೌದಳ್ಳಿ ಹಳ್ಳದ ಚೆಕ್ ಡ್ಯಾಂಗಳಿಗೆ ನೀರನ್ನು ಹರಿಸಲು ಉದ್ದೇಶಿಸಲಾಗಿದೆ

ಈ ಯೋಜನೆಯಿಂದ 9 ಗ್ರಾಪಂ ಪರಿಮಿತಿಗೊಳಪಡುವ ಗ್ರಾಮಗಳಿಗೆ ಪ್ರಯೋಜನವಾ ಗಲಿದೆ. ಹನೂರು ಭಾಗದ ಜನರ ದಶಕಗಳ ಕನಸನ್ನು ನನಸು ಮಾಡಲು ನಾನು ಬದ್ಧವಾಗಿದ್ದು, ಶೀಘ್ರದಲ್ಲೇ ಯೋಜನೆಗೆ ಅನುಮೋದನೆ ದೊರಕಿಸಿ ಕಾಮಗಾರಿ ಆರಂಭಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಳಗೆರೆ ಮಾರಮ್ಮನ ದೇವಸ್ಥಾನದಲ್ಲಿ ಚಿನ್ನಾಭರಣ, ಗೋಲಕದ ಹಣ ಕಳವು



ಯಳಂದೂರು, ಮಾ.3–ದೇವಸ್ಥಾನದ ಬೀಗವನ್ನು ಒಡೆದು ಒಳನುಗ್ಗಿರುವ ಕಳ್ಳರು ಚಿನ್ನಾಭರಣ, ಗೋಲಕದ ಹಣವನ್ನು ಕದ್ದೊಯ್ದಿದಿರುವ ಪ್ರಕರಣವೊಂದು ನಡೆದಿದೆ.

ತಾಲೂಕಿನ ಯರಿಯೂರು ಗ್ರಾಮದ ದಲಿತ ಸಮುದಾಯದ ಬೀದಿಯಲ್ಲಿರುವ ಒಳಗೆರೆ ಮಾರಮ್ಮನ ದೇವಸ್ಥಾನದಲ್ಲಿ ಅಂದಾಜು 6 ಲಕ್ಷ ರೂ.ಗಳ ಚಿನ್ನ ಮತ್ತು ಬೆಳ್ಳಿಯ ಆಭರಣಗಳು ಹಾಗೂ ಗೋಲಕದ ಹಣವನ್ನು ತೆಗೆದುಕೊಂಡು ಹೋಗಿದ್ದಾರೆ.

ಪ್ರತಿ ಮಂಗಳವಾರ ಪೂಜೆ ನಡೆಯುತ್ತದೆ ಇಂದು ಬೆಳಿಗ್ಗೆ ದೇವಸ್ಥಾನ ಶುಚಿಗೊಳಿಸಲು 9 ಗಂಟೆ ಸಮಯದಲ್ಲಿ ದೇವಸ್ಥಾನದ ಬಾಗಿಲು ತೆರೆದಾಗ ಚಿನ್ನ ಮತ್ತು ಬೆಳ್ಳಿಯ ಆಭರಣಗಳು ಹಾಗೂ ಗೋಲಕದ ಹಣವನ್ನು ಕಳ್ಳತನವಾಗಿರುವುದು ಕಂಡುಬಂದಿದೆ. ಕಳ್ಳರು ಕೆಸ್ತೂರು ರಸ್ತೆಯಲ್ಲಿ ಗೋಲಕವನ್ನು ಒಡೆದು ಹಣವನ್ನು ತೆಗೆದುಕೊಂಡು ಖಾಲಿ ಗೋಲಕವನ್ನು ಎಸೆದು ಪರಾರಿಯಾಗಿದ್ದಾರೆ ಎಂದು ಯಜಮಾನರಾದ ಶೀನಿವಾಸ್, ಮಹದೇವ ಮುಖಂಡರಾದ ಕುಮಾರ್ ಸಿದ್ದರಾಜು ಹಾಗೂ ಗ್ರಾಮಸ್ಥರು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಆರೋಪಿ ಬಂಧನ: 330 ಗ್ರಾಂ ಗಾಂಜಾ ವಶ

ಕೊಳ್ಳೇಗಾಲ. ಮಾ.3–ಅಕ್ರಮವಾಗಿ ಒಣಗಾಂಜಾ ಸಾಗಾಣಿಕೆಯಲ್ಲಿ ತೊಡಗಿದ್ದ ಆರೋಪಿಯನ್ನು ಪಟ್ಟಣ ಪೊಲೀಸರು ಬಂಧಿಸಿದ್ದಾರೆ.

ಬಿಳಿಗಿರಿರಂಗನ ಬೆಟ್ಟದ ಹೊಸಪೋಡು ಗಿರಿಜನ ಹಾಡಿಯ ಜಡೆಯ (25) ಬಂಧಿತ ಆರೋಪಿ.

ಈತ ಪಟ್ಟಣದ ಎಪಿಎಂಸಿ ರಸ್ತೆಯಲ್ಲಿ ಅನ್ಯ ವ್ಯಕ್ತಿಯೊಬ್ಬರಿಗೆ ಮಾರಾಟ ಮಾಡಲೆಂದು ಒಣಗಾಂಜಾವನ್ನು ತೆಗೆದುಕೊಂಡು ಬರುತ್ತಿರುವ ಬಗ್ಗೆ ದೊರೆತ ಖಚಿತ ಮಾಹಿತಿ ಮೇರೆಗೆ ಪಟ್ಟಣ ಪೊಲೀಸರು ದಾಳಿ ನಡೆಸಿ ಆರೋಪಿಯನ್ನು ಮಾಲುಸಮೇತ ಬಂಧಿಸಿದ್ದು ಬಂಧಿತನಿಂದ ಮುನ್ನೂರ ಮೂವತ್ತು ಗ್ರಾಂ ಗಾಂಜಾ ವಶಪಡಿಸಿಕೊಂಡು ಮುಂದಿನ ಕ್ರಮಕೈಗೊಂಡಿದ್ದಾರೆ. ಸಬ್ ಇನ್ಸ್‌ಪೆಕ್ಟರ್ ವರ್ಷ, ಸಹಾಯಕ ಸಬ್ ಇನ್ಸ್‌ಪೆಕ್ಟರ್ ತಖೀವುಲ್ಲಾ, ಬಿಳಿಗೌಡ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಹಳೆ ಮೀಸಲಾತಿ ಆಧಾರದಲ್ಲಿ ಹುದ್ದೆಗಳನ್ನು ಭರ್ತಿ ಮಾಡಿದರೆ ಉಗ್ರ ಹೋರಾಟ

ಚಾಮರಾಜನಗರ, ಮಾ.3–ಪರಿಶಿಷ್ಟ ಜಾತಿಯ ಶೇ.15 ರಷ್ಟು ಒಳ ಮೀಸಲಾತಿಯಲ್ಲಿ ಎಡಗೈ ಸಮುದಾಯಕ್ಕೆ ಅವಕಾಶ ಕಲ್ಪಿಸಬೇಕು ಎಂದು ಕರ್ನಾಟಕ ಮಾದರ ಮಹಾಸಭಾದ ಜಿಲ್ಲಾಧ್ಯಕ್ಷ ಎಂ.ಶಿವಮೂರ್ತಿ ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.

56,342 ಖಾಲಿ ಹುದ್ದೆಗಳ ಭರ್ತಿಯಲ್ಲಿ ಶೇ15 ರಲ್ಲಿಯೂ ಒಳ ಮೀಸಲಾತಿಯನ್ನು ಗ್ರೂಪ್–ಎ, ಬಿ, ಸಿ ಜಾರಿಗೊಳಿಸಲು ಸಂಬಂಧಿತ ಆದೇಶ ಗಳನ್ನು ತಕ್ಷಣ ತಿದ್ದುಪಡಿ ಮಾಡಿ ಶೇ.56 ರಷ್ಟು ಮೀಸಲಾತಿಯನ್ನು ಸಂವಿಧಾನದ 9ನೇ ಅನುಸೂಚಿಯಲ್ಲಿ ಷೆಡ್ಯೂಲ್‌ಗೆ 9ಗೆ ಸೇರಿಸಬೇಕು. 2024 ಆ.1 ರ ಸುಪ್ರೀಂ ಕೋರ್ಟ್ ತೀರ್ಪಿನಂತೆ ಪರಿಶಿಷ್ಟ ಜಾತಿ ಒಳ ಮೀಸಲಾತಿ ಜಾರಿ ಮಾಡಲು ಆಯಾ ರಾಜ್ಯಗಳಿಗೆ ಆದೇಶದ ಮೇಲೆ ರಾಜ್ಯ ಸರ್ಕಾರವು ನಿವೃತ್ತ ನ್ಯಾಯಮೂರ್ತಿಗಳಾದ ಹೆಚ್.ಎನ್.ನಾಗಮೋಹನದಾಸ್ ಆಯೋಗವನ್ನು ರಚನೆ ಮಾಡಿ ಹೊಸದಾಗಿ 101 ಜಾತಿಗಳ ಸಮೀಕ್ಷೆಯನ್ನು ನಡೆಸಿತ್ತು ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ನೆರೆಯ ರಾಜ್ಯಗಳಾದ ತೆಲಂಗಾಣ, ಆಂಧ್ರಪ್ರದೇಶದಲ್ಲಿ ನೂತನ ಒಳ ಮೀಸಲಾತಿಯಂತೆ ಶಿಕ್ಷಣ, ಉದ್ಯೋಗ, ಮುಂಬಡ್ತಿ ಮತ್ತು ಬ್ಯಾಕ್ಲಾಕ್ ಹುದ್ದೆಗಳನ್ನು ನೀಡುತ್ತಿದೆ. ಅದೇ ಮಾದರಿಯಲ್ಲಿ ರಾಜ್ಯದ ಪರಿಶಿಷ್ಟ ಜಾತಿಯ 15% ಒಳ ಮೀಸಲಾತಿಯಲ್ಲಿ ಎಡಗೈ ಜನಾಂಗಕ್ಕೆ ಅವಕಾಶವನ್ನು ಕಲ್ಪಿಸಿ ಬದ್ಧತೆಯನ್ನು ತೋರಬೇಕು. ಇಲ್ಲವಾದಲ್ಲಿ ರಾಜ್ಯಾದ್ಯಂತ ಮಾದಿಗರು ಪ್ರತಿಭಟನೆಯನ್ನು ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಸರ್ಕಾರವನ್ನು ಎಚ್ಚರಿಸಿದರು.

ಕರ್ನಾಟಕ ಮಾದರ ಮಹಾಸಭಾ ಕೊಳ್ಳೇಗಾಲ ತಾಲೂಕು ಅಧ್ಯಕ್ಷ ಸಿ.ಸೋಮು, ಹನೂರು ತಾಲೂಕು ಅಧ್ಯಕ್ಷ ಸುದೇಶ್, ಚಾಮರಾಜನಗರ ತಾಲೂಕು ಅಧ್ಯಕ್ಷ ಎಂ. ರಾಜು, ಗುಂಡ್ಲುಪೇಟೆ ತಾಲೂಕು ಅಧ್ಯಕ್ಷ ಅಂಕಹಳ್ಳಿ ಸಿದ್ದಯ್ಯ, ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯ ಕೆ.ಜಗದೀಶ್, ಬಾಬುಜಗಜೀವನರಾಂ ಸಂಘದ ಅಧ್ಯಕ್ಷ ಬಿ.ಬಾಲರಾಜು ಪತ್ರಿಕಾಗೋಷ್ಠಿಯಲ್ಲಿದ್ದರು.


ಮಾದರ ಮಹಾಸಭಾದ ಜಿಲ್ಲಾಧ್ಯಕ್ಷ ಎಂ.ಶಿವಮೂರ್ತಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಪ್ರೇಕ್ಷಕರೊಂದಿಗೆ ಹಯಗ್ರೀವ ಚಿತ್ರ ವೀಕ್ಷಿಸಿದ ನಟ ಧನ್ವೀರ್

ಚಾಮರಾಜನಗರ, ಮಾ.3– ನಗರದ ಭ್ರಮರಾಂಬ ಚಿತ್ರಮಂದಿರಕ್ಕೆ ಹಯಗ್ರೀವ ಚಿತ್ರದ ನಾಯಕ ನಟ ಧನ್ವೀರ್, ನಟಿ ಸಂಜಾನ ಆನಂದ್ ಭೇಟಿ ನೀಡಿ ಪೇಕ್ಷಕರೊಂದಿಗೆ ಕೆಲ ಹೊತ್ತು ಚಿತ್ರ ವೀಕ್ಷಿಸಿ ಅಭಿಮಾನಿಗಳನ್ನು ಹುರಿದುಂಬಿಸಿದರು.

ಚಿತ್ರಮಂದಿರಕ್ಕೆ ಭಾನುವಾರ ಸಂಜೆ ಆಗಮಿಸಿದ ಅವರು ಚಿತ್ರಮಂದಿರದ ಬಾಲ್ಕನಿಯಲ್ಲಿ ಪೇಕ್ಷಕರೊಂದಿಗೆ ತಾವು ನಟಿಸಿರುವ ಹಯಗ್ರೀವ ಚಿತ್ರವನ್ನು ಕೆಲಹೊತ್ತು ವೀಕ್ಷಿಸಿ ಚಿತ್ರಮಂದಿರದಿಂದ ಹೊರಬಂದು ಕಾರು ಹತ್ತಿ ಪ್ರೇಕ್ಷಕರತ್ತ ಕೈ ಬಿಸಿದರು.

ತಮ್ಮ ಭಾವಚಿತ್ರ ಹಿಡಿದಿದ್ದ ಒಬ್ಬ ಅಭಿಮಾನಿಯನ್ನು ಕರೆದು ಹಸ್ತಾಕ್ಷರ ಬರೆಯುವ ಮೂಲಕ ಅಭಿಮಾನಿಗಳ ಪ್ರೀತಿಗೆ ಮನಸೋತರು. ಚಿತ್ರಮಂದಿರಕ್ಕೆ ಭೇಟಿ ನೀಡಿದ ನಟ ಧನ್ವೀರ್, ನಟಿ ಸಂಜನಾ ಆನಂದ, ನಿರ್ದೇಶಕ ರಘುಕುಮಾರ್ ರವರನ್ನು ಚಿತ್ರದ ಮಂದಿರದ ವ್ಯವಸ್ಥಾಪಕ ರೇವಂತ್ ದೇವರು ಹೂಗುಚ್ಚ ನೀಡಿ ಸ್ವಾಗತಿಸಿದರು.



ಗ್ಯಾರಂಟಿ ಹೆಸರಿನಲ್ಲಿ ದಲಿತರಿಗೆ ಮೋಸ: ಆರೋಪ

ಚಾಮರಾಜನಗರ: ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಹೆಸರಿನಲ್ಲಿ ದಲಿತರಿಗೆ ಮೋಸ ಮಾಡುತ್ತಿದ್ದು, ದಲಿತರ ಮೀಸಲು ನಿಧಿಗೆ ಕನ್ನ ಹಾಕುತ್ತಿದೆ ಎಂದು ಬಿಜೆಪಿ ಎಸ್‌ಸಿ ಮೋರ್ಚಾದ ಜಿಲ್ಲಾಧ್ಯಕ್ಷ ನವೀನ್ ಮೌರ್ಯ ಆರೋಪಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರ 3 ವರ್ಷಗಳಿಂದ ಒಟ್ಟು 38.859 ಕೋಟಿ ಗ್ಯಾರಂಟಿ ಯೋಜನೆಗಳಿಗೆ ಬಳಸಿದೆ ಇದನ್ನು ಬಿಜೆಪಿ ಎಸ್‌ಸಿ, ಎಸ್‌ಟಿ ಮೋರ್ಚಾ ತೀವ್ರವಾಗಿ ಖಂಡಿಸುತ್ತದೆ. ಎಸ್‌ಸಿಎಸ್‌ಪಿ, ಟಿಎಸ್‌ಪಿ ಯೋಜನೆಯ ಅನುದಾನಗಳನ್ನು ಅನ್ಯ ಉದ್ದೇಶಗಳಿಗೆ ಬಳಸಬಾರದು ಎಂದು ಕಾನೂನು ಮಾಡಿದರೂ ಕೂಡ ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳ ಬಳಕೆ ಮಾಡಿಕೊಂಡು ದಲಿತರಿಗೆ ಮೋಸ ಮಾಡಿದೆ ಹಾಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸೇರಿದಂತೆ ಸಂಬಂಧಪಟ್ಟ ಸಚಿವರು, ಅಧಿಕಾರಿಗಳ ಮೇಲೆ ಆಟ್ರಾಸಿಟಿ ಕಾಯ್ದೆಯಡಿಯಲ್ಲಿ ಪ್ರಕರಣ ದಾಖಲಿಸಬೇಕು ಎಂದು ಒತ್ತಾಯಿಸಿದರು.

ದಲಿತರು, ಅಂಬೇಡ್ಕರ್ ಸಂವಿಧಾನದ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ದಲಿತರಿಗೆ, ಅಂಬೇಡ್ಕರ್‌ರವರಿಗೆ, ಸಂವಿಧಾನಕ್ಕೆ ವಿರುದ್ಧವಾದ ಕೆಲಸ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಸಿಎಂಗೆ ಕಪ್ಪು ಬಾವುಟ ಪ್ರದರ್ಶನ ಬೆದರಿಕೆ: ಮುಖ್ಯಮಂತ್ರಿ ಸಿದ್ದರಾಮಯ್ಯನವರು ಈ ಬಜೆಟ್‌ನಲ್ಲೂ ಎಸ್.ಸಿ ಎಸ್‌ಟಿ, ಟಿಎಸ್‌ಪಿ ಅನುದಾನ ದುರ್ಬಳಕೆ ಮಾಡಿಕೊಂಡರೆ ಮುಂದೆ ಸಿದ್ಧರಾಮಯ್ಯನವರು ಜಿಲ್ಲೆಗೆ ಯಾವುದೇ ಕಾರ್ಯಕ್ರಮಕ್ಕೂ ಬಂದ್ರು ಅವರಿಗೆ ಕಪ್ಪು ಬಾವುಟ ಪ್ರದರ್ಶನ ಮಾಡುವ ಕಾರ್ಯಕ್ರಮವನ್ನು ಬಿಜೆಪಿಯಿಂದ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಅವರು ಈ ವೇಳೆ ಎಚ್ಚರಿಸಿದರು.

ಯುದ್ಧದಲ್ಲಿ ಭಾಗಿಯಾಗದಂತೆ ಯುರೋಪಿಯನ್ ದೇಶಗಳಿಗೆ ಇರಾನ್ ಎಚ್ಚರಿಕೆ

ಲೆಬನಾನ್ ಮೇಲೆ ಇಸ್ರೇಲ್ ದಾಳಿ



ಟೆಹ್ರಾನ್, ಮಾ.3–ಇರಾನ್ ವಿರುದ್ಧ ಇಸ್ರೇಲ್ ಮತ್ತು ಅಮೆರಿಕ ನಡೆಸಿದ ಜಂಟಿ ದಾಳಿಯಲ್ಲಿ ಇಸ್ಲಾಮಿಕ್ ಗಣರಾಜ್ಯದ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಹತ್ಯೆಗೀಡಾದ ಬಳಿಕ ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷ ತೀವ್ರ ಸ್ವರೂಪ ಪಡೆದುಕೊಂಡಿದೆ. ಇದಕ್ಕೆ ಪ್ರತಿಕಾರವಾಗಿ ಟೆಹ್ರಾನ್, ಗಲ್ಫ್ ಪ್ರದೇಶದಲ್ಲಿರುವ ಅಮೆರಿಕದ ನೆಲೆಗಳ ಮೇಲೆ ದಾಳಿಗಳನ್ನು ಮುಂದುವರೆಸಿದೆ.

ಇದರಿಂದ ಆಕ್ರೋಶಗೊಂಡಿರುವ ಜರ್ಮನಿ, ಬ್ರಿಟನ್ ಮತ್ತು ಫ್ರಾನ್ಸ್, ಇರಾನ್‌ನ ಕ್ಷಿಪಣಿ ಉಡಾವಣಾ ಸಾಮರ್ಥ್ಯ ನಾಶಮಾಡಲು ರಕ್ಷಣಾತ್ಮಕ ಕ್ರಮ ತೆಗೆದುಕೊಳ್ಳಬಹುದು ಎಂದು ಹೇಳಿವೆ. ಆದರೆ ಇಸ್ರೇಲ್ ಮತ್ತು ಯುನೈಟೆಡ್ ಸ್ಟೇಟ್ಸ್ ವಿರುದ್ಧದ ಯುದ್ಧದಲ್ಲಿ ಭಾಗಿಯಾಗದಂತೆ ಇರಾನ್ ಮಂಗಳವಾರ ಯುರೋಪಿಯನ್ ದೇಶಗಳಿಗೆ ಎಚ್ಚರಿಕೆ ನೀಡಿದೆ.

ಇದು ಯುದ್ಧದ ಸಮಯವಾಗಿದೆ. ಇರಾನ್ ವಿರುದ್ಧದ ಯಾವುದೇ ಕೃತ್ಯವನ್ನು ಆಕ್ರಮಣಕಾರರೊಂದಿಗೆ ಕೈಜೋಡಿಸಲಾಗಿದೆ ಎಂದು ಪರಿಗಣಿಸಲಾಗುತ್ತದೆ. ಇದನ್ನು ಇರಾನ್ ವಿರುದ್ಧದ ಯುದ್ಧದ ಕ್ರಿಯೆ ಎಂದು ಪರಿಗಣಿಸಲಾಗುತ್ತದೆ ಎಂದು ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಎಸ್ಮಾಯಿಲ್ ಬಕ್ಹೈ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಯುದ್ಧವು ನಾಲ್ಕನೇ ದಿನಕ್ಕೆ ಕಾಲಿಟ್ಟಿದ್ದು, ಮಂಗಳವಾರ ತನ್ನ ಪಡೆಗಳು ಇಸ್ರೇಲ್ ಮತ್ತು ಕತಾರ್‌ನಲ್ಲಿರುವ ಅಮೆರಿಕ ಮಿಲಿಟರಿ ನೆಲೆಯ ಮೇಲೆ ದಾಳಿ ನಡೆಸಿವೆ ಎಂದು ಇರಾನ್ ಸೇನೆ ಹೇಳಿದೆ.

ಇರಾನ್ ಅಧ್ಯಕ್ಷರ ಕಚೇರಿ ಮೇಲೆ ದಾಳಿ: ಇಸ್ರೇಲ್ ಸೇನೆಯು ಮಂಗಳವಾರ ಇರಾನ್ ಅಧ್ಯಕ್ಷರ ಕಚೇರಿ ಮತ್ತು ಟೆಹ್ರಾನ್‌ನಲ್ಲಿರುವ ರಾಷ್ಟ್ರೀಯ ಭದ್ರತಾ ಮಂಡಳಿ ಕಟ್ಟಡದ ಮೇಲೆ ವೈಮಾನಿಕ ದಾಳಿ ನಡೆಸಿದೆ ಎಂದು ಹೇಳಿದೆ.

ಇಸ್ರೇಲಿ ವಾಯುಪಡೆ ಟೆಹ್ರಾನ್‌ನ ಹೃದಯಭಾಗದಲ್ಲಿರುವ ಇರಾನಿನ ಭಯೋತ್ಪಾದಕ ಆಡಳಿತದ ಸೌಲಭ್ಯಗಳನ್ನು ರಾತ್ರೋರಾತ್ರಿ ಹೊಡೆದುರುಳಿಸಿದೆ ಎಂದು ಸೇನೆ ತಿಳಿಸಿದೆ.

ಲೆಬನಾನ್ ಮೇಲೆ ಇಸ್ರೇಲ್ ಭೂದಾಳಿ: ಇಸ್ರೇಲ್ ರಕ್ಷಣಾ ಸಚಿವರು ತಮ್ಮ ಸೈನಿಕರಿಗೆ ಲೆಬನಾನ್‌ನಲ್ಲಿ ಹೆಚ್ಚುವರಿ ಕಾರ್ಯತಂತ್ರದ ಸ್ಥಾನಗಳ ಮೇಲೆ ಹಿಡಿತ ಸಾಧಿಸುವಂತೆ ಸೂಚಿಸಿದ ಸ್ವಲ್ಪ ಸಮಯದ ನಂತರ, ಇಸ್ರೇಲ್ ಪಡೆಗಳು ದಕ್ಷಿಣ ಲೆಬನಾನ್‌ನ ಗಡಿ ಪ್ರದೇಶಕ್ಕೆ ಧಾವಿಸಿವೆ ಎಂದು ಲೆಬನಾನ್ ಸೇನೆ ಮಂಗಳವಾರ ತಿಳಿಸಿದೆ.

ನಿಯಂತ್ರಣ ತಪ್ಪಿ ವಿದ್ಯುತ್ ಕಂಬಕ್ಕೆ ಕಾರು ಡಿಕ್ಕಿ ; ಐವರು ವಿದ್ಯಾರ್ಥಿಗಳಿಗೆ ಗಾಯ

ಈ ಪೈಕಿ ಓರ್ವನ ಸ್ಥಿತಿ ಗಂಭೀರ

ಮೈಸೂರು,ಮಾ.3(ಪಿಎಂ)– ನಗರದ ವರ್ತುಲ ರಸ್ತೆಯ ಮಾನಸಿ ನಗರದ ಬಳಿ ಕಾರೊಂದು ನಿಯಂತ್ರಣ ತಪ್ಪಿ ವಿದ್ಯುತ್ ಕಂಬಕ್ಕೆ ಡಿಕ್ಕಿಯಾದ ಪರಿಣಾಮ ವಿಟಿಯು ಕಾಲೇಜಿನ ಐವರು ವಿದ್ಯಾರ್ಥಿಗಳು ಗಂಭೀರವಾಗಿ ಗಾಯಗೊಂಡಿರುವ ಘಟನೆ ಮಂಗಳವಾರ ರಾತ್ರಿ ಸಂಭವಿಸಿದೆ. ವಿಟಿಯು ಕಾಲೇಜಿನ ಪ್ರಥಮ ವರ್ಷದ ಎಂ.ಟೆಕ್‌ನ ಐವರು ವಿದ್ಯಾರ್ಥಿಗಳು ಸಾತಗಳ್ಳಿ ಕಡೆಗೆ ಅತೀ ವೇಗವಾಗಿ ಕಾರು ಚಲಾಯಿಸಿಕೊಂಡು ಹೋಗುತ್ತಿದ್ದ ವೇಳೆ ಈ ಅಪಘಾತ ನಡೆದಿದೆ. ವೇಗದ ರಭಸದಿಂದ ಮೊದಲಿಗೆ ರಸ್ತೆ ವಿಭಜಕಕ್ಕೆ ಗುದ್ದಿದ ಕಾರು, ಆ ಬಳಿಕ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿದೆ. ಇದರಿಂದ ಕಾರಿನಲ್ಲಿದ್ದ ಐವರು ವಿದ್ಯಾರ್ಥಿಗಳು ಗಾಯಗೊಂಡಿದ್ದು, ಈ ಪೈಕಿ ಓರ್ವನ ಪರಿಸ್ಥಿತಿ ಗಂಭೀರ ಎನ್ನಲಾಗಿದೆ. ಈ ಐವರನ್ನು ಖಾಸಗಿ ಆಸ್ಪತ್ರೆಗೆ ಸೇರಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಸಿದ್ಧಾರ್ಥನಗರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವರುಣಾ ಮೇಲ್ಗಾಲುವೆ ಪಿಲ್ಲರ್‌ಗಳ ಸಂರಕ್ಷಣೆಗೆ ಅಂತೂ ಮನಸ್ಸು ಮಾಡಿದ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು!

ನಾಲೆಯುದ್ದಕ್ಕೂ ಪಿಲ್ಲರ್‌ಗಳ ಸುತ್ತ ಗೋಡೆ ನಿರ್ಮಾಣಕ್ಕೆ ನಿರ್ಧಾರ

ಇಲ್ಲಿ ತ್ಯಾಜ್ಯ ಸುಡುವವರ ವಿರುದ್ಧ ಕ್ರಮದ ಎಚ್ಚರಿಕಾ ಫಲಕ ಅಳವಡಿಕೆ



ಹಾನಿಗೊಳಗಾಗಿರುವ ವರುಣಾ ಮೇಲ್ಗಾಲುವೆಯ ಕಂಬವನ್ನು ಪರಿಶೀಲಿಸುತ್ತಿರುವ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು



ಮೇಲ್ಗಾಲುವೆ ಕೆಳಗೆ ಕಸ ಅಥವಾ ತ್ಯಾಜ್ಯ ಸುರಿಯುವುದು, ಸುಡುವುದನ್ನು ನಿಷೇಧಿಸಿರುವ ಎಚ್ಚರಿಕಾ ಫಲಕಗಳನ್ನು ಅಳವಡಿಸುತ್ತಿರುವುದು.

ಮೈಸೂರು, ಮಾ.3(ಎಂಕೆ)–ಲಕ್ಷಾಂತರ ಕುಟುಂಬಗಳಿಗೆ ಆಸರೆಯಾಗಿರುವ ವರುಣಾ ನಾಲೆಯ ಮೇಲ್ಗಾಲುವೆ (ಅಕ್ವಾಡಕ್) ಕಂಬ (ಪಿಲ್ಲರ್)ಗಳ ಸಂರಕ್ಷಣೆಗೆ ಕಡೆಗೂ ಕಾವೇರಿ ನೀರಾವರಿ ನಿಗಮ ಮಂಡಳಿ ಮುಂದಾಗಿದೆ.

ಮೈಸೂರಿನ ರಿಂಗ್ ರಸ್ತೆ ಸಮೀಪ ಹಳೇ ಕೆಸರೆ ಬಳಿ ಮೈಸೂರು–ಬೆಂಗಳೂರು ಹೆದ್ದಾರಿಯ ಮೇಲೆ ಹಾದು ಹೋಗಿರುವ ವರುಣಾ ಮೇಲ್ಗಾಲುವೆ(ದೇವರಾಜ ಅರಸು ನಾಲೆ)ಯ ಪಿಲ್ಲರ್‌ಗಳ ಅಡಿಯಲ್ಲಿ ಕಿಡಿಗೇಡಿಗಳು ತಾಮ್ರಕ್ಕಾಗಿ ವೈಯರ್‌ಗಳನ್ನು ನಿರಂತರವಾಗಿ ಸುಡುತ್ತಿರುವುದರಿಂದ ನಾಲೆಯ ಮೇಲ್ಗಾಲುವೆ ಕಂಬವೊಂದಕ್ಕೆ ಹಾನಿಯಾಗಿ ಅದರಲ್ಲಿ ಬಿರುಕು ಕಾಣಿಸಿಕೊಂಡು, ಅಪಾಯದ ಸ್ಥಿತಿ ಎದುರಾಗಿತ್ತು.

ಹಾಗೆಯೇ ವರುಣಾ ನಾಲೆಯ ಸಂರಕ್ಷಣೆ ಕುರಿತಂತೆ ಫೆ.14ರಂದು ನರಸಿಂಹರಾಜ ಠಾಣೆ ಪೊಲೀಸರು, ಕಾವೇರಿ ನೀರಾವರಿ ನಿಗಮ ಮಂಡಳಿ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಪತ್ರ ಬರೆದು ವಸ್ತುಸ್ಥಿತಿ ಕುರಿತು ಮಾಹಿತಿ ತಿಳಿಸಿದ್ದರ ಬಗ್ಗೆ 'ಮೈಸೂರು ಮಿತ್ರ'ನ ಫೆ.15ರ ಸಂಚಿಕೆಯಲ್ಲಿ 'ವರುಣಾ ನಾಲೆ ಕೆಳಗೆ ತ್ಯಾಜ್ಯ ವಸ್ತುಗಳಿಗೆ ಬೆಂಕಿ; ನಾಲೆ ಕಂಬದಲ್ಲಿ ಬಿರುಕು' ಶೀರ್ಷಿಕೆಯಡಿ ವರದಿ ಪ್ರಕಟಿಸಲಾಗಿತ್ತು.

ನರಸಿಂಹರಾಜ ಠಾಣೆ ಪೊಲೀಸರು ಕಾವೇರಿ ನೀರಾವರಿ ನಿಗಮಕ್ಕೆ ಪತ್ರ ಬರೆದು 14 ದಿನಗಳು ಕಳೆದರೂ ಯಾವುದೇ ಸಂರಕ್ಷಣೆ ಕ್ರಮಕೈಗೊಳ್ಳದ ಹಿನ್ನಲೆಯಲ್ಲಿ ಫೆ.27ರಂದು 'ಅಪಾಯದ ಸ್ಥಿತಿಯಲ್ಲಿ ವರುಣಾ ನಾಲೆ' ಶೀರ್ಷಿಕೆಯಡಿ ಸವಿಸ್ತಾರವಾದ ವರದಿಯನ್ನು ಪ್ರಕಟಿಸಿ ಎಚ್ಚರಿಸಲಾಗಿತ್ತು.

'ಮೈಸೂರು ಮಿತ್ರ'ನ ಕಾಳಜಿಯ ಸರಣಿ ವರದಿ ಬಳಿಕ ಕಡೆಗೂ ಎಚ್ಚೆತ್ತ ಕಾವೇರಿ ನೀರಾವರಿ ನಿಗಮದ ಹಿರಿಯ ಅಧಿಕಾರಿಗಳು ಸೋಮವಾರ (ಮಾ.2) ಮಧ್ಯಾಹ್ನದ ವೇಳೆಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಹಾನಿಗೀಡಾಗಿರುವ ವರುಣಾ ನಾಲೆಯ ಮೇಲ್ಗಾಲುವೆ ಕಂಬಗಳ ಸುರಕ್ಷತೆ ಕ್ರಮಕ್ಕೆ ಮುಂದಾಗಿದ್ದಾರೆ.

ಕಾವೇರಿ ನೀರಾವರಿ ನಿಗಮ ಮಂಡಳಿಯ ಕಾರ್ಯನಿರ್ವಾಹಕ ಇಂಜಿನಿಯರ್ ಎ.ಎಸ್.ಭಾಸ್ಕರ್ ನೇತೃತ್ವದಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಶ್ವೇತಾ ಮತ್ತು ಜೂನಿಯರ್ ಇಂಜಿನಿಯರ್ ಮಧುಶ್ರೀ ಪರಿಶೀಲನೆ ನಡೆಸಿದ್ದು, ಮೇಲ್ಗಾಲುವೆ ಕಂಬಕ್ಕೆ ಕಬ್ಬಿಣದ ಜಾಕೆಟಿಂಗ್ ಭದ್ರತೆ ನೀಡುವುದರ ಜೊತೆಗೆ ಮೇಲ್ಗಾಲುವೆ ಸುತ್ತಲೂ ಗೋಡೆ ನಿರ್ಮಾಣ ಕುರಿತು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಾರೆ.

ಪಿಲ್ಲರ್ ಹೊರಭಾಗಕ್ಕೆ ಹಾನಿ: ವರುಣಾ ಮೇಲ್ಗಾಲುವೆಯ 49ನೇ ಕಂಬದ ಹೊರಭಾಗಕ್ಕೆ ಹಾನಿಯಾಗಿದ್ದು, ಡಿಸೈನರ್‌ಗಳ ಸಲಹೆ ಪಡೆದು ಜಾಕೆಟಿಂಗ್ ಭದ್ರತೆ ಒದಗಿಸಲಾಗುವುದು. ಹಾಗೆಯೇ ಪಿಲ್ಲರ್ ಕೆಳಗೆ ತ್ಯಾಜ್ಯಗಳನ್ನು ಸುಡುತ್ತಿರುವುದನ್ನು ತಡೆಯಲು ಮೇಲ್ಗಾಲುವೆ ಪಿಲ್ಲರ್‌ಗಳ ಸುತ್ತಲೂ(ಕೆಳ ಭಾಗಕ್ಕೆ) ಕಾಂಪೌಂಡ್ ನಿರ್ಮಾಣ ಮಾಡಲು ನಿರ್ಧರಿಸಿದ್ದು, ಪತ್ರಿಕೆಯಲ್ಲಿ ಪ್ರಕಟವಾಗಿರುವ ವರದಿ ಸಹಿತ ಸರ್ಕಾರಕ್ಕೆ ಪಸ್ತಾವನೆ ಸಲ್ಲಿಸಲಾಗುತ್ತಿದೆ ಎಂದು ಕಾವೇರಿ ನೀರಾವರಿ ನಿಗಮದ ಕಾರ್ಯನಿರ್ವಾಹಕ ಇಂಜಿನಿಯರ್ ಎ.ಎಸ್. ಭಾಸ್ಕರ್ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದರು.

ಮೈಸೂರು ಮಿತ್ರ ಫಲಶ್ರುತಿ

ಅಕ್ಕ–ಪಕ್ಕದವರೇ...!: ಮೇಲ್ಗಾಲುವೆ ಕೆಳಗೆ ತಾಮ್ರಕ್ಕಾಗಿ ತ್ಯಾಜ್ಯ ಸುಡುತ್ತಿರುವುದು ಅಕ್ಕ–ಪಕ್ಕದವರೇ ಹೊರತು ಬೇರೆ ಕಡೆಯಿಂದ ಯಾರು ಬರಲು ಸಾಧ್ಯವಿಲ್ಲ. ವರುಣಾ ನಾಲೆಯ ಮಹತ್ವ ಮತ್ತು ನಾಲೆ ಉಪಯುಕ್ತತೆ ಬಗ್ಗೆ ಅರಿವಿಲ್ಲದವರು ಇಂತಹ ಕೃತ್ಯವೆಸಗುತ್ತಿದ್ದಾರೆ. ಹಾಗಾಗಿ ಮುಂದಿನ ದಿನಗಳಲ್ಲಿ ತ್ಯಾಜ್ಯ ಸುಡುವವರಿಗೆ ಮೇಲ್ಗಾಲುವೆ ಪಿಲ್ಲರ್‌ಗಳ ಬಳಿ ಸುಳಿಯಲು ಅವಕಾಶವೇ ಇಲ್ಲದಂತೆ ಮಾಡಲಾಗುವುದು ಎಂದು ತಿಳಿಸಿದರು.

ಎಚ್ಚರಿಕೆ ಫಲಕಗಳ ಅಳವಡಿಕೆ: ವರುಣಾ ಮೇಲ್ಗಾಲುವೆ ಕೆಳಗೆ ಯಾವುದೇ ತರದ ಕಸ ಅಥವಾ ತ್ಯಾಜ್ಯ ಸುರಿಯುವುದು ಮತ್ತು ಸುಡುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದ್ದು, ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸಲಾಗುವುದು ಎಂದು ಎಚ್ಚರಿಕೆ ಫಲಕಗಳನ್ನು ಮೇಲ್ಗಾಲುವೆ ಉದ್ದಕ್ಕೂ ಅಳವಡಿಸಲಾಗಿದೆ ಎಂದು ಕಾವೇರಿ ನೀರಾವರಿ ನಿಗಮದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಶ್ವೇತಾ ತಿಳಿಸಿದರು.

ಆತಂಕ ಪಡುವ ಅಗತ್ಯವಿಲ್ಲ: ವರುಣಾ ಮೇಲ್ಗಾಲುವೆ ಕಂಬದ ಹೊರ ಮೇಲ್ಮೈಗೆ ಹಾನಿಯಾಗಿದ್ದು, ಕಂಬದ ಸಾಮರ್ಥ್ಯ ಕಡಿಮೆಯಾಗಿಲ್ಲ. ಹೊರ ರಚನೆಯಲ್ಲಿ ಬಿರುಕಿದ್ದು, ಡಿಸೈನರ್‌ಗಳ ಸಲಹೆಯಂತೆ ಪಿಲ್ಲರ್‌ಗೆ ಭದ್ರತೆ ನೀಡಲಾಗುವುದು ಎಂದು ಮಾಹಿತಿ ನೀಡಿದರು.

ಜೀವಸೆಲೆ: ಬೇಕು–ಬೇಡ ಹೋರಾಟದ ನಡುವೆ 1979 ರಲ್ಲಿ ನಿರ್ಮಾಣವಾದ ವರುಣಾ ನಾಲೆ ಮೈಸೂರಿನ ನಾಲ್ಕು ಹಾಗೂ ಮಂಡ್ಯದ ಒಂದು ಸೇರಿ ಐದು ತಾಲೂಕುಗಳ 80 ಸಾವಿರಕ್ಕೂ ಅಧಿಕ ಎಕರೆ ಕೃಷಿ ಭೂಮಿಗೆ ನೀರುಣಿಸುತ್ತಿದ್ದು, ಸುಮಾರು 82 ಗ್ರಾಮಗಳ ಕೃಷಿ ಭೂಮಿಗೆ ಜೀವಸೆಲೆಯಾಗಿದೆ.

ಫೋನ್ ಕದ್ದಾಲಿಕೆ ಆರೋಪ

ನನ್ನ, ಡಿ.ಕೆ.ಶಿವಕುಮಾರ್ ಸಂಬಂಧ ಹಾಲು–ಜೇನು



ಬೆಂಗಳೂರು, ಮಾ.3(ಕೆಎಂಶಿ)– ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಮೇಲೆ ಕಣ್ಣಿಡಲು ಫೋನ್ ಕದ್ದಾಲಿಕೆ ನಡೆಯುತ್ತಿದೆ ಎಂಬ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರ ಆರೋಪವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಳ್ಳಿಹಾಕಿದ್ದಾರೆ.

ನನ್ನ ಮತ್ತು ಶಿವಕುಮಾರ್ ನಡುವಿನ ಬಾಂಧವ್ಯವನ್ನು ಹಾಳು ಮಾಡುವ ಕುತಂತ್ರ ಇದಾಗಿದೆ ಎಂದಿರುವ ಅವರು, 'ತಾ ಕಳ್ಳ ಪರರ ನಂಬ' ಎಂಬ ಗಾದೆಯಂತಿದೆ. ಇದೊಂದು ಅತೃಪ್ತ ಆತ್ಮಗಳ ಹತಾಶ ಹೇಳಿಕೆಯಾಗಿದೆ.

ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಈ ನಿರುದ್ಯೋಗಿ ವಿರೋಧ ಪಕ್ಷದ ನಾಯಕರು ನನ್ನ ಮತ್ತು ಡಿ.ಕೆ.ಶಿವಕುಮಾರ್ ಅವರ ನಡುವಿನ ಸಂಬಂಧಕ್ಕೆ ಹುಳಿ ಹಿಂಡಲು ಪ್ರಯತ್ನಿಸುತ್ತಲೇ ಇದ್ದಾರೆ. ಇದರಿಂದ ಅವರೊಳಗೆ ತುಂಬಿ ಕೊಂಡಿರುವ ಹುಳಿ ಖಾಲಿಯಾಗಬಹುದೇ ಹೊರತು ನಮ್ಮ ಹಾಲು–ಜೇನಿನಂತಹ ಸಂಬಂಧದ ಮೇಲೆ ಯಾವ ಪರಿಣಾಮವೂ ಆಗುವುದಿಲ್ಲ ಅವರಿಗೆ ತಿಳಿದಿರಲಿ.

ಕುಮಾರಸ್ವಾಮಿ ಮುಖ್ಯಮಂತ್ರಿಗಳಾಗಿದ್ದವರು, ಇನ್ನೊಬ್ಬರು ಉಪಮುಖ್ಯಮಂತ್ರಿ ಮತ್ತು ಗೃಹ ಸಚಿವರಾಗಿದ್ದವರು. ಇವರ ಹೇಳಿಕೆಗಳನ್ನು ಗಮನಿಸಿದರೆ ತಮ್ಮ ಅನುಭವದ ಬಲದಿಂದಲೇ ಈ ಆರೋಪ ಮಾಡುತ್ತಿರುವಂತೆ ಕಾಣಿಸುತ್ತಿದೆ.

ನಮ್ಮದು ಆಂತರಿಕ ಪ್ರಜಾಪ್ರಭುತ್ವ ಇರುವ ಪಕ್ಷ. ಕಾಂಗ್ರೆಸ್ ಪಕ್ಷ ಎನ್ನುವುದು ಪ್ರಧಾನಿ ಎದುರು ಬಾಯಿ ಬಿಡಲಾಗದೆ ಕೈಕಾಲು ನಡುಗುವಂತಹ ಪರಿಸ್ಥಿತಿ ಇರುವ ಬಿಜೆಪಿಯೂ ಅಲ್ಲ, ಏಕ ಕುಟುಂಬದ ಅಧಿಪತ್ಯ ಇರುವ ಜೆಡಿಎಸ್ ಕೂಡಾ ಅಲ್ಲ.

ಕಾಂಗ್ರೆಸ್ ಶಾಸಕರಲ್ಲಿ ಯಾರೂ ನನ್ನ ಇಲ್ಲವೇ ಶಿವಕುಮಾರ್ ಬೆಂಬಲಿಗರಲ್ಲ, ಎಲ್ಲರೂ ಪಕ್ಷದ ಬೆಂಬಲಿಗರು. ಪಕ್ಷದ ಶಿಸ್ತಿನ ಚೌಕಟ್ಟಿನೊಳಗೆ ವೈಯಕ್ತಿಕವಾಗಿ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ, ಜೊತೆಯಲ್ಲಿ ಊಟ–ತಿಂಡಿ ಮಾಡುವ ಎಲ್ಲ ಸ್ವಾತಂತ್ರ್ಯಗಳು ಅವರಿಗೆ ಇದೆ.

ಹೈಕಮಾಂಡ್ ಆದೇಶಕ್ಕೆ ಬದ್ಧ: ಆದರೆ ಯಾವ ಶಾಸಕರು ಏನನ್ನೇ ಹೇಳಿದರೂ ಅಂತಿಮವಾಗಿ ಅವರನ್ನೂ ಸೇರಿದಂತೆ ನಾನು ಮತ್ತು ಶಿವಕುಮಾರ್ ನಮ್ಮ ಪಕ್ಷದ ಹೈಕಮಾಂಡ್ ಆದೇಶಕ್ಕೆ ತಲೆಬಾಗುವವರು. ಇದನ್ನು ನಾವಿಬ್ಬರೂ ಒಂದಲ್ಲ ನೂರು ಬಾರಿ ಹೇಳಿದ್ದೇವೆ. ಈ ರೀತಿ ಸುಳ್ಳು ಸುದ್ದಿಗಳನ್ನು ಹರಡಿ ನಮ್ಮಿಬ್ಬರ ಸಂಬಂಧವನ್ನು ಹಾಳು ಮಾಡಿ, ಡಿ.ಕೆ.ಶಿವಕುಮಾರ್ ಅವರನ್ನು ಒಲಿಸಿಕೊಳ್ಳುವ ದುರಾಲೋಚನೆ ಏನಾದರೂ ಬಿಜೆಪಿ ಮತ್ತು ಜೆಡಿಎಸ್ ನಾಯಕರಿಗೆ ಇದ್ದರೆ, ಅವರ ಹಗಲು ಕನಸುಗಳಿಗೆ ಶುಭ ಹಾರೈಸುತ್ತೇನೆ ಎಂದಿದ್ದಾರೆ.

ಶಿವಕುಮಾರ್ ಒಬ್ಬ ಕಟ್ಟಾ ಕಾಂಗ್ರೆಸ್ಸಿಗ, ಸುಳ್ಳು ಕೇಸ್‌ಗಳನ್ನು ಹಾಕಿ, ಜೈಲಿಗೆ ಕಳಿಸಿ ಅವರನ್ನು ಮಣಿಸುವ ಎಲ್ಲ ಪ್ರಯತ್ನಗಳನ್ನು ಬಿಜೆಪಿ ಮಾಡಿಯಾಗಿದೆ. ಇದಕ್ಕೆಲ್ಲ ಮಣಿಯದೆ ಅವರು ಪಕ್ಷಕ್ಕೆ ನಿಷ್ಠರಾಗಿ ಉಳಿದವರು ಎನ್ನುವುದು ಈ ಕುತಂತ್ರಿ ನಾಯಕರಿಗೆ ತಿಳಿದಿರಲಿ.

2018ರಲ್ಲಿ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ ಆದಿಚುಂಚನಗಿರಿಯ ಪೂಜ್ಯ ನಿರ್ಮಲಾನಂದನಾಥ ಸ್ವಾಮಿಗಳ ಫೋನನ್ನೆ ಕದ್ದಾಲಿಸಿದ್ದಾರೆ ಎಂದು ಈಗಿನ ಅವರ ರಾಜಕೀಯ ಸಂಗಾತಿ ಬಿ.ವೈ ವಿಜಯೇಂದ್ರ ಅವರೇ ಆರೋಪ ಮಾಡಿದ್ದರು. ಇದರ ಬಗ್ಗೆ ತನಿಖೆ ಮಾಡಿದ್ದ ಸಿಬಿಐ, ಒಬ್ಬ ಸ್ವಾಮೀಜಿಗಳದ್ದಷ್ಟೇ ಅಲ್ಲ, ಬದಲಿಗೆ ಏಳು ಸ್ವಾಮೀಜಿಗಳ ಫೋನ್‌ಗಳ ಕದ್ದಾಲಿಕೆ ಮಾಡಲಾಗಿದೆ ಎಂದು ತಿಳಿಸಿತ್ತು.

ಹಾಡಹಗಲೇ ಪೊಲೀಸ್, ಸಿಬಿಐ, ಇಡಿ, ಐಟಿ ಇಲಾಖೆಗಳ ದುರ್ಬಳಕೆ ಯಾಗುತ್ತಿರುವ ಬಗ್ಗೆ ಇಡೀ ದೇಶದ ಜನ ಮಾತನಾಡಿಕೊಳ್ಳುತ್ತಿದ್ದಾರೆ. ಇಂತಹವರು ತಮ್ಮ ರಾಜಕೀಯ ವಿರೋಧಿಗಳ ಫೋನ್‌ಗಳನ್ನು ಕದ್ದು ಆಲಿಸದೆ ಬಿಡುತ್ತಾರೆಯೇ ಆದರೆ ಇಂತಹ ಬೆದರಿಕೆಗಳಿಗೆ ನಾನಾಗಲಿ, ನನ್ನ ಪಕ್ಷದ ಯಾವ ನಾಯಕರಾಗಲಿ ಜಗ್ಗುವವರಲ್ಲ, ಬಗ್ಗುವವರೂ ಅಲ್ಲ ಎನ್ನುವುದನ್ನು ಸ್ಪಷ್ಟಪಡಿಸುತ್ತೇನೆ.

ಕುಮಾರಸ್ವಾಮಿಯವರಿಗೆ ಈ ಗೂಢ ಚರ್ಯೆಯ ಪಾಠವನ್ನು ಅವರ ತಂದೆಯವರೇ ಹೇಳಿಕೊಟ್ಟಿರಬಹುದು. ತನ್ನನ್ನು ಪ್ರಧಾನಿ ಮಾಡಿದ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದ ಸೀತಾರಾಂ ಕೇಸರಿಯವರ ವಿರುದ್ಧವೇ ಗೂಡ ಚರ್ಯೆ ಮಾಡಿದ್ದ ಕಾರಣಕ್ಕೆ ಕಾಂಗ್ರೆಸ್ ಪಕ್ಷ ತನ್ನ ಬೆಂಬಲವನ್ನು ಹಿಂತೆಗೆದುಕೊಂಡಿರುವುದು ಇತಿಹಾಸದ ಪುಟಗಳಲ್ಲಿದೆ. ಈ ಅಪನಂಬಿಕೆ ಮತ್ತು ಸಣ್ಣತನಗಳಿಂದಾಗಿ ಕನ್ನಡಿಗರೊಬ್ಬರು ಇನ್ನಷ್ಟು ಕಾಲ ಪ್ರಧಾನಿಯಾಗುವ ಅವಕಾಶ ತಪ್ಪಿಹೋಯಿತು ಎನ್ನುವುದು ವಿಷಾದನೀಯ ವಾಸ್ತವ.

ಕದ್ದಾಲಿಕೆ ಮಾಡಿದ್ದರೆ ಸಿದ್ದವನದಲ್ಲಿ ಕಬ್ಬೆಕ್ಕು ನಡೆಸಿದ ಕರಾಮತ್ತು ತಿಳಿದು ಅಧಿಕಾರ ಉಳಿಸಿಕೊಳ್ಳುತ್ತಿದ್ದೆ...!

ಕುಂಬಳಕಾಯಿ ಕಳ್ಳ ಎಂದರೆ ಹೆಗಲೇಕೆ ಮುಟ್ಟಿಕೊಳ್ಳುವಿರಿ: ಸಿಎಂ ಸಿದ್ದರಾಮಯ್ಯಗೆ ಕುಮಾರಸ್ವಾಮಿ ತಿರುಗೇಟು



ಬೆಂಗಳೂರು: ಕದ್ದಾಲಿಕೆ ನನ್ನ ಗುಣವಲ್ಲ, ಅದೇನಿದ್ದರೂ ಕಾಂಗ್ರೆಸ್ ಪಕ್ಷದ್ದೇ ಆವಿಷ್ಕಾರ! ಅದೇ ನಿಮಗೆ ಬಂದಿರುವ ಸಂಸ್ಕಾರ!! ನಾನು ಫೋನ್ ಕದ್ದಾಲಿಕೆ ಮಾಡಿದ್ದಿದ್ದರೆ ಸಿದ್ದವನದಲ್ಲಿ ಕೂತು ಯಾವ ಕಬ್ಬೆಕ್ಕು ಕರಾಮತ್ತು ನಡೆಸಿತು ಎನ್ನುವುದನ್ನು ಪತ್ತೆ ಹಚ್ಚಿ ಹೇಗಾದರೂ ಸರಿ, ಅಧಿಕಾರ ಉಳಿಸಿಕೊಳ್ಳುತ್ತಿದ್ದೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಮುಖ್ಯಮಂತ್ರಿ ಸಿದ್ದರಾಮಯ್ಯರ ವಿರುದ್ಧ ಕಿಡಿಕಾರಿದ್ದಾರೆ.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಮೇಲೆ ಕಣ್ಣಿಡಲು ಫೋನ್ ಕದ್ದಾಲಿಕೆ ನಡೆಯುತ್ತಿದೆ ಎಂಬ ಕೇಂದ್ರ ಸಚಿವ ಕುಮಾರಸ್ವಾಮಿ ಹಾಗೂ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಆರೋಪ 'ತಾ ಕಳ್ಳ ಇತರರ ನಂಬ' ಎಂಬ ಗಾದೆಯಂತಿದೆ. ಇದೊಂದು ಅತೃಪ್ತ ಆತ್ಮಗಳ ಹತಾಶ ಹೇಳಿಕೆ ಎಂದು ಸಿಎಂ ಸಿದ್ದರಾಮಯ್ಯನವರು ಎದಿರೇಟು ನೀಡಿದ್ದು, ಇದಕ್ಕೆ ಕುಮಾರಸ್ವಾಮಿ ಸುದೀರ್ಘ ಪ್ರತಿಕ್ರಿಯೆ ಮೂಲಕ ಕುಂಬಳಕಾಯಿ ಕಳ್ಳ ಎಂದರೆ ಏಕೆ ಹೆಗಲು ಮುಟ್ಟಿಕೊಳ್ಳುತ್ತೀರಿ ಎಂದು ವಾಗ್ದಾಳಿ ನಡೆಸಿದ್ದಾರೆ.

ಶ್ರೀಮಾನ್ ಸಿದ್ದರಾಮಯ್ಯನವರೇ, ಈ ನಡುವೆ ನೀವು ಬಹಳ ಪುರುಸೊತ್ತಾಗಿದ್ದೀರಿ ಎಂದು ಭಾವಿಸಿದ್ದೇನೆ. ಕೆಲಸ ಮಾಡುವುದು ಬಿಟ್ಟು ಕೌಂಟರ್ ಕೊಡುವುದರಲ್ಲಿ ಹೆಚ್ಚು ಬ್ಯುಸಿಯಾಗಿದ್ದೀರಿ! ಕುಂಬಳಕಾಯಿ ಕಳ್ಳ ಎಂದರೆ ನಾನೇ.. ನಾನೇ.. ಎಂದು ಹೆಗಲು ಮುಟ್ಟಿ ನೋಡಿಕೊಂಡರೆ ನಾನೇನು ಮಾಡಲಿ? ಫೋನ್ ಕದ್ದಾಲಿಕೆ ಬಗ್ಗೆ ಮಾಧ್ಯಮಗಳೇ ಮಾತನಾಡುತ್ತಿವೆ. ಆ ಬಗ್ಗೆ ನಾನು ಪ್ರತಿಕ್ರಿಯಿಸಿದ್ದೇನೆ, ಅಷ್ಟೇ. ನಿಮ್ಮ ಪುಂಖಾನುಪುಂಖ ಪುರಾಣ ನೋಡಿದರೆ ನಿಮಗೆ ಆಡಳಿತಕ್ಕಿಂತ ಮತ್ತೊಬ್ಬರನ್ನು ಆಡಿಕೊಳ್ಳುವುದರಲ್ಲೇ ಹೆಚ್ಚು ಮುತುವರ್ಜಿ, ಆಸಕ್ತಿ ಇದ್ದಂತಿದೆ ಎಂದು ಕುಟುಕಿದ್ದಾರೆ.

ಕದ್ದಾಲಿಕೆ ತೆವಲು ನನಗಿಲ್ಲ: ನಾನು ಎರಡು ಸಣ್ಣ ಅವಧಿಗೆ ಮುಖ್ಯಮಂತ್ರಿ ಆಗಿದ್ದೆ. ಸ್ವತಂತ್ರ ಸರಕಾರವೂ ನನ್ನದಾಗಿರಲಿಲ್ಲ. ಕದ್ದಾಲಿಸುವ ಕರ್ಮ ನನಗೇಕೆ? ನಿಮ್ಮಂತೆ ಸಿದ್ದವನದಲ್ಲಿ ಕೂತು ಮನೆಹಾಳು ಮಾಡೋದಕ್ಕೆ, ಶಾಸಕರಿಗೆ ಬ್ರೈನ್ ವಾಶ್ ಮಾಡುವ ಹೀನ ಜಾಯಮಾನ ನನ್ನದಲ್ಲ. ನಿಮ್ಮ ಮೊದಲ ಐದು ವರ್ಷದ ಸರಕಾರವೂ.. ಈಗಿನ ನಿಮ್ಮ ಗುಪ್ತಚರವೂ ರಾಜಕಾರಣವನ್ನು ನಾನು ಕಂಡಿರುವುದೇ ಅಲ್ಲವೇ? ನಿಮ್ಮ ಪಕ್ಷದಲ್ಲಿರುವ ಆಂತರಿಕ ಪ್ರಜಾಪ್ರಭುತ್ವದ ವ್ಯಾಸ, ತ್ರಿಜ್ಯದ ಬಗ್ಗೆ ಅಳತೆ ಮಾಡುವ ತೆವಲು ನನಗಿಲ್ಲ. ರಾಷ್ಟ್ರದ ಮೇಲೆ ತುರ್ತು ಪರಿಸ್ಥಿತಿ ಹೇರಿ ಪ್ರಜಾಪ್ರಭುತ್ವದ ಕುತ್ತಿಗೆಗೆ ಕುಣಿಕೆ ಬಿಗಿದ ಸರ್ವಾಧಿಕಾರಿ ಕಾಂಗ್ರೆಸ್‌ನಲ್ಲಿ ಪ್ರಜಾಪ್ರಭುತ್ವದ ಬೇರುಗಳೇ ಇಳಿದಿಲ್ಲ. ರಾಜಕೀಯ ಲಾಭಕ್ಕೆ ಮಹಾತ್ಮ ಗಾಂಧಿ, ರಾಜಕೀಯ ಸ್ವಾರ್ಥಕ್ಕೆ ಪ್ರಜಾಪ್ರಭುತ್ವ, ರಾಜಕೀಯ ಫಸಲಿಗೆ ಸಾಮಾಜಿಕ ನ್ಯಾಯ.. ಇದೇ ನಿಮ್ಮ ರಾಜನೀತಿ. ಹೀಗಾಗಿಯೇ ಭಾರತವು ಕಾಂಗ್ರೆಸ್ ಮುಕ್ತ ಭಾರತ ಆಗುತ್ತಿದೆ.

ಪ್ರಜಾಪ್ರಭುತ್ವ ಎಂದರೇನು ಗೊತ್ತಾ: ಪ್ರಜಾಪ್ರಭುತ್ವ ಎಂದರೆ ಜನರಿಂದ, ಜನರಿಗಾಗಿ, ಜನರಿಗೋಸ್ಕರ ನಡೆಯುವ ಆಡಳಿತ ವ್ಯವಸ್ಥೆ ಎಂದು ನಂಬಿದ್ದೇನೆ. ಪ್ರಜಾಪ್ರಭುತ್ವ ಎಂದರೆ ಶಾಸಕರು ಗುಂಪುಗಾರಿಕೆ ನಡೆಸುವುದು, ಮುಖ್ಯಮಂತ್ರಿಯನ್ನು ಬೀದಿಯಲ್ಲಿ ಬೈಯ್ಯುವುದು, ಡಿಸಿಎಂಗೆ ಹಾದಿ ಬೀದಿಯಲ್ಲಿ ಅವಾಜ್ ಹಾಕುವುದು, ಐದೂ ವರ್ಷ ನಾನೇ ಸಿಎಂ.. ನಾನೇ ಸಿಎಂ.. ಎಂದು ಅಲವತ್ತುಕೊಳ್ಳುವುದಲ್ಲ. ಕುರ್ಚಿ ಬೇಕಿದ್ದರೆ ಒದ್ದು ಕಿತ್ತುಕೊಳ್ಳಬೇಕು ಎಂದು ದರ್ಪ ತೋರುವುದಲ್ಲ. ಪ್ರಜಾಪ್ರಭುತ್ವದ ನಾಲ್ಕನೇ ಅಂಗ ಮಾಧ್ಯಮವನ್ನು ಜಾಹೀರಾತು ಹೆಸರಿನಲ್ಲಿ ಬೆದರಿಸುವುದು, ಬ್ಲ್ಯಾಕ್ ಮೇಲ್ ಮಾಡುವುದಲ್ಲ, ಅಧಿಕಾರದ ಲಾಲಸೆಗೆ ಸಮಾಜವನ್ನು ಜಾತಿವಾರು, ಧರ್ಮವಾರು ಒಡೆದು ಆಳುವುದಲ್ಲ, ಆಶ್ರಯ ಕೊಟ್ಟು ರಾಜಕೀಯ ಬದುಕು ಕಟ್ಟಿಕೊಟ್ಟ ಪಕ್ಷಗಳಿಗೇ ಹಳ್ಳ ತೊಡುವುದಲ್ಲ.

ವಚನ ಉಳಿಸಿಕೊಳ್ಳಿ: ನಿಮ್ಮಿಬ್ಬರ(ನೀವೂ ನಿಮ್ಮ ಡಿಸಿಎಂ) ಕುಚುಕು ಕುಚುಕುಗೆ ನಮಗೇನು ಸಂಕಟವಿಲ್ಲ. ಆದರೆ ನಿಮ್ಮೊಳಗೆ ಹುದುಗಿದ್ದ ಅಸಹನೆಯ ಜ್ವಾಲಾಮುಖಿ ಅದೆಷ್ಟೋ ಬಾರಿ ವೇದಿಕೆಗಳ ಮೇಲೆಯೇ ಸ್ಫೋಟಿಸಿದೆ. ರಾಜ್ಯದ ಜನರು ನೋಡಿ ಕೃತಾರ್ಥರಾಗಿದ್ದಾರೆ. ಎದುರಿಗೆ ನಗುವುದು, ಬೆನ್ನ ಹಿಂದೆ ಚೂರಿ ಹಾಕುವಷ್ಟು ನಿಮ್ಮಿಬ್ಬರ ಕುಚುಕು ಬಗ್ಗೆ ಜನತೆಗೆ ಗೊತ್ತಿಲ್ಲದ್ದು ಏನೂ ಇಲ್ಲವೇನೋ? ನಿಮ್ಮ ಸ್ನೇಹ ಚಿರಾಯುವಾಗಲಿ. ಹಾಗೆಯೇ ನಿಮ್ಮ ಸ್ನೇಹಿತನಿಗಾಗಿ ನಿಮ್ಮ ವಚನ ಉಳಿಸಿಕೊಳ್ಳಿ ಮಿಸ್ಟರ್ ಅಗ್ರಿಮೆಂಟ್ ರಾಮಯ್ಯ.

ಗುಡ್ಡಗಾಡು ಪ್ರದೇಶಗಳ ಜನತೆ ಮನೆ ಬಾಗಿಲಿಗೇ ಆರೋಗ್ಯ ಸೇವೆ ಕಲ್ಪಿಸುವ

'ಆರೋಗ್ಯ ಸೇತು–ಸಂಚಾರಿ ಆರೋಗ್ಯ ಘಟಕ' ಯೋಜನೆ ಮೈಸೂರು ಜಿಲ್ಲೆಯಲ್ಲಿ ಜಾರಿ

● ನಂ.ಗೂಡು, ಹೆಚ್‌ಡಿ ಕೋಟೆ, ಪಿ.ಪಟ್ಟಣ, ಹುಣಸೂರು ತಾಲೂಕಲ್ಲಿ ಸಂಚಾರಿ ಕ್ಲಿನಿಕ್ ಸೇವೆ ಆರಂಭ ● ನಾಲ್ಕು ತಾಲೂಕಿಗೆ ತಲಾ ಒಂದು ವಾಹನ, ವೈದ್ಯರು ಸೇರಿ ಸಿಬ್ಬಂದಿ ತಂಡ ನಿಯೋಜನೆ

ಮೈಸೂರು,ಮಾ.3(ಪಿಎಂ)– ಮನೆ ಬಾಗಿಲಿಗೇ ಉಚಿತ ವೈದ್ಯಕೀಯ ಸೇವೆ ಒದಗಿಸಲು ರಾಜ್ಯ ಸರ್ಕಾರ ಆರಂಭಿಸಿರುವ 'ಆರೋಗ್ಯ ಸೇತು–ಸಂಚಾರಿ ಆರೋಗ್ಯ ಘಟಕ' ಯೋಜನೆ ಮೈಸೂರು ಜಿಲ್ಲೆಯಲ್ಲೂ ಜಾರಿಗೊಂಡಿದ್ದು, ಜಿಲ್ಲೆಯಲ್ಲಿ 4 ಸಂಚಾರಿ ಕ್ಲಿನಿಕ್‌ಗಳು ಈಗಾಗಲೇ ಕಾರ್ಯಾರಂಭ ಮಾಡಿವೆ.

ಗುಡ್ಡಗಾಡು ಪ್ರದೇಶಗಳ ಜನತೆಯ ಮನೆಯ ಬಾಗಿಲಿಗೇ ಆರೋಗ್ಯ ಸೇವೆ ಕಲ್ಪಿಸಲು ಈ ಯೋಜನೆಯಡಿ ನಂಜನಗೂಡು, ಹೆಚ್.ಡಿ.ಕೋಟೆ, ಪಿರಿಯಾಪಟ್ಟಣ ಮತ್ತು ಹುಣಸೂರು ತಾಲೂಕುಗಳಿಗೆ ತಲಾ ಒಂದು ವಾಹನ ಮಂಜೂರಾಗಿ ಬಂದಿದ್ದು, ಪ್ರತಿ ವಾಹನದಲ್ಲಿ ಒಬ್ಬ ವೈದ್ಯರು, ಒಬ್ಬ ಶುಶ್ರೂಷಕರು ಮತ್ತು ಒಬ್ಬ ಪ್ರಯೋಗ ಶಾಲಾ ತಂತ್ರಜ್ಞರು ಅಗತ್ಯ ಮೂಲ ವೈದ್ಯಕೀಯ ಸಲಕರಣೆಗಳೊಂದಿಗೆ ಸೇವೆ ನೀಡುವ ಕಾರ್ಯಕ್ಕೆ ಚಾಲನೆ ಸಿಕ್ಕಿದೆ.

ಈ ಸಂಚಾರಿ ಕ್ಲಿನಿಕ್‌ಗಳಲ್ಲಿ ಪ್ರಾಥಮಿಕ ಆರೋಗ್ಯ ತಪಾಸಣೆ, ಉಚಿತ ಔಷಧಿ ವಿತರಣೆ ಮತ್ತು ತಜ್ಞ ವೈದ್ಯರ ಸಲಹೆಯ ಸೇವೆ ಲಭ್ಯವಾಗಲಿದೆ. ಈ ಯೋಜನೆಯನ್ನು ರಾಷ್ಟ್ರೀಯ ಆರೋಗ್ಯ ಅಭಿಯಾನದ ಅನುದಾನದಡಿ ಮತ್ತು ರಾಜ್ಯ ಸರ್ಕಾರದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅನುದಾನದಡಿ ಅನುಷ್ಠಾನಕ್ಕೆ ತರಲಾಗಿದೆ.



ನಂಜನಗೂಡಲ್ಲಿ ಯೋಜನೆಗೆ ಚಾಲನೆ ನೀಡಲಾಯಿತು.

ಈ ಕ್ಲಿನಿಕ್‌ಗಳ ಮೂಲಕ ಪ್ರಾಥಮಿಕ ಆರೋಗ್ಯ ಮತ್ತು ಸಮುದಾಯ ಆರೈಕೆ ಸೇವೆಗಳಾದ ರಕ್ತಹೀನತೆ, ಪ್ರಸವ ಪೂರ್ವ ಗರ್ಭಿಣಿಯರ ತಪಾಸಣೆ, ಬಾಣಂತಿಯರ ಆರೈಕೆ, ಲಸಿಕೆ ವಂಚಿತ ಮಕ್ಕಳನ್ನು ಗುರುತಿಸಿ ಲಸಿಕೆ ನೀಡುವುದು, ಕ್ಷಯ ರೋಗದ ಕಫ ಮಾದರಿ ಸಂಗ್ರಹಣೆ, ಕುಷ್ಠ ರೋಗ ಪತ್ತೆ ಹಚ್ಚುವಿಕೆ, ಮಧುಮೇಹ ಮತ್ತು ರಕ್ತದೊತ್ತಡ ಪರೀಕ್ಷೆಗಳನ್ನು ಸ್ಥಳದಲ್ಲಿಯೇ ಮಾಡುವ ಜೊತೆಗೆ ಚಿಕಿತ್ಸೆ ಸಹ ನೀಡಲಾಗುತ್ತದೆ. ಜೊತೆಗೆ ರೆಫರಲ್ ಸೇವೆಗಳನ್ನು ನೀಡಲಾಗುವುದಲ್ಲದೆ, ಈ ಘಟಕಗಳ ಕಾರ್ಯಕ್ಷೇತ್ರದ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಹಾಗೂ ರಾಜ್ಯ ಆರೋಗ್ಯ ಕಾರ್ಯಕ್ರಮಗಳನ್ನು ಕೂಡ ಅನುಷ್ಠಾನಗೊಳಿಸಲಾಗುತ್ತದೆ.



ದೂರದ ಗ್ರಾಮ, ಗುಡ್ಡಗಾಡು ಪ್ರದೇಶಗಳು ಹಾಗೂ ವಿಶೇಷವಾಗಿ ಸಾರಿಗೆ ಸಂಪರ್ಕದ ಕೊರತೆ ಇರುವ ಪ್ರದೇಶಗಳಿಗೆ ಸಮರ್ಪಕ ಹಾಗೂ ಗುಣಮಟ್ಟದ ವೈದ್ಯಕೀಯ ಸೇವೆ ಕಲ್ಪಿಸುವ ಉದ್ದೇಶದಿಂದ ಆರೋಗ್ಯ ಇಲಾಖೆ ಈ ಕಾರ್ಯಕ್ರಮ ಅನುಷ್ಠಾನಗೊಳಿಸಿದೆ. ವಾರದಲ್ಲಿ ಐದು ದಿನಗಳಲ್ಲಿ ಈ ಕಾರ್ಯಕ್ರಮದಡಿ ಸಂಚಾರಿ ಕ್ಲಿನಿಕ್‌ಗಳು ಕಾರ್ಯನಿರ್ವಹಿಸಲಿವೆ. ಅಗತ್ಯ ಔಷಧಗಳನ್ನು ಈ ಸಂಚಾರಿ ಕ್ಲಿನಿಕ್‌ನ ವೈದ್ಯಕೀಯ ತಂಡ ಹೊಂದಿರಲಿದೆ. 'ದೂರದ ಹಳ್ಳಿಗೂ ಹತ್ತಿರದ ಆರೈಕೆ' ಘೋಷ ವಾಕ್ಯದೊಂದಿಗೆ ಈ ಕಾರ್ಯಕ್ರಮ ಅನುಷ್ಠಾನ ಮಾಡಲಾಗಿದೆ.

–ಡಾ.ಪಿ.ಸಿ.ಕುಮಾರಸ್ವಾಮಿ, ಜಿಲ್ಲಾ ಆರೋಗ್ಯಾಧಿಕಾರಿಗಳು, ಮೈಸೂರು.

ಜಿಲ್ಲೆಯ ಅಗತ್ಯತೆಗೆ ಅನುಗುಣವಾಗಿ ವಿಕೇಂದ್ರಿಕೃತ ವ್ಯವಸ್ಥೆಯಡಿ ಕ್ರಿಯಾ ಯೋಜನೆ ಹಾಗೂ ರೂಟ್ ಮ್ಯಾಪ್‌ಗಳನ್ನು ರೂಪಿಸಿ ಸೇವೆ ಒದಗಿಸಲಾಗುತ್ತದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯರು ರಜೆ ಇದ್ದಾಗ ಈ ಸಂಚಾರಿ ಕ್ಲಿನಿಕ್ ವೈದ್ಯರ ತಂಡವನ್ನು ಅಲ್ಲಿಗೆ ನಿಯೋಜಿಸುವ ಮೂಲಕ ಸಮರ್ಪಕ ವೈದ್ಯಕೀಯ ಸೇವೆ ನೀಡಲು ಉದ್ದೇಶಿಸಲಾಗಿದೆ ಅಲ್ಲದೆ, ತುರ್ತು ಆರೋಗ್ಯ ಪರಿಸ್ಥಿತಿಯ ಪರಿಣಾಮಕಾರಿ ನಿರ್ವಹಣೆಗೆ ಸದರಿ ಸಂಚಾರಿ ಕ್ಲಿನಿಕ್‌ಗಳನ್ನು ಬಳಸಿಕೊಳ್ಳುವಂತೆಯೂ ಆರೋಗ್ಯ ಇಲಾಖೆ ಯೋಜನೆ ರೂಪಿಸಿಕೊಂಡಿದೆ.



ನಾಲ್ಕು ತಾಲೂಕುಗಳಲ್ಲೂ ವಾಹನಗಳೊಂದಿಗೆ ವೈದ್ಯಕೀಯ ಸಿಬ್ಬಂದಿ ತಂಡಗಳು ಸೇವೆ ಆರಂಭಿಸಿವೆ. ಮುಖ್ಯವಾಗಿ ಬುಡಕಟ್ಟು ಸಮುದಾಯ ವಾಸಿಸುವ ಪ್ರದೇಶದಲ್ಲಿ ಗುಣಮಟ್ಟದ ವೈದ್ಯಕೀಯ ಸೇವೆ ಒದಗಿಸುವುದು ಈ ಕಾರ್ಯಕ್ರಮದ ಉದ್ದೇಶ. ಇದೇ ಸಂಚಾರಿ ಕ್ಲಿನಿಕ್‌ಗಳಲ್ಲಿ ಎಕ್ಸ್ ರೇ ಯಂತ್ರಗಳನ್ನು ಕೊಂಡೊಯ್ದು ಮೂಳೆ ಮುರಿತದಂತಹ ಸಮಸ್ಯೆಗಳನ್ನು ಪತ್ತೆ ಹಚ್ಚಿ ಅದಕ್ಕೂ ಚಿಕಿತ್ಸೆ ಕಲ್ಪಿಸಲಾಗುವುದು. ಕರ್ತವ್ಯದ ದಿನಗಳಲ್ಲಿ ಈ ಸಂಚಾರಿ ಕ್ಲಿನಿಕ್‌ಗಳ ಸೇವೆ ಇರಲಿದ್ದು, ತಪಾಸಣೆ, ಚಿಕಿತ್ಸೆ ಹಾಗೂ ಔಷಧ ಸಂಪೂರ್ಣ ಉಚಿತವಾಗಿರಲಿದೆ.

–ಡಾ.ಮಹಮ್ಮದ್ ಸಿರಾಜ್ ಅಹಮ್ಮದ್, ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳು ಮತ್ತು ಸದರಿ ಕಾರ್ಯಕ್ರಮದ ಪ್ರಭಾರ ಜಿಲ್ಲಾ ನೋಡಲ್ ಅಧಿಕಾರಿ.

ಈ ಸಂಚಾರಿ ಕ್ಲಿನಿಕ್‌ಗಳಿಗಾಗಿ ವಾಹನಗಳನ್ನು ಹೊರಗುತ್ತಿಗೆ ಆಧಾರದಲ್ಲಿ ಪಡೆಯಲಾಗಿದ್ದು, ಎಂಬಿಬಿಎಸ್ ವೈದ್ಯರು, ಶುಶ್ರೂಷಕರು ಹಾಗೂ ಪ್ರಯೋಗಶಾಲಾ ತಂತ್ರಜ್ಞರನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ. ಸಂಚಾರಿ ಕ್ಲಿನಿಕ್‌ಗಳು ಪ್ರತಿದಿನ ಕನಿಷ್ಠ 2ರಿಂದ 3 ಆಯ್ದ ದುರ್ಗಮ ಹಾಗೂ ಸಂಪರ್ಕ ರಹಿತ ಹಳ್ಳಿಗಳಲ್ಲಿ ಆರೋಗ್ಯ ಸೇವೆಗಳನ್ನು ನೀಡಲು ಅನುವಾಗುವಂತೆ ಕ್ರಿಯಾ ಯೋಜನೆ ರೂಪಿಸಿಕೊಳ್ಳಲಾಗಿದೆ. ಈ ಸಂಚಾರಿ ಕ್ಲಿನಿಕ್ ಭೇಟಿಯ ದಿನಾಂಕ ಮತ್ತು ಸಮಯವನ್ನು ಆಯಾಯ ಪ್ರದೇಶದಲ್ಲಿನ ಜನತೆಗೆ ಮುಂಗಡವಾಗಿ ತಿಳಿಸಿ ಆರೋಗ್ಯ ಸೇವೆ ಕಲ್ಪಿಸಲಾಗುತ್ತದೆ.

ಮಾನವ–ಪ್ರಾಣಿ ಸಂಘರ್ಷಕ್ಕೆ ಶಾಶ್ವತ ಪರಿಹಾರ

ವಿವಿಧ ಕಾಮಗಾರಿಗಳಿಗೆ ಶಾಸಕ ದರ್ಶನ್ ಧ್ರುವನಾರಾಯಣ್ ಚಾಲನೆ

ನಂಜನಗೂಡು/ಮಲ್ಲುಂಡಿ, ಮಾ.3– ಕಾಡಂಚಿನ ಗ್ರಾಮಗಳಲ್ಲಿ ಮಾನವ–ಪ್ರಾಣಿ ಸಂಘರ್ಷಕ್ಕೆ ಶಾಶ್ವತ ಪರಿಹಾರ ಕಲ್ಪಿಸುವ ಸಲುವಾಗಿ 42 ಲಕ್ಷ ರೂ. ವೆಚ್ಚದಲ್ಲಿ ಚೈನ್ ಲಿಂಕ್ ಮೆಸ್ ಅಳವಡಿಸುವ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ ತಿಳಿಸಿದರು.

ತಾಲೂಕಿನ ಹೆಡಿಯಾಲ ಬಳಿಯ ಕಾಡಂಚಿನ ಕಾಳನಹುಂಡಿಯಲ್ಲಿ 42 ಲಕ್ಷ ವೆಚ್ಚದಲ್ಲಿ ಚೈನ್ ಲಿಂಕ್ ಮೆಸ್ ಅಳವಡಿಸುವ ಕಾಮಗಾರಿ, ದೇವೇ ಗೌಡನ ಪುರದಲ್ಲಿ 14.5ಲಕ್ಷ ವೆಚ್ಚದಲ್ಲಿ ನೂತನ ಶಾಲಾ ಕೊಠಡಿ ನಿರ್ಮಾಣ, ಕಸುವಿನಹಳ್ಳಿಯಲ್ಲಿ 13 ಲಕ್ಷ ವೆಚ್ಚದಲ್ಲಿ ಬಸ್ ನಿಲ್ದಾಣ, ತಾಲೂಕಿನ ಮಸಗೆ ಗ್ರಾಮ ದಲ್ಲಿ 20 ಲಕ್ಷ ವೆಚ್ಚದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ ಹಾಗೂ ಎಚಗುಂಡ್ಲ, ಮಸಗೆ, ದೇವಿರಮ್ಮನಹಳ್ಳಿ ಪಾಳ್ಯ, ಹೆಗ್ಗಡಹಳ್ಳಿ ಗ್ರಾಮಗಳಲ್ಲಿ 1.20 ಕೋಟಿ ವೆಚ್ಚದಲ್ಲಿ ಅಚ್ಚು ಕಟ್ಟು ರಸ್ತೆ ಅಭಿವೃದ್ಧಿ ಕಾಮಗಾರಿ ಸೇರಿದಂತೆ ಒಟ್ಟು 2.95 ಕೋಟಿ ರೂ. ವೆಚ್ಚದ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದರು.

ಹೆಡಿಯಾಲ ಭಾಗದಲ್ಲಿ ನಿತ್ಯ ಸಂಭವಿಸುತ್ತಿದ್ದ ಮಾನವ–ಪ್ರಾಣಿ ಸಂಘರ್ಷ ತಪ್ಪಿಸುವ ಸಲುವಾಗಿ ಅರಣ್ಯ ಇಲಾಖೆ ಸಚಿವ ಈಶ್ವರ್ ಖಂಡ್ರೆ ಅವರನ್ನು ಈ ಭಾಗಕ್ಕೆ ಕರೆತಂದು ಸಮಸ್ಯೆಗಳ ಬಗ್ಗೆ ಅರಿವು ಮೂಡಿಸಲಾಗಿತ್ತು. ಬಳಿಕ 8 ಕಿಮೀವರೆಗೆ ರೈಲ್ವೆ ಬ್ಯಾರಿಕೇಡ್ ಅಳವಡಿಕೆ ಮತ್ತು ಮೆಸ್ ಅಳವಡಿಸಲಾಗಿತ್ತು.


ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ದರ್ಶನ್ ಧ್ರುವನಾರಾಯಣ್ ಚಾಲನೆ ನೀಡಿದರು.

ಇದೀಗ ಬಾಕಿ 3 ಕಿಮೀ ಚೈನ್ ಲಿಂಕ್ ಮೆಸ್ ಅಳವಡಿಸುವ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಇದರಿಂದ ಹೆಡಿಯಾಲ ಕಾಡಂಚಿನ ಭಾಗದ ಗ್ರಾಮಗಳಲ್ಲಿ ಶಾಶ್ವತವಾಗಿ ಮಾನವ–ಕಾಡು ಪ್ರಾಣಿ ಸಂಘರ್ಷ ತಪ್ಪಿಸಲಾಗಿದೆ. ಓಂಕಾರ್ ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ 8 ಕಿಮೀ ರೈಲ್ವೆ ಬ್ಯಾರಿಕೇಡ್ ಮತ್ತು ಮಿಸ್ ನಿರ್ಮಾಣ ಕಾಮಗಾರಿ ಟೆಂಡರ್ ಪ್ರಕ್ರಿಯೆ ಹಂತದಲ್ಲಿದೆ. ಅದು ಪೂರ್ಣಗೊಂಡಲ್ಲಿ ನಮ್ಮ ತಾಲೂಕಿನಲ್ಲಿ ಶಾಶ್ವತವಾಗಿ ಮಾನವ–ಪ್ರಾಣಿ ಸಂಘರ್ಷಕ್ಕೆ ಶಾಶ್ವತ ಪರಿಹಾರ ಕಂಡುಕೊಂಡಂತೆ ಆಗಲಿದೆ. ಇದರಿಂದ ನಿರ್ಭೀತಿಯಿಂದ ರೈತರು ಕೃಷಿಯಲ್ಲಿ ತೊಡಗಬಹುದಾಗಿದೆ ಎಂದರು.

ಕಾಡಾ ಇಲಾಖೆಯಿಂದ 2.5 ಕೋಟಿ ಅನುದಾನ: ಕಾಡಾ ಇಲಾಖೆಯಿಂದ ತಾಲೂಕಿಗೆ 2.5 ಕೋಟಿ ಅನುದಾನ ಬಿಡುಗಡೆಯಾಗಿತ್ತು. ಕಳೆದ ವಾರ 1.20 ಕೋಟಿ ವೆಚ್ಚದಲ್ಲಿ ದೇವಿರಮ್ಮನಹಳ್ಳಿ ಗ್ರಾಪಂ ವ್ಯಾಪ್ತಿಯಲ್ಲಿ ಅಚ್ಚುಕಟ್ಟು ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಲಾಗಿತ್ತು. ಇದೀಗ 1.20 ಕೋಟಿ ವೆಚ್ಚದಲ್ಲಿ ತಾಲೂಕಿನ ಎಚಗುಂಡ್ಲ ಗ್ರಾಮದ ಸ್ಮಶಾನಕ್ಕೆ ಹೋಗುವ ರಸ್ತೆ, ಕೆರೆ ಏರಿ ಮಾರ್ಗ ರಸ್ತೆ ಅಭಿವೃದ್ಧಿ, ದೇವಿರಮ್ಮನಹಳ್ಳಿಪಾಳ್ಯ ಗ್ರಾಮದಿಂದ ಕಳಲೆ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ಇದರಿಂದ ಗ್ರಾಮೀಣ ಭಾಗದ ರಸ್ತೆಗಳು ಅಭಿವೃದ್ಧಿಗೊಂಡು, ಸಾರ್ವಜನಿಕರಿಗೆ ಸುಗಮ ಸಂಚಾರ ನಡೆಸಲು ಅನುಕೂಲವಾಗಲಿದೆ ಎಂದರು.

ಕುಡಿಯುವ ನೀರು ಒದಗಿಸಲು ಕ್ರಮ

ತಾಲೂಕಿನ ವಿವಿಧ ಗ್ರಾಮಗಳಲ್ಲಿ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗುವ ಕಾರಣ ಈಗಾಗಲೇ ಅಧಿಕಾರಿಗಳ ಸಭೆ ನಡೆಸಿ ತಾಲೂಕಿನ ಯಾವ ಗ್ರಾಮದಲ್ಲೂ ಕೂಡ ಕುಡಿಯುವ ನೀರಿನ ಸಮಸ್ಯೆ ಉದ್ಭವವಾಗದಂತೆ ನೀರನ್ನು ಪೂರೈಕೆ ಮಾಡಬೇಕು. ಅಗತ್ಯವಿರುವ ಕಡೆಗಳಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. –ದರ್ಶನ್, ಶಾಸಕ.

ಈ ವೇಳೆ ಮಾಜಿ ಶಾಸಕ ಕೇಶವಮೂರ್ತಿ, ಕಾಡಾ ಅಧ್ಯಕ್ಷ ಮರಿಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ. ಮಹೇಶ್, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ತಾಪಂ ಮಾಜಿ ಸದಸ್ಯ ಗೋವಿಂದರಾಜು, ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ನಾಗರಾಜು, ಮುಖಂಡರಾದ ಮಹೇಶ್, ರಾಜೇಶ್, ಮಹದೇವು, ಲಕ್ಷ್ಮಣ, ಚಿನ್ನಸ್ವಾಮಿ, ಪಾಪಣ್ಣ, ಅಶ್ರಫ್ ಅಲಿ, ನೇಮತ್ ಉಲ್ಲಾ ಖಾನ್, ಅಕ್ರಮ ಸಕ್ರಮ ಸಮಿತಿ ಸದಸ್ಯ ಜಯರಾಮು, ಜಿಪಂ ಎಇಇ ರಾಜು, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಪರಮೇಶ್, ವಲಯ ಅರಣ್ಯಾಧಿಕಾರಿ ಎಸ್.ಕೆ.ಕೃಷ್ಣ ಸೇರಿದಂತೆ ಹಲವರಿದ್ದರು.

ಹೊಸಕೋಟೆ ಬಳಿ ಹುಲಿ ದಾಳಿಗೆ ಹಸು ಬಲಿ



ಹನಗೋಡು, ಮಾ.3– ಹುಲಿ ದಾಳಿಗೆ ಹಸು ಬಲಿಯಾಗಿರುವ ಘಟನೆ ಹುಣಸೂರು ತಾಲೂಕಿನ ಹೊಸಕೋಟೆ ಬಳಿ ಸೋಮವಾರ ನಡೆದಿದೆ.

ಇಲ್ಲಿಗೆ ಸಮೀಪದ ಚನ್ನಸೋಗೆ ಗ್ರಾಮದ ಚನ್ನೇಗೌಡ ಅವರಿಗೆ ಸೇರಿದ ಹಸು ಸಾವನ್ನಪ್ಪಿರುವುದು. ಸೋಮವಾರ ಸಂಜೆ ತಟ್ಟೆಕೆರೆ ಬಳಿಯ ಹೊಸಕೋಟೆ ಎಲ್ಲೆಯಲ್ಲಿ ಹಸುವನ್ನು ಮೇಯಲು ಬಿಟ್ಟಿದ್ದ ವೇಳೆ ಹುಲಿ ದಾಳಿ ನಡೆಸಿ ಬಲಿ ಪಡೆದಿದೆ. ವಿಷಯ ತಿಳಿದು ರಾತ್ರಿ ಸ್ಥಳಕ್ಕಾಗಮಿಸಿದ ಪ್ರಾದೇಶಿಕ ಅರಣ್ಯ ವಿಭಾಗದ ಡಿಆರ್‌ಎಫ್‌ಓ ಮಲ್ಲಿಕಾರ್ಜುನ್ ಮತ್ತು ಸಿಬ್ಬಂದಿ ಪರಿಶೀಲಿಸಿದರು. ಮಂಗಳವಾರ ಬೆಳಗ್ಗೆ ಹಸು ಕಳೇಬರವನ್ನು ಹೂಳಲು ಹೋದ ವೇಳೆ ಹುಲಿ ಆಗಮಿಸಿ ಹಸುವಿನ ಮತ್ತಷ್ಟು ಭಾಗವನ್ನು ತಿಂದು ಹಾಕಿರುವುದು ಪತ್ತೆಯಾಗಿದೆ. ಈ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಹುಲಿ ಸೆರೆಗೆ ಬೋನಿಟ್ಟು ಆನೆ ಕಾರ್ಯಪಡೆ ಸಿಬ್ಬಂದಿ ಮೂಲಕ ಕೂಬಿಂಗ್ ಕಾರ್ಯಚರಣೆ ಕೈಗೊಂಡಿದ್ದಾರೆ.

ಹುಲಿ ಸೆರೆಗೆ ಆಗ್ರಹ: ಹನಗೋಡು ಗ್ರಾಮದ ಲಕ್ಷ್ಮಣತೀರ್ಥ ನದಿ ಅಂಚಿನ ರಾಮಚಂದ್ರ ಹಾಗೂ ನಟರಾಜ ಅವರಿಗೆ ಸೇರಿದ ತೋಟದಲ್ಲಿ ಸೋಮವಾರ ಹುಲಿ ಹೆಜ್ಜೆ ಗುರುತು ಪತ್ತೆಯಾಗಿದೆ. ಬಳಿಕ ಹೊಸಕೋಟೆ ಎಲ್ಲೆಯಲ್ಲಿ ಹುಲಿ ದಾಳಿ ನಡೆಸಿ ಹಸು ಬಲಿ ಪಡೆದಿದೆ. ಹೀಗಾಗಿ ಗ್ರಾಮಸ್ಥರು ಆತಂಕಗೊಂಡಿದ್ದು, ತಮ್ಮ ಜಮೀನುಗಳಿಗೆ ತೆರಳಲು ಭಯಪಡುತ್ತಿದ್ದಾರೆ. ಹೀಗಾಗಿ ಹುಲಿ ಸೆರೆ ಹಿಡಿದು ಗ್ರಾಮಸ್ಥರ ಆತಂಕ ದೂರಗೊಳಿಸಬೇಕು ಎಂದು ರೈತ ಸುರೇಶ್ ಹಾಗೂ ಇತರರು ಒತ್ತಾಯಿಸಿದ್ದಾರೆ.

ಡಿಎಫ್‌ಓ ಕಿರಬನಾಥನ್ ಮಾತನಾಡಿ, ಹುಣಸೂರು ವಲಯಕ್ಕೆ ಖಾಯಂ ಆರ್‌ಎಫ್‌ಓ ಇಲ್ಲ. ಹುಲಿ ದಾಳಿ ವಿಷಯ ತಿಳಿದ ಕೂಡಲೇ ಸ್ಥಳಕ್ಕಾಮಿಸಿದ ಡಿಆರ್‌ಎಫ್‌ಓ ಮಲ್ಲಿಕಾರ್ಜುನ್ ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿ ಹುಲಿ ಸೆರೆಗೆ ಬೋನ್ ಇರಿಸಿದ್ದಾರೆ. ಅಲ್ಲದೇ ಕೂಂಬಿಂಗ್ ನಡೆಸಿದರೂ ಹುಲ್ಲಿ ಪತ್ತೆಯಾಗಿಲ್ಲ. ಹೀಗಾಗಿ ಹೆಚ್ಚಿನ ನಿಗಾ ವಹಿಸಲಾಗುವುದು ಎಂದು ತಿಳಿಸಿದರು.

ಒಳ ಮೀಸಲಾತಿಯಲ್ಲಿ ಅನ್ಯಾಯ ವಿರೋಧಿಸಿ

ಸರಗೂರಲ್ಲಿ ಬಲಗೈ ಒಕ್ಕೂಟ ಪ್ರತಿಭಟನೆ

ಸರಗೂರು, ಮಾ.3– ಒಳ ಮೀಸಲಾತಿಯಲ್ಲಿ ಬಲಗೈ ಸಮುದಾಯಕ್ಕೆ ಅನ್ಯಾಯ ವಿರೋಧಿಸಿ ಪಟ್ಟಣದಲ್ಲಿ ತಾಲೂಕು ಬಲಗೈ (ಹೊಲೆಯ) ಸಮುದಾಯಗಳ ಒಕ್ಕೂಟದಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ತಾಲೂಕು ಕಚೇರಿ ಎದುರು ಜಮಾಯಿಸಿದ ನೂರಾರು ಬಲಗೈ ಸಮುದಾಯಗಳ ಒಕ್ಕೂಟದ ಸದಸ್ಯರು ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಆದಿ ಕರ್ನಾಟಕ ಮಹಾಸಭಾ ತಾಲೂಕು ಅಧ್ಯಕ್ಷ ರಾಜಣ್ಣ ಮಾತನಾಡಿ, ಸಿಎಂ ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ಮೂವರು ಪ್ರಭಾವಿ ಸಚಿವರು, 37 ಎಡ, ಬಲಗೈ ದಲಿತ ಸಮುದಾಯದ ಶಾಸಕರಿದ್ದರೂ ಬಲಗೈ ದಲಿತ ಸಮುದಾಯಕ್ಕೆ ಅನ್ಯಾಯವಾಗುತ್ತಿರುವ ಬಗ್ಗೆ ಮೌನವಾಗಿರುವುದನ್ನು ಖಂಡಿಸಿದರು.

ರಾಜ್ಯ ಸರ್ಕಾರ ಒಳ ಮೀಸಲಾತಿಯಲ್ಲಿ ಬಲಗೈ ಸಮುದಾಯಕ್ಕೆ ಅನ್ಯಾಯ ಮಾಡುತ್ತಿದೆ. ಯಾವುದೇ ಕಾರಣಕ್ಕೂ ನಾಗಮೋಹನ್‌ದಾಸ್ ನೀಡಿರುವ ಒಳ ಮೀಸಲಾತಿ ವರದಿ ಜಾರಿಗೊಳಿಸಬಾರದು. ಇಲ್ಲಿ ಪ್ರವರ್ಗ ಎ, ಬಿ, ಸಿ ಎಂದು ವಿಂಗಡಿಸಿ ಬಲಗೈ ಸಮುದಾಯವನ್ನು ಕಡೆಗಣಿಸಲಾಗಿದೆ. ಇದರಿಂದ ಬಲಗೈ ಸಮುದಾಯದ ವಿದ್ಯಾವಂತ ಮಕ್ಕಳಿಗೆ ಅನ್ಯಾಯವಾಗಲಿದೆ. ಏನಾದರೂ ಮೀಸಲಾತಿ ಜಾರಿಗೊಳಿಸಿದರೇ ರಾಜ್ಯಾದ್ಯಂತ ಹೋರಾಟ ನಡೆಸಲಾಗುವುದು ಎಂದರು.


ಒಳ ಮೀಸಲಾತಿಯಲ್ಲಿ ಬಲಗೈ ಸಮುದಾಯಕ್ಕೆ ಅನ್ಯಾಯ ವಿರೋಧಿಸಿ ಪ್ರತಿಭಟನೆ ನಡೆಸಲಾಯಿತು.

ಮಾಜಿ ಅಧ್ಯಕ್ಷ ಶಿವಣ್ಣ ಮಾತನಾಡಿ, ನಾಗಮೋಹನ್ ದಾಸ್ ಅವರು ಸರ್ಕಾರಕ್ಕೆ ಏಕ ಪಕ್ಷೀಯವಾಗಿ ವರದಿ ಕೊಟ್ಟಿರುವುದೇ ಇದಕ್ಕೆಲ್ಲಾ ಕಾರಣ. ಸರ್ಕಾರ ಒಡೆದಾಳುವ ನೀತಿ ಅನುಸರಿಸುತ್ತಿದೆ. ಸಮುದಾಯದ ಮಕ್ಕಳ ಮುಂದಿನ ಭವಿಷ್ಯದ ದೃಷ್ಟಿಯಿಂದ ವರದಿ ಜಾರಿಗೊಳಿಸದೇ ಬಲಗೈ ಸಮಾಜಕ್ಕೆ ನ್ಯಾಯ ಕೊಡಿಸಬೇಕು. ಬಲಗೈ ದಲಿತ ಸಮುದಾಯಕ್ಕೆ ಅನ್ಯಾಯವಾದರೂ ಸಚಿವರಾದ ಪ್ರಿಯಾಂಕ ಖರ್ಗೆ, ಪರಮೇಶ್ವರ್ ಹಾಗೂ ಹೆಚ್.ಸಿ. ಮಹದೇವಪ್ಪ ಮತ್ತು ಶಾಸಕರು ಮೌನ ವಹಿಸಿರುವುದು ಯಾವ ಸ್ವಾರ್ಥಕ್ಕೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ವೇಳೆ ದಲಿತ ಮುಖಂಡರಾದ ಗ್ರಾಮೀಣ ಮಹೇಶ್, ಶಿವರಾಜು, ಗೋಪಾಲಸ್ವಾಮಿ, ವಿವಿ ಸಂಶೋಧಕರ ಸಂಘದ ಪದಾಧಿಕಾರಿಗಳಾದ ವಿಶ್ವಪ್ರಸಾದ್ ಹಾಗೂ ಮತ್ತುರಾಜ್ ಮಾತನಾಡಿದರು. ಇದೇ ವೇಳೆ ಉಪ ತಹಸೀಲ್ದಾರ್ ಮನೋಹರ್ ಅವರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಆದಿ ಕರ್ನಾಟಕ ಮಹಾಸಭಾ ಗೌರವಾಧ್ಯಕ್ಷ ಇದಿಯಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷ ಸಿದ್ದರಾಜು, ಜಿಪಂ ಮಾಜಿ ಅಧ್ಯಕ್ಷೆ ಭಾಗ್ಯಲಕ್ಷ್ಮಿ, ತಾಲೂಕು ಜೆಡಿಎಸ್ ಅಧ್ಯಕ್ಷ ಜಿ.ಗೋಪಾಲಸ್ವಾಮಿ, ಸೋಮೇಶ್, ಮಾಜಿ ಕಾರ್ಯದರ್ಶಿ ಮಲ್ಲೇಶ್, ದಸಂಸ ಜಿಲ್ಲಾ ಸಂಘಟನಾ ಸಂಚಾಲಕ ನಿಂಗರಾಜು, ತಾಲೂಕು ಸಂಚಾಲಕ ಡಿ.ಎಂ.ಶಿವಶಂಕರ್, ಕೋಟೆ ಅಧ್ಯಕ್ಷ ಕುಮಾರ್, ಪುಟ್ಟಮಾದು, ಕಾಳಸ್ವಾಮಿ, ತಾಲೂಕು ಅಂಬೇಡ್ಕರ್ ಟ್ರಸ್ಟ್ ಅಧ್ಯಕ್ಷ ನಾಗರಾಜು, ಟೌನ್ ಅಧ್ಯಕ್ಷ ಸಣ್ಣಸ್ವಾಮಿ, ಮಹಾಸಭಾ ಉಪಾಧ್ಯಕ್ಷ ಶಿವಣ್ಣ, ಚಿನ್ನಣ್ಣ, ಕಾಳಸ್ವಾಮಿ, ಪ್ರಧಾನ ಕಾರ್ಯದರ್ಶಿ ಪ್ರಕಾಶ್, ಸೂರ್ಯಕುಮಾರ್, ಶ್ರೀನಿವಾಸ, ವಿಷಕಂಠ, ಅಣ್ಣಯ್ಯ ಸ್ವಾಮಿ, ಗೋವಿಂದ, ರಮೇಶ್, ಮಹೇಶ್, ದಸಂಸ ಜಿಲ್ಲಾ ಸಂಚಾಲಕಿ ಅನುಷಾ ಇನ್ನಿತರರಿದ್ದರು.

ಕೆ.ಆರ್.ನಗರದಲ್ಲಿ ಶ್ರೀಕೈವಾರ ತಾತಯ್ಯ ಜಯಂತಿ

ಕೆ.ಆರ್.ನಗರ, ಮಾ.3– ಕಾಲ ಜ್ಞಾನಿ, ಬ್ರಹ್ಮ ಜ್ಞಾನಿಗಳಾದ ಕೈವಾರ ತಾತಯ್ಯನವರು ಮಾನವ ಪ್ರೀತಿ ಹಂಚಿದರು. ಭಕ್ತಿ ಮತ್ತು ಯೋಗಗಳ ಮೂಲಕ ಬಹು ಎತ್ತರಕ್ಕೆ ಏರಿದರು. ಅವರ ಚಿಂತನೆಗಳು, ದೂರದೃಷ್ಟಿ ಮಾನವ ಸಮಾಜದ ಸಮಗ್ರ ಕಲ್ಯಾಣ ಹಾಗೂ ಬದುಕುವ ರೀತಿಗೆ ಉತ್ತಮ ಮಾರ್ಗದರ್ಶನ ಎಂದು ಮಾಜಿ ಎಂಎಲ್‌ಸಿ ಕೆ.ಸಿ.ಪುಟ್ಟಸಿದ್ದಶೆಟ್ಟಿ ತಿಳಿಸಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ನಡೆದ ಶ್ರೀಕೈವಾರ ತಾತಯ್ಯ ಶ್ರೀಯೋಗಿ ನಾರೇಯಣ ಯತೀಂದ್ರ ಜಯಂತಿಯಲ್ಲಿ ಮಾತನಾಡಿದ ಅವರು, ಕೈವಾರ ತಾತಯ್ಯನವರು ಕಾಲಜ್ಞಾನಿಗಳಾಗಿ ಭವಿಷ್ಯವಾಣಿ ನುಡಿದವರು. 300 ವರ್ಷಗಳ ಹಿಂದೆಯೇ ಮಾನವ ಹೇಗೆ ಬದುಕಬೇಕು ಎಂಬುದನ್ನು ತಮ್ಮದೇ ಆದ ಸರಳ ತತ್ವಗಳ ಮೂಲಕ ಅರ್ಥ ಮಾಡಿಸಿದರು. ಅವರ ಪವಾಡಗಳು ಮಾನವನ ಶ್ರೇಷ್ಠ ಸನ್ಮಾರ್ಗದ ಹಾದಿಗೆ ಮಾರ್ಗದರ್ಶಕವಾಗಿವೆ. ತತ್ವ ಪದಗಳು ಕಾವ್ಯದ ಪ್ರಕಾರವಾಗಿದ್ದು, ಜೀವನ ವಿಧಾನವನ್ನು ತಿಳಿಸುವ ಸಾಧನ ಮಾರ್ಗವಾಗಿದೆ. ತತ್ವಪದಗಳನ್ನು ಅರ್ಥ ಮಾಡಿಕೊಂಡರೆ ಸಂತೋಷವಾಗಿ, ಮೋಸವಿಲ್ಲದ, ಅಹಂಕಾರವಿಲ್ಲದ ಜೀವನವನ್ನು ನಡೆಸಬಹುದು ಎಂದರು.


ಕೆ.ಆರ್.ನಗರದಲ್ಲಿ ಕೈವಾರ ತಾತಯ್ಯ ಜಯಂತಿ ನಡೆಯಿತು.

ಕೈವಾರ ತಾತಯ್ಯನವರ ತತ್ವಪದಗಳಲ್ಲಿ ಬಡತನದ ನೋವು, ಸುಖ ದುಃಖ, ಸಾಂತ್ವನ, ಮಾನವ ಪ್ರೀತಿ ಎಲ್ಲವೂ ಸಿಗುತ್ತದೆ. ಅಲ್ಲದೇ ಮಾನವ ಪ್ರೀತಿಯನ್ನು ನಾವೆಲ್ಲರೂ ಅರಿಯಬೇಕು. ಇಂತಹ ಮಹಾ ಪುರುಷರನ್ನು ಒಂದು ಜಾತಿಗೆ ಸೀಮಿತಗೊಳಿಸದೆ, ಅವರು ಯಾವ ಜಾತಿಯಲ್ಲಿ ಹುಟ್ಟಿದರು ಎನ್ನುವ ಬದಲು ಅವರ ಮೌಲ್ಯದ ಸಿದ್ಧಾಂತ ಅರಿತು ನಡಿಯೋಣ ಎಂದರು.

ಎಡತೊರೆ ಬಲಿಜ(ಬಣಜಿಗ) ಸಂಘದ ತಾಲೂಕು ಅಧ್ಯಕ್ಷ ಟಿ.ಎನ್.ದಯಾನಂದ್ ಮಾತನಾಡಿ, ಕೈವಾರ ತಾತಯ್ಯ ಅವರು ಮಹಾನ್ ಸಿದ್ಧಿ ಹಾಗೂ ಪವಾಡ ಪುರುಷರು, ಆದ್ದರಿಂದಲೇ ಕೈವಾರ ಕ್ಷೇತ್ರ ರಾಜ್ಯದಲ್ಲಿ 2ನೇ ಧರ್ಮಸ್ಥಳ ಕ್ಷೇತ್ರವಾಗಿ ಬೆಳೆಯುತ್ತಿದೆ ಎಂದರು.

ಬಲಿಜ ಸಮಾಜ ಇದುವರೆಗೂ ಪೂರ್ಣ ಪ್ರಮಾಣದಲ್ಲಿ ಸಂಘಟಿತವಾಗಿಲ್ಲ. ಸಂಘಟಿತವಾದರೆ ಆರ್ಥಿಕ ಹಾಗೂ ಶೈಕ್ಷಣಿಕ, ರಾಜಕೀಯವಾಗಿ ಬಲಿಷ್ಠವಾಗಬಹುದು ಎಂದರು.

ಸಮಾರಂಭದಲ್ಲಿ ಗ್ರೇಡ್–2 ತಹಸೀಲ್ದಾರ್ ಚಂದ್ರಶೇಖರ್, ಪುರಸಭೆ ಮಾಜಿ ಅಧ್ಯಕ್ಷ ನರಸಿಂಹರಾಜು, ಎಡತೊರೆ ಬಲಿಜ ಸಂಘದ ಉಪಾಧ್ಯಕ್ಷ ಬಿ.ವಿ.ರಘುನಾಥ್, ಪ್ರಧಾನ ಕಾರ್ಯ ದರ್ಶಿ ರಾಘು, ಪದಾಧಿಕಾರಿಗಳಾದ ಬಿ.ವಿ.ನಾಗೇಂದ್ರ ಬಿ.ವಿ. ನಾಗೇಶ್, ಮಂಜುನಾಥ್, ರಾಜೇಶ್, ಮಂಜುನಾಥ್, ಚೆಲುವರಾಜ್, ರಾಮಕೃಷ್ಣ, ಸಿ.ವಿ. ಮಂಜುನಾಥ್, ಹೆಚ್.ಡಿ.ಪುಟ್ಟಸ್ವಾಮಿ, ತಿಮ್ಮಶೆಟ್ಟಿ, ಪೋಸ್ಟ್ ರಾಜೇಶ್, ಸಾ.ರಾ. ನಾಗೇಶ್, ಉಮಾಮಂಜುನಾಥ್, ಕೃಷ್ಣಪ್ಪ ಹಾಗೂ ಸಮಾಜದ ಮುಖಂಡರಿದ್ದರು.

ದಾಸೋಹ ಭವನದಲ್ಲಿ ಮಾಂಸಾಹಾರ ಸೇವನೆ

ಸಾಮಾಜಿಕ ಜಾಲತಾಣದಲ್ಲಿ ವಿಡಿಯೋ ವೈರಲ್: ಭಕ್ತರಿಂದ ಆಡಳಿತ ಮಂಡಳಿಗೆ ತರಾಟೆ

ನಂಜನಗೂಡು, ಮಾ.3– ಇಲ್ಲಿನ ಶ್ರೀಕಂಠೇಶ್ವರಸ್ವಾಮಿ ದೇವಾಲಯದ ದಾಸೋಹ ಭವನದ ಒಳಾವರಣದಲ್ಲಿ ವ್ಯಕ್ತಿಯೋರ್ವ ಮಾಂಸಾಹಾರ ಸೇವನೆ ಮಾಡುತ್ತಿರುವ ದೃಶ್ಯಾವಳಿ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು, ಶ್ರೀಕಂಠಸ್ವಾಮಿ ಭಕ್ತರು ದೇವಸ್ಥಾನ ಆಡಳಿತ ಮಂಡಳಿಯನ್ನು ತರಾಟೆ ತೆಗೆದುಕೊಂಡಿದ್ದಾರೆ.

ಭಕ್ತರಿಗೆ ಪ್ರಸಾದ ವಿತರಿಸುವ ದಾಸೋಹ ಭವನದ ಒಳ ಪ್ರವೇಶ ದ್ವಾರದಲ್ಲಿ ವ್ಯಕ್ತಿಯೋರ್ವ ಬಾಕ್ಸ್‌ನಲ್ಲಿ ತಂದಿದ್ದ ಮಾಂಸಾಹಾರವನ್ನು ತಟ್ಟೆಗೆ ಹಾಕಿಕೊಂಡು ತಿನ್ನುತ್ತಿರುವ ವೇಳೆ ಸ್ಥಳಕ್ಕಾಗಮಿಸಿದ ಮತ್ತೋರ್ವ ವ್ಯಕ್ತಿ ದೇವಸ್ಥಾನದ ಆವರಣದಲ್ಲಿ ಮಾಂಸಾಹಾರ ಸೇವನೆ ಮಾಡುತ್ತಿರುವ ಬಗ್ಗೆ ಆಕ್ರೋಶ ವ್ಯಕ್ತಪಡಿಸಿ ತರಾಟೆಗೆ ತೆಗೆದುಕೊಳ್ಳುತ್ತಿರುವ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು ಭಕ್ತರು ಘಟನೆಯ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ದೇವಾಲಯದ ಇಓ ಕೃಷ್ಣ, ದೇವಾಲಯದ ದಾಸೋಹ ಭವನದ ಆವರಣದಲ್ಲಿ ವ್ಯಕ್ತಿಯೋರ್ವ ಮಾಂಸಾಹಾರ ಸೇವನೆ ಮಾಡುತ್ತಿದ್ದ ಬಗ್ಗೆ ದೂರು ಕೇಳಿ ಬಂದ ಹಿನ್ನಲೆಯಲ್ಲಿ ದಾಸೋಹ ಭವನದ ಸಹಾಯಕ ಸಿಬ್ಬಂದಿ ರಂಗಸ್ವಾಮಿ ಎಂಬುವರ ಮೇಲೆ ಶಿಸ್ತು ಕ್ರಮಕ್ಕೆ ಹಿರಿಯ ಅಧಿಕಾರಿಗಳಿಗೆ ಶಿಫಾರಸ್ಸು ಮಾಡಲಾಗಿದೆ. ಅಲ್ಲದೇ ಮಾಂಸಾಹಾರ ಸೇವಿಸಿರುವ ವ್ಯಕ್ತಿ ವಿರುದ್ಧ ಪೊಲೀಸ್ ಠಾಣೆಗೆ ದೂರು ನೀಡಲಾಗುವುದು ಎಂದು ತಿಳಿಸಿದ್ದಾರೆ.

ಮೊಪೇಡ್‌ಗೆ ಟಾಟಾ ಏಸ್ ಡಿಕ್ಕಿ: ಸವಾರ ಸಾವು



ಪಿರಿಯಾಪಟ್ಟಣ: ಟಾಟಾ ಏಸ್ ಮೊಪೇಡ್‌ಗೆ ಡಿಕ್ಕಿ ಹೊಡೆದ ಪರಿಣಾಮ ಸವಾರ ಸಾವನ್ನಪ್ಪಿರುವ ಘಟನೆ ತಾಲೂಕಿನ ಅಪ್ಪೂರು ಗೇಟ್ ಬಳಿ ಮಂಗಳವಾರ ನಡೆದಿದೆ.

ತಾಲೂಕಿನ ಬೂದಿತಿಟ್ಟು ಗ್ರಾಮದ ನಿವಾಸಿ, ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಹಾಗೂ ಚೌತಿ ಗ್ರಾಪಂ ಸದಸ್ಯ ರವಿಚಂದ್ರ ಅವರ ತಂದೆ ಬಸವರಾಜು(65) ಸಾವನ್ನಪ್ಪಿದವರು. ಅರಣ್ಯ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದ ಬಸವರಾಜು ಅವರು ಪಿರಿಯಾಪಟ್ಟಣದಿಂದ ಸ್ವಗ್ರಾಮಕ್ಕೆ ತೆರಳುತ್ತಿದ್ದರು. ಈ ವೇಳೆ ಗೋಣಿಕೊಪ್ಪದಿಂದ ಪಿರಿಯಾಪಟ್ಟಣ ಕಡೆಗೆ ಆಗಮಿಸುತ್ತಿದ್ದ ಟಾಟಾ ಏಸ್(ಕೆಎ.45, ಎ.5306) ಟಿವಿಎಸ್ ಮೊಪೇಡ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಬಸವರಾಜು ಅವರನ್ನು ಪಿರಿಯಾಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ ಎನ್ನಲಾಗಿದೆ. ಪಿರಿಯಾಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಿಎಂ ನಿಧಿಯಿಂದ ಗ್ರಾಮಗಳಲ್ಲಿ ಅಭಿವೃದ್ಧಿ ಕಾಮಗಾರಿ

ವಿವಿಧ ಅಭಿವೃದ್ಧಿ ಕಾಮಗಾರಿಗೆ ಸಂಸದ ಸುನೀಲ್ ಬೋಸ್ ಚಾಲನೆ

ತಿ.ನರಸೀಪುರ, ಮಾ.3– ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿ ವಿಧಾನ ಸಭಾ ಕ್ಷೇತ್ರದ ಅಭಿವೃದ್ಧಿಗೆ 50 ಕೋಟಿ ನೀಡಿದ್ದು, ಮುಖ್ಯಮಂತ್ರಿಗಳ ಮೂಲ ಸೌಕರ್ಯ ನಿಧಿಯಿಂದ ಗ್ರಾಮಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಸಂಸದ ಸುನೀಲ್ ಬೋಸ್ ತಿಳಿಸಿದರು.

ತಿರುಮಕೂಡಲು ಬಳಿಯ ಚೌಡಯ್ಯ ವೃತ್ತದ ಬಳಿ 1.50 ಕೋಟಿ ರೂ. ವೆಚ್ಚದ ಚರಂಡಿ ಹಾಗೂ ರಸ್ತೆ ಅಗಲೀಕರಣ ಕಾಮಗಾರಿ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಕ್ಷೇತ್ರದ ಅಭಿವೃದ್ಧಿಗೆ ನೀಡಿರುವ ಅನುದಾನದ ಪೈಕಿ ಇದುವರೆಗೆ ವಿವಿಧ ಗ್ರಾಮಗಳಲ್ಲಿ 38.50 ಕೋಟಿ ರೂ.ಗಳ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಇಂದು ಸೋಮನಾಥಪುರ, ಕುಂತನಹಳ್ಳಿ, ಅತ್ತಹಳ್ಳಿ, ಮಲಿಯೂರು, ಅಂಕನಹಳ್ಳಿ, ಮೇಣಸಿಕ್ಯಾತನಹಳ್ಳಿ, ಯಾಚೇನಹಳ್ಳಿ ಕಾಡುಕೊತ್ತನಹಳ್ಳಿ, ತುರುಗನೂರು, ಯಡಹಳ್ಳಿ, ಬೀಡನಹಳ್ಳಿ, ಕೊಡಗಳ್ಳಿಗಳಲ್ಲಿ ಲೋಕೋಪಯೋಗಿ ಇಲಾಖೆಯ 11 ಕೋಟಿ, ಪಂಚಾಯತ್ ರಾಜ್ ಇಲಾಖೆಯ 1.10 ಕೋಟಿ ರೂ.ಗಳ ಕಾಮಗಾರಿಗೆ ಚಾಲನೆ ನೀಡಲಾಗುತ್ತಿದೆ. ಈ ಪೈಕಿ ಎಸ್‌ಇಪಿಗೆ 1.10 ಕೋಟಿ ಹಾಗೂ ಸಾಮಾನ್ಯ ವರ್ಗದ ಕಾಲೋನಿ ಅಭಿವೃದ್ಧಿಗೆ 13.45 ಕೋಟಿ ರೂ., ಒಟ್ಟಾರೆ 14.55 ಕೋಟಿ ರೂ.ಗಳನ್ನು ವಿವಿಧ ಅಭಿವೃದ್ಧಿ ಕಾಮಗಾರಿಗೆ ಬಳಕೆ ಮಾಡಲಾಗುತ್ತಿದೆ ಎಂದರು.


ಅಭಿವೃದ್ಧಿ ಕಾಮಗಾರಿಗೆ ಸಂಸದ ಸುನೀಲ್ ಬೋಸ್ ಭೂಮಿ ಪೂಜೆ ನೆರವೇರಿಸಿದರು.

ಈ ವೇಳೆ ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ, ಸಿದ್ದರಾಮು, ಹೆಚ್.ಸಿ.ಮಹದೇವಪ್ಪ ಅಭಿಮಾನಿ ಬಳಗದ ಜಿಲ್ಲಾಧ್ಯಕ್ಷ ಕೆ.ಎಂ.ಮಧು ಕುಮಾರ್, ಪ್ರಥಮ ದರ್ಜೆ ಗುತ್ತಿಗೆದಾರ ಎ.ಎನ್. ಸ್ವಾಮಿ, ಲಾರಿ ಮಾಲೀಕರ ಸಂಘದ ಅಧ್ಯಕ್ಷ ಶಶಿಭೂಷಣ್, ಮಹಿಳಾ ಘಟಕದ ಅಧ್ಯಕ್ಷೆ ವೀಣಾ ಶಿವಕುಮಾರ್, ಗ್ರಾಪಂ ಮಾಜಿ ಅಧ್ಯಕ್ಷೆ ಬೃಂದಾ ಕೃಷ್ಣೇಗೌಡ, ಮಲಿಯೂರು ಗ್ರಾಪಂ ಮಾಜಿ ಅಧ್ಯಕ್ಷ ದೊಳ್ಳಯ್ಯ, ಆಪ್ತ ಸಹಾಯಕ ಬಸವರಾಜು, ಪುರಸಭೆಯ ಮಾಜಿ ಸದಸ್ಯ ಶಿವಣ್ಣ, ಕೊಳತ್ತೂರು ಕೆ.ಎನ್.ಕುಮಾರ್, ಮಹೇಶ್, ನಾಗರಾಜಾಚಾರ್, ಅತ್ತಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಮಹೇಶ್, ಸುನೀಲ್, ಗುತ್ತಿಗೆದಾರ ಉಮೇಶ್, ಕೀರ್ತಿ, ಭಾಸ್ಕರ್, ಲೋಕೇಶ್ ಲೋಕೋಪಯೋಗಿ ಇಲಾಖೆಯ ಸತೀಶ್ ಚಂದ್ರ, ಜಿಪಂ ಎಇಇ ಚರಿತಾ, ಮಹಿಳಾ ಮಕ್ಕಳ ಅಭಿವೃದ್ಧಿ ಇಲಾಖೆಯ ಗೋವಿಂದರಾಜು ಸೇರಿದಂತೆ ಮತ್ತಿತರರಿದ್ದರು.

"ತಿ.ನರಸೀಪುರದಲ್ಲಿ 300 ಕೋಟಿಗೂ ಹೆಚ್ಚು ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿದ್ದು, ಈ ಬಾರಿ ಎಸ್‌ಸಿಪಿ, ಟಿಎಸ್‌ಪಿ ಮತ್ತು ಜನರಲ್ ವಾರ್ಡ್‌ಗಳಲ್ಲಿ ರಸ್ತೆ, ಚರಂಡಿ ಕಾಮಗಾರಿಗಳು ಆರಂಭವಾಗಿವೆ. ಸಚಿವ ಡಾ.ಹೆಚ್.ಸಿ.ಮಹಾದೇವಪ್ಪ ಹಾಗೂ ಸಂಸದ ಸುನೀಲ್ ಬೋಸ್ ಅವರು ಕ್ಷೇತ್ರವಾರು ಪ್ರವಾಸ ಕೈಗೊಂಡು ಸ್ಥಳದಲ್ಲಿಯೇ ಸಾರ್ವಜನಿಕರ ಸಮಸ್ಯೆಗಳನ್ನು ಬಗೆ ಹರಿಸುವ ಪ್ರಯತ್ನ ಮಾಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಹೆಚ್ಚಿನ ಅನುದಾನ ತಂದು ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿ ಮಾಡಲಿದ್ದಾರೆ.
– ಆರ್.ಚೆಲುವರಾಜು, ಮೈಮುಲ್ ಮಾಜಿ ಅಧ್ಯಕ್ಷ.

ಹುಣಸೂರಲ್ಲಿ ಮಾಜಿ ಶಾಸಕರ ನೇತೃತ್ವದಲ್ಲಿ

ನರೇಗಾ ಬಚಾವೋ, ವಿಬಿ ಜಿ ರಾಮ್ ಜಿ ಹಟಾವೋ ಪಾದಯಾತ್ರೆ

ಹುಣಸೂರು, ಮಾ.3– ಕೇಂದ್ರ ಸರ್ಕಾರ ನರೇಗಾ ಯೋಜನೆ ರದ್ದುಗೊಳಿಸಿ, ವಿಬಿ ಜಿ ರಾಮ್ ಜಿ ಯೋಜನೆ ಜಾರಿಗೊಳಿಸಿರುವುದನ್ನು ವಿರೋಧಿಸಿ ಹುಣಸೂರು ನಗರ ಕಾಂಗ್ರೆಸ್ ಸಮಿತಿಯಿಂದ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ನೇತೃತ್ವದಲ್ಲಿ ನಗರದಲ್ಲಿ ಮಂಗಳವಾರ ಬೃಹತ್ ಪಾದಯಾತ್ರೆ ನಡೆಸಿ ಉಪ ವಿಭಾಗಾಧಿಕಾರಿಗಳ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲಾಯಿತು.

ನಗರದ ಸಂವಿಧಾನ ವೃತ್ತದಿಂದ ತಾಲೂಕು ಕಚೇರಿವರೆಗೆ ನರೇಗಾ ಬಚಾವೋ, ವಿಬಿ ಜಿ ರಾಮ್ ಜಿ ಹಟಾವೋ ಪಾದಯಾತ್ರೆ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರು ತಾಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಿ ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿ, ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಉದ್ಯೋಗ ಖಾತ್ರಿ ಯೋಜನೆ ಜಾರಿಗೊಳಿಸಿ ಶ್ರಮಿಕರು, ಕೂಲಿ ಕಾರ್ಮಿಕರು ಹಾಗೂ ರೈತರಿಗೆ ಅನುಕೂಲ ಕಲ್ಪಿಸಿ, ಪ್ರತಿ ಗ್ರಾಪಂಗೆ ವರ್ಷಕ್ಕೆ 1 ಕೋಟಿವರೆಗೆ ಅನುದಾನ ನೀಡಿ ಸಬಲೀಕರಣಗೊಳಿಸಿತ್ತು. ಅಲ್ಲದೇ ತಮ್ಮ ಭಾಗದಲ್ಲಿ ಆಗಬೇಕಾದ ಕಾಮಗಾರಿಗಳ ಕುರಿತು ಗ್ರಾಪಂಗಳಲ್ಲಿ, ಗ್ರಾಮಸಭೆಗಳಲ್ಲಿ ಯೋಜನೆ ತಯಾರಿಸುವ ಅಧಿಕಾರವೂ ಇತ್ತು. ಈಗ ಆ ಅಧಿಕಾರ ಕಿತ್ತುಕೊಂಡು ಗಾಂಧೀಜಿ ಅವರ ಹೆಸರನ್ನು ತೆಗೆದು ಹಾಕಿ ಆರ್‌ಎಸ್‌ಎಸ್‌ನ ಸೂಚನೆಯಂತೆ ಕೇಂದ್ರ ಬಿಜೆಪಿ ಸರ್ಕಾರ ಯೋಜನೆ ಸ್ವರೂಪವನ್ನೇ ಬದಲಾಯಿಸಿದೆ. ಅಲ್ಲದೇ ಕೇಂದ್ರ ಸರ್ಕಾರವೇ ಯೋಜನೆ ರೂಪಿಸುವುದರಿಂದ ಯೋಜನೆ ಆಶಯವೇ ಹಾಳಾದಂತಾಗಿದೆ. ಇದಕ್ಕೆ ಅವಕಾಶ ನೀಡುವುದಿಲ್ಲ ಎಂದರು.


ಪ್ರತಿಭಟನೆಯಲ್ಲಿ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ಹುಣಸೂರು ಉಸ್ತುವಾರಿ ರಾಮಪ್ಪ ಬೋವಿ, ಜಿಪಂ ಮಾಜಿ ಸದಸ್ಯ ಡಿ.ಕೆ.ಕುನ್ನೇಗೌಡ, ಕಾಂಗ್ರೆಸ್ ಮಾಜಿ ಕಾರ್ಯಾಧ್ಯಕ್ಷ ವಕೀಲ ಪುಟ್ಟರಾಜ್, ಕಾರ್ಯಾಧ್ಯಕ್ಷ ದೇವರಾಜ್, ಬ್ಲಾಕ್ ಅಧ್ಯಕ್ಷ ರವಿಪ್ರಸನ್ನ, ಪ್ರೇಮ್ ಕುಮಾರ್, ಬಾಲಸುಂದರ್, ಮಾಜಿ ಅಧ್ಯಕ್ಷ ರಮೇಶ್, ನಾರಾಯಣ್, ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ರಾಘು, ವಕ್ಫ್ ಸಮಿತಿ ಸದಸ್ಯ ಅಜ್ಗರ್ ಪಾಷ, ಯುವ ಕಾಂಗ್ರೆಸ್ ಅಧ್ಯಕ್ಷ ದರ್ಶನ್, ಫೈಜಲ್, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಸುನೀತಾ, ಅಕ್ರಮ ಸಕ್ರಮ ಸಮಿತಿ ಸದಸ್ಯರಾದ ಕುಮಾರ್, ಗುಣಶೇಖರ್, ಮಾಜಿ ಸದಸ್ಯ ಚಿಕ್ಕಸ್ವಾಮಿ, ಶಿವಲಿಂಗಪ್ಪ, ಕುಮಾರ್, ಪ್ರಚಾರ ಸಮಿತಿ ಅಧ್ಯಕ್ಷ ರಾಮೇಗೌಡ, ಮುಖಂಡರಾದ, ಸ್ವಾಮಿ, ಜಯರಾಮ್, ಕುಪ್ಪುಸ್ವಾಮಿ, ರಾಜು ಶಿವರಾಜೇಗೌಡ, ಟಿ.ಕೃಷ್ಣ, ಕಾರ್ತಿಕ್, ಅಫ್ರೋಜ್, ಕುಮಾರ್, ರಾಜು, ಜಯಲಕ್ಷ್ಮಿ, ಕಲ್ಪನಾ ಸೇರಿದಂತೆ ಇತರರಿದ್ದರು.

"ದೇಶದಲ್ಲಿ ಜನಸಾಮಾನ್ಯರು, ಬಡವರು ಬಡವರಾಗಿಯೇ ಇರಬೇಕು. ಸರಿ ಸಮಾನವಾಗಿ ಇರುವುದನ್ನು ಬಿಜೆಪಿಯವರು ಸಹಿಸುವುದಿಲ್ಲ. ಸುಳ್ಳು ಹೇಳುವುದರಲ್ಲಿ ಬಿಜೆಪಿಯವರು 3 ಪಿಹೆಚ್‌ಡಿ ಮಾಡಿದ್ದರೆ, ಜೆಡಿಎಸ್ ನವರು 4 ಪಿಹೆಚ್‌ಡಿ ಮಾಡಿದ್ದಾರೆ. ಹುಣಸೂರು, ಪಿರಿಯಾಪಟ್ಟಣ ತಾಲೂಕು ಸೇರಿದಂತೆ ಕರ್ನಾಟಕದ ತಂಬಾಕು ಉತ್ತಮ ಗುಣಮಟ್ಟದಾಗಿದೆ. ಆದರೆ ಪ್ರಧಾನಿ ಮೋದಿ ತಂಬಾಕು ರೈತರ ಹಿತ ಕಾಪಾಡುವಲ್ಲಿ ವಿಫಲವಾಗಿದ್ದಾರೆ. ಅಲ್ಲದೇ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಸಹ ತಂಬಾಕು ರೈತರ ಸಮಸ್ಯೆ ಬಗೆಹರಿಸದೇ ಕೇವಲ ನೆಪಕ್ಕಾಗಿ ಸಭೆ ನಡೆಸಿ ರೈತರಿಗೆ ಅನ್ಯಾಯವೆಸಗುತ್ತಿದ್ದಾರೆ.
– ಎಂ.ಲಕ್ಷ್ಮಣ್, ಕೆಪಿಸಿಸಿ ವಕ್ತಾರ.

ಮರಕ್ಕೆ ಎಲೆಕ್ಟ್ರಿಕ್ ಸ್ಕೂಟರ್ ಡಿಕ್ಕಿ: ಸವಾರ ಸಾವು



ತಿ.ನರಸೀಪುರ, ಮಾ.3– ಮರಕ್ಕೆ ಎಲೆಕ್ಟ್ರಿಕ್ ಸ್ಕೂಟರ್ ಡಿಕ್ಕಿ ಹೊಡೆದ ಪರಿಣಾಮ ಸವಾರ ಸಾವನ್ನಪ್ಪಿ, ಹಿಂಬದಿ ಸವಾರ ಗಾಯಗೊಂಡಿರುವ ಘಟನೆ ಪಟ್ಟಣದ ತಿ.ನರಸೀಪುರ–ಕೊಳ್ಳೇಗಾಲ ಮುಖ್ಯ ರಸ್ತೆಯ ಸೆಂಟ್ ನೋಬರ್ಟ್ ಶಾಲೆ ಬಳಿ ಸಂಭವಿಸಿದೆ.

ತಾಲೂಕಿನ ಹೆಳವರಹುಂಡಿ ನಿವಾಸಿ, ಪಟ್ಟಣದ ಪುರಸಭೆ ವಾಟರ್‌ಮನ್ ಚಿನ್ನಸ್ವಾಮಿ(58) ಸಾವನ್ನಪ್ಪಿದವರು. ಹಿಂಬದಿ ಸವಾರ ಹೆಚ್.ಬಿ.ಲೋಕೇಶ್ ಗಾಯಗೊಂಡವರು.

ವಿವರ: ಚಿನ್ನಸ್ವಾಮಿ ಅವರು ಸೋಮವಾರ ಸಂಜೆ ತಮ್ಮ ವೋಲಾ ಎಲೆಕ್ಟ್ರಿಕ್ ಬೈಕ್ (ಕೆಎ.55, ಇಇ–3824)ನಲ್ಲಿ ಕೊಂಗಳ್ಳಿ ಬೆಟ್ಟಕ್ಕೆ ತೆರಳಿ ಮಂಗಳವಾರ ಗ್ರಾಮಕ್ಕೆ ವಾಪಸ್ಸಾಗುತ್ತಿದ್ದ ವೇಳೆ ಸೆಂಟ್ ನೋಬರ್ಟ್ ಶಾಲೆ ಬಳಿ ನಿಯಂತ್ರಣ ಕಳೆದುಕೊಂಡ ಸ್ಕೂಟರ್ ರಸ್ತೆ ಬದಿ ಮರಕ್ಕೆ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಚಿನ್ನಸ್ವಾಮಿ ಅವರನ್ನು ತಿ.ನರಸೀಪುರ ಸಾರ್ವಜನಿಕ ಆಸ್ಪತ್ರೆಗೆ ಕರೆತಂದು ಪ್ರಥಮ ಚಿಕಿತ್ಸೆ ಕೊಡಿಸಿ, ವೈದ್ಯರ ಸಲಹೆ ಮೇರೆಗೆ ಮೈಸೂರಿನ ಅಪೋಲೋ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ. ಹಿಂಬದಿ ಸವಾರ ಲೋಕೇಶ್ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮೃತನ ಪತ್ನಿ ಮಹೇಶ್ವರಿ ನೀಡಿದ ದೂರಿನ ಮೇರೆಗೆ ತಿ.ನರಸೀಪುರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ. ಅಪಘಾತ ಸ್ಥಳಕ್ಕೆ ಸಿಪಿಐ ಧನಂಜಯ್ ಭೇಟಿ ನೀಡಿ ಪರಿಶೀಲಿಸಿದರು.

ರಂಗಯ್ಯ ನಿಧನ



ನಂಜನಗೂಡು, ಮಾ.3– ತಾಲೂಕಿನ ಜಿ.ಮರಳ್ಳಿ ಗ್ರಾಮದ ನಿವಾಸಿ ರಂಗಯ್ಯ(95) ಮಂಗಳವಾರ ನಿಧನರಾದರು. ಮೃತರು ಪತ್ನಿ, ಸುತ್ತೂರು ಗ್ರಾಪಂ ಅಧ್ಯಕ್ಷ ರಂಗಸ್ವಾಮಿ ಸೇರಿದಂತೆ ಇಬ್ಬರು ಪುತ್ರರು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನಡೆಯಿತು.

ತಿ.ನರಸೀಪುರದ ರೇಷ್ಮೆ ಕಾರ್ಖಾನೆ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ ವಿವಾದ

ಮೈಸೂರಿನ ಕೆಎಸ್‌ಐಸಿ ನೌಕರರ ಪ್ರತಿಭಟನೆ ಸ್ಥಗಿತ; ಕೆಲಸಕ್ಕೆ ಹಾಜರು

• ಒಗ್ಗಟ್ಟಿನ ಕೊರತೆ ಹಿನ್ನೆಲೆ; ಪ್ರತಿಭಟನೆ ಸ್ಥಗಿತ • ಕೆಲಸದಿಂದ ವಜಾ ಮಾಡುವ ಭಯದಿಂದ ನಿರ್ಧಾರ • ಕ್ರೀಡಾಂಗಣ ಯೋಜನೆ; ಸರ್ಕಾರದ ನಿರ್ಧಾರ ಅಚಲ



ಮೈಸೂರಿನ ತಿ.ನರಸೀಪುರದ ರೇಷ್ಮೆ ಕಾರ್ಖಾನೆ ಆವರಣದಲ್ಲಿ ಪ್ರಸ್ತಾವಿತ ಕ್ರೀಡಾಂಗಣ ನಿರ್ಮಾಣ ವಿರೋಧಿಸಿ ಅಲ್ಲಿನ ನೌಕರರು ನಡೆಸುತ್ತಿರುವ ಪ್ರತಿಭಟನಾ ಧರಣಿ 11 ದಿನಕ್ಕೆ ಕಾಲಿಟ್ಟಿದೆ.

ಮೈಸೂರು, ಮಾ.3(ಬಿಎಲ್‌ಯು)– ತಿ.ನರಸೀಪುರದ ಭೈರಾಪುರದಲ್ಲಿರುವ ರೇಷ್ಮೆ ಕಾರ್ಖಾನೆ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ ವಿರೋಧಿಸಿ ಮೈಸೂರಿನ ಮಾನಂದವಾಡಿ ರಸ್ತೆಯ ಕೆಎಸ್‌ಐಸಿ ನೌಕರರು ನಡೆಸುತ್ತಿದ್ದ ಪ್ರತಿಭಟನೆ ಕೈಬಿಡಲಾಗಿದೆ. ಎಲ್ಲಾ ನೌಕರರು ಕೆಲಸಕ್ಕೆ ಹಾಜರಾಗಿದ್ದಾರೆ.

ಕ್ರೀಡಾಂಗಣ ನಿರ್ಮಿಸುತ್ತಿರುವ ಸರ್ಕಾರದ ಕ್ರಮವನ್ನು ವಿರೋಧಿಸಿ ಫೆಬ್ರವರಿ 26ರಿಂದ ನೌಕರರು ಕೆಲಸಕ್ಕೆ ಗೈರಾಗಿ ಪ್ರತಿಭಟನೆ ಆರಂಭಿಸಿದ್ದರು. ತಿ.ನರಸೀಪುರದ ಕೆಎಸ್‌ಐಸಿ ಕಾರ್ಖಾನೆ ಮುಂದೆ ನಡೆಯುತ್ತಿರುವ ಧರಣಿಯಲ್ಲೂ ಭಾಗಿಯಾಗಿ ಅವರಿಗೆ ಬೆಂಬಲ ಸೂಚಿಸಿದ್ದರು.

ಕಾರ್ಖಾನೆಯ ಹೊರ ಗುತ್ತಿಗೆ ಹಾಗೂ ಖಾಯಂ ನೌಕರರು ಸೇರಿ 775 ನೌಕರರು ಪ್ರತಿಭಟನೆ ನಡೆಸುತ್ತಿದ್ದರು. ಆದರೆ ನಿವೃತ್ತಿ ಹೊಂದಿದ ನಂತರ ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿದ್ದ ನೌಕರರು ಕೆಲಸಕ್ಕೆ ಹಾಜರಾಗಿ ಸೀರೆ ನೇಯ್ಗೆಯಲ್ಲಿ ತೊಡಗಿದ್ದರು.

ಹಾಗಾಗಿ ಇಡೀ ಕಾರ್ಖಾನೆಯ ನೌಕರರು ಪ್ರತಿಭಟನೆ ನಡೆಸಿ ಸರ್ಕಾರಕ್ಕೆ ಬಿಸಿ ಮುಟ್ಟಿಸುವ ಒಗ್ಗಟ್ಟು ಪ್ರದರ್ಶಿಸಲಿಲ್ಲ. ಇದರಿಂದ ತಮ್ಮ ಪ್ರತಿಭಟನೆ ಯಾವುದೇ ರೀತಿಯಲ್ಲೂ ಪರಿಣಾಮ ಬೀರಲಿಲ್ಲ ಎಂದು ನೌಕರರು ಅಭಿಪ್ರಾಯಪಟ್ಟರು.

ನಾವೇನಾದರೂ ಹೀಗೆ ಕೆಲಸಕ್ಕೆ ಗೈರಾಗಿ ಪ್ರತಿಭಟನೆ ನಡೆಸಿದರೆ ಸರ್ಕಾರ ನಮ್ಮನ್ನು ಕೆಲಸದಿಂದ ವಜಾ ಮಾಡುವ ಸಾಧ್ಯತೆ ಇತ್ತು. ಇದನ್ನೇ ನಂಬಿ ಜೀವನ ನಡೆಸುತ್ತಿದ್ದು, ಕೆಲಸ ಹೋದರೆ ಏನು ಗತಿ ಎಂದು ನೂರಾರು ನೌಕರರು ಆತಂಕ ವ್ಯಕ್ತಪಡಿಸಿದರು.

ಅಲ್ಲದೆ ಕಾರ್ಖಾನೆ ಮುಚ್ಚುವುದಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವರೂ ಆದ ಅಲ್ಲಿನ ಶಾಸಕ ಡಾ.ಹೆಚ್.ಸಿ. ಮಹದೇವಪ್ಪ ಅವರು ಭರವಸೆ ನೀಡಿದ್ದರು. ಈ ಹಿನ್ನೆಲೆಯಲ್ಲಿ ನಾವು ಪ್ರತಿಭಟನೆ ಕೈಬಿಟ್ಟು ಕೆಲಸಕ್ಕೆ ಹಾಜರಾಗಲು ತೀರ್ಮಾನ ಕೈಗೊಂಡಿದ್ದೆವು. ಇದರಿಂದ ಎಲ್ಲರೂ ಪ್ರತಿಭಟನೆ ಸ್ಥಗಿತಗೊಳಿಸಿ, ಕೆಲಸಕ್ಕೆ ಹಾಜರಾಗಿದ್ದೇವೆ ಎಂದು ಕೆಎಸ್‌ಐಸಿ ನೌಕರರೊಬ್ಬರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಕೆಎಸ್‌ಐಸಿ ನಿವ್ವಳ ಲಾಭ ಮೂರು ಪಟ್ಟು ಹೆಚ್ಚಳ

ಕೆಎಸ್‌ಐಸಿಯ ಒಟ್ಟಾರೆ ನಿವ್ವಳ ಲಾಭವು ಮೂರು ಪಟ್ಟು ಹೆಚ್ಚಾಗಿದೆ ಎಂದು ಕೆಎಸ್‌ಐಸಿ ವ್ಯವಸ್ಥಾಪಕ ನಿರ್ದೇಶಕಿ ಹೆರಾ ನಸೀಮ್ ಅವರು ತಿಳಿಸಿದ್ದಾರೆ.

2021–22ರಲ್ಲಿ ಕೆಎಸ್‌ಐಸಿಯ ನಿವ್ವಳ ಲಾಭವು 31.64 ಕೋಟಿಗೆ ಹೆಚ್ಚಾಗಿದೆ. ಇನ್ನು 2024–25 ರಲ್ಲಿ 96 ಕೋಟಿ ನಿವ್ವಳ ಲಾಭ ಬಂದಿದೆ ಎಂದು ಅಂಕಿ ಅಂಶಗಳ ಸಹಿತ ಮಾಹಿತಿ ನೀಡಿದ್ದಾರೆ.

ಕಳೆದ ಮೂರು ವರ್ಷಗಳಲ್ಲಿ ದೈನಂದಿನ ಸೀರೆ ಉತ್ಪಾದನೆ 280 ರಿಂದ 400 ಕ್ಕೆ ಹೆಚ್ಚಳವಾಗಿದೆ. ಬೇಡಿಕೆಗೆ ಅನುಗುಣವಾಗಿ ಸೀರೆಗಳ ಬೆಲೆಗಳು ಸುಮಾರು ಶೇಕಡ 15 ರಷ್ಟು ಏರಿಕೆಯಾಗಿದೆ. ಪ್ರಸ್ತುತ ದಿನಕ್ಕೆ ಸುಮಾರು 600 ಹೆಚ್ಚುವರಿ ಸೀರೆಗಳಿಗೆ ಬೇಡಿಕೆ ಇದೆ ಎಂದು ಹೆರಾ ನಸೀಮ್ ತಿಳಿಸಿದ್ದಾರೆ.

ತಿ.ನರಸೀಪುರದಲ್ಲಿ ಪ್ರತಿಭಟನೆ ಮುಂದುವರಿಕೆ

ಕಾರ್ಖಾನೆ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ ವಿರೋಧಿಸಿ ಇಲ್ಲಿನ ನೌಕರರು ಕೆಲಸಕ್ಕೆ ಗೈರಾಗಿ ನಡೆಸುತ್ತಿರುವ ಪ್ರತಿಭಟನೆ 11 ದಿನಕ್ಕೆ ಕಾಲಿಟ್ಟಿದೆ.

ಕಾರ್ಖಾನೆ ಮುಚ್ಚುವುದಿಲ್ಲ ಎಂದು ಇಲ್ಲಿನ ಶಾಸಕರೂ ಆದ ಸಚಿವ ಡಾ. ಮಹದೇವಪ್ಪ ಭರವಸೆ ನೀಡಿದ್ದಾರೆ. ಆದರೆ ಇಲ್ಲಿ ಕ್ರೀಡಾಂಗಣ ನಿರ್ಮಾಣವಾದರೆ ಸಹಜವಾಗಿಯೇ ಕಾರ್ಖಾನೆ ಮುಚ್ಚುವ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಇಲ್ಲಿರುವ 13 ಎಕರೆಯಲ್ಲಿ ಕ್ರೀಡಾಂಗಣಕ್ಕೆ ನೀಡಿರುವ 5 ಎಕರೆಯನ್ನು ಪ್ರಸ್ತುತ ನಾವು ಬಳಕೆ ಮಾಡುತ್ತಿದ್ದೇವೆ. ಕಲ್ಲಿದ್ದಲು ಸ್ಟಾಕ್ ಮಾಡಲು, ಬಳಕೆ ಮಾಡಿದ ಕಲ್ಲಿದ್ದಲು ಕೆಂಡ ಸುರಿಯಲು ಈ ಜಾಗ ಬಳಸುತ್ತಿದ್ದೇವೆ. ಅಲ್ಲದೆ ಕಪಿಲಾ ನದಿಯಿಂದ ಕಾರ್ಖಾನೆಗೆ ನೀರು ಸರಬರಾಜು ಮಾಡುವ ಪೈಪ್ ಲೈನ್ ಕೂಡ ಇಲ್ಲೇ ಹಾದು ಹೋಗಿದೆ. ಕಾರ್ಖಾನೆ ನಿರ್ಮಾಣ ಮಾಡಿದರೆ ಕಲ್ಲಿದ್ದಲು ಹಾಗೂ ಕೆಂಡ ಸುರಿಯಲು ನಾವೇನು ಮಾಡುವುದು. ಅಲ್ಲದೆ ಪೈಪ್ ಲೈನ್ ಮಾರ್ಗ ಕೂಡ ಬದಲಾಯಿಸುವ ಪರಿಸ್ಥಿತಿ ಎದುರಾಗುತ್ತದೆ ಎಂದು ನೌಕರರು ಆತಂಕ ವ್ಯಕ್ತಪಡಿಸಿದರು.

ಇದರಿಂದ ಕ್ರೀಡಾಂಗಣಕ್ಕೆ ನಾವು ಜಾಗ ಕೊಟ್ಟರೆ ನಮ್ಮ ಬಳಕೆಗೆ ಸ್ಥಳವಿಲ್ಲದೆ ಕಾರ್ಖಾನೆಯನ್ನು ಸಹಜವಾಗಿಯೇ ಮುಚ್ಚುವ ಅನಿವಾರ್ಯ ಪರಿಸ್ಥಿತಿ ನಿರ್ಮಾಣ ವಾಗುತ್ತದೆ. ಈ ಹಿನ್ನೆಲೆಯಲ್ಲಿ ಕಾರ್ಖಾನೆ ಆವರಣದಲ್ಲಿ ಯಾವುದೇ ಕಾರಣಕ್ಕೂ ಕ್ರೀಡಾಂಗಣ ನಿರ್ಮಾಣ ಮಾಡಲು ಅವಕಾಶ ನೀಡುವುದಿಲ್ಲ ಎಂದರು.

ಇದೇ ತಿ.ನರಸೀಪುರ ಪಟ್ಟಣ ಸಮೀಪದ ನಿಲಸೋಗೆಯಲ್ಲಿ ಸರ್ಕಾರದ 12 ಎಕರೆ ಭೂಮಿ ಇದೆ, ಅಲ್ಲದೆ ಸುತ್ತಮುತ್ತ ಸರ್ಕಾರದ ಹತ್ತಾರು ಎಕರೆ ಭೂಮಿ ಇದೆ. ಅಲ್ಲಿ ಎಲ್ಲಿಯಾದರೂ ಕ್ರೀಡಾಂಗಣ ನಿರ್ಮಾಣ ಮಾಡಬಹುದು. ಆದರೆ ಕ್ರೀಡಾಂಗಣಕ್ಕೆ ನಮ್ಮ ಕಾರ್ಖಾನೆ ಜಾಗವನ್ನೇ ಏಕೆ ನಿಗದಿ ಮಾಡಿದ್ದಾರೆ ಎಂದು ಪ್ರತಿಭಟನಾನಿರತ ನೌಕರರು ಪ್ರಶ್ನಿಸಿದ್ದಾರೆ. ಇಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡುವುದಿಲ್ಲ ಎಂದು ಸರ್ಕಾರ ಖಚಿತ ಭರವಸೆ ನೀಡುವ ತನಕ ಹೋರಾಟ ಮುಂದುವರೆಸುತ್ತೇವೆ ಎಂದು ನೌಕರರು ಹೇಳಿದ್ದಾರೆ.

ಮೈಸೂರು ರೇಷ್ಮೆ ಸೀರೆ ಧರಿಸಿ ವಿನೂತನ ಪ್ರತಿಭಟನೆ

ತಿ.ನರಸೀಪುರದ ರೇಷ್ಮೆ ಕಾರ್ಖಾನೆಯಲ್ಲಿ ಕ್ರೀಡಾಂಗಣ ನಿರ್ಮಾಣ ವಿರೋಧಿಸಿ 100ಕ್ಕೂ ಹೆಚ್ಚು ಮಹಿಳೆಯರು ಮೈಸೂರು ರೇಷ್ಮೆ ಸೀರೆ ಧರಿಸಿ ನಾಳೆ (ಮಾರ್ಚ್ 4) ಜಿಲ್ಲಾಧಿಕಾರಿ ಲಕ್ಷ್ಮೀಕಾಂತರೆಡ್ಡಿ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸುವ ಮೂಲಕ ವಿನೂತನ ಪ್ರತಿಭಟನೆ ನಡೆಸಲಿದ್ದಾರೆ.

ನಮ್ಮ ಅಜ್ಜಿ ಕಾಲದಿಂದಲೂ ಮೈಸೂರು ರೇಷ್ಮೆ ಸೀರೆ ಚಿರಪರಿಚಿತವಾಗಿದೆ. ಮದುವೆ ಸೇರಿದಂತೆ ಯಾವುದೇ ಶುಭ ಸಮಾರಂಭದಲ್ಲಿ ನಾವೆಲ್ಲರೂ ಮೈಸೂರು ರೇಷ್ಮೆ ಸೀರೆ ಧರಿಸುವ ಸಂಪ್ರದಾಯ ಅನುಸರಿಸಿಕೊಂಡು ಬಂದಿದ್ದೇವೆ. ಆದರೆ ಈಗ ಕಾರ್ಖಾನೆ ಮುಚ್ಚಿದರೆ ನಮ್ಮ ಸಂಪ್ರದಾಯದ ಪ್ರತೀಕವಾದ ಮೈಸೂರು ರೇಷ್ಮೆ ಸೀರೆ ಹೆಸರಿಲ್ಲದಂತೆ ಚರಿತ್ರೆ ಪುಟ ಸೇರಲಿದೆ ಎಂಬ ಕಾರಣದಿಂದ ಪ್ರತಿಭಟನೆ ನಡೆಸಲು ನಿರ್ಧರಿಸಿದ್ದಾರೆ.

ಜಿಐ ಟ್ಯಾಗ್ ಹೊಂದಿರುವ ಮೈಸೂರು ರೇಷ್ಮೆ ಸೀರೆಯನ್ನು ನಾವು ಮಾತ್ರವಲ್ಲದೆ ವಿದೇಶದಲ್ಲಿರುವ ನಮ್ಮ ಸಂಬಂಧಿಕರಿಗೂ ಕೂಡ ಉಡುಗೊರೆಯಾಗಿ ನೀಡುತ್ತಿದ್ದೇವೆ. ಇಂತಹ ಪ್ರಸಿದ್ಧ ಮೈಸೂರು ರೇಷ್ಮೆ ಸೀರೆ ಇತಿಹಾಸಕ್ಕೆ ತಿಲಾಂಜಲಿ ಇಡುತ್ತಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ಈ ಸಂಬಂಧ ಈಗಾಗಲೇ ಮೈಸೂರು ರೇಷ್ಮೆ ಸೀರೆ ಪ್ರಿಯ ಮಹಿಳೆಯರು ಗೂಗಲ್ ಮೀಟ್‌ನಲ್ಲಿ ಈ ಎಲ್ಲಾ ವಿಚಾರಗಳ ಬಗ್ಗೆ ಚರ್ಚೆ ಮಾಡಿದ್ದಾರೆ. ತರುವಾಯ ಕಾರ್ಖಾನೆಯ ರಕ್ಷಣೆಗಾಗಿ ನಾಳೆ ಮೈಸೂರು ರೇಷ್ಮೆ ಸೀರೆಯನ್ನು ಧರಿಸಿ ಜಿಲ್ಲಾಧಿಕಾರಿ ಲಕ್ಷ್ಮೀಕಾಂತರೆಡ್ಡಿ ಅವರಿಗೆ ಮನವಿ ಪತ್ರ ಸಲ್ಲಿಸಲು ನಿರ್ಧಾರ ಮಾಡಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಭಾರತಿ ಟೀಚರ್ –1 ಪ್ರದರ್ಶನ (ಕ), ಫೋರ್ತ್ ಫ್ಲೋರ್–3 ಪ್ರದರ್ಶನ (ತಮಿಳು)	
ವುಡ್‌ಲ್ಯಾಂಡ್ಸ್	(ದೂ: 2422871)
ರೈಸ್ ಆಫ್ ಅಶೋಕ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಹಯಗ್ರೀವ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲ್ಯಾಂಡ್ ಲಾರ್ಡ್ (ಕ)	4 ಪ್ರದರ್ಶನಗಳು
ರಾಜಕಮಲ್	
ತಾಯಿ ಕಿಳವಿ (ತ)	4 ಪ್ರದರ್ಶನಗಳು
ಸಂಗಂ	
ಹಯಗ್ರೀವ (ಕ)	4 ಪ್ರದರ್ಶನಗಳು
ಲಿಡೋ	
ವೀರ ಕಂಬಳ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಸೂರಿ ಅಣ್ಣ (ಕ)	4 ಪ್ರದರ್ಶನಗಳು

ಶಾಲೆಗೆ ಭೇಟಿ



ಮೈಸೂರಿನ ವರುಣ ವಿಧಾನಸಭಾ ಕ್ಷೇತ್ರದ ಮೆಲ್ಲಹಳ್ಳಿ(ಹಾರೋಹಳ್ಳಿ) ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಭೇಟಿ ನೀಡಿ, ಮಕ್ಕಳ ಕುಂದುಕೊರತೆ ಆಲಿಸಿದರು. ಈ ವೇಳೆ ಗ್ರಾಮ ಪಂಚಾಯ್ತಿ ಮಾಜಿ ಅಧ್ಯಕ್ಷ ನಾಗರಾಜ್, ಮುಖಂಡರಾದ ರವಿ ಎನ್.ಗೌಡ, ಸಿದ್ದಯ್ಯ ಅನುಕುಮಾರ್, ರಾಜೇಶ್, ಪ್ರಶಾಂತ್ ಕುಮಾರ್ ಮತ್ತಿತರರಿದ್ದರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ 5 ಪಂದ್ಯ ಆಡಲಿದೆ ಆರ್‌ಸಿಬಿ

ಬೆಂಗಳೂರು, ಮಾ.3– ಇಂಡಿಯನ್ ಪ್ರೀಮಿಯರ್ ಲೀಗ್ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಚಿನ್ನಸ್ವಾಮಿ ಕ್ರೀಡಾಂಗಣದಲ್ಲೇ ಪಂದ್ಯ ಆಡುವುದು ಖಚಿತವಾಗಿದೆ.

ಉದ್ಘಾಟನಾ ಪಂದ್ಯ ಸೇರಿದಂತೆ ತನ್ನ ಐದು ತವರು ಪಂದ್ಯಗಳನ್ನು ಬೆಂಗಳೂರಿನಲ್ಲೇ ಆಡುವುದಾಗಿ ಆರ್‌ಸಿಬಿ ದೃಢಪಡಿಸಿದೆ.

ಎರಡು ತವರು ಪಂದ್ಯಗಳನ್ನು ಪೂರ್ವ ಬದ್ಧತೆಯಂತೆ ಛತ್ತೀಸ್‌ಗಢದಲ್ಲಿರುವ ರಾಯ್‌ಪುರದ ಶಹೀದ್ ವೀರ್ ನಾರಾಯಣ್ ಸಿಂಗ್ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಸಲಾಗುವುದು ಎಂದು ಆರ್‌ಸಿಬಿ ತನ್ನ ಮಾಧ್ಯಮ ಹೇಳಿಕೆಯಲ್ಲಿ ತಿಳಿಸಿದೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕೈಗೊಂಡ ಸುರಕ್ಷತಾ ಕ್ರಮದ ಬಳಿಕ ಸರ್ಕಾರ ಪಂದ್ಯ ಆಯೋಜಿಸಲು ಅನುಮತಿ ನೀಡಿತ್ತು. ಅನುಮತಿ ಸಿಕ್ಕಿದ ಬೆನ್ನಲ್ಲೇ ಈಗ ಆರ್‌ಸಿಬಿ ಬೆಂಗಳೂರಿನಲ್ಲಿ 5 ಪಂದ್ಯಗಳನ್ನು ಆಡುವುದಾಗಿ ಅಧಿಕೃತವಾಗಿ ತಿಳಿಸಿದೆ.

ಕಾಲ್ತುಳಿತ ದುರಂತ ಸಂಭವಿಸಿದ ಬಳಿಕ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ರಣಜಿ ಟ್ರೋಫಿ, ವಿಜಯ್ ಹಜಾರೆ ಟ್ರೋಫಿ ಅಥವಾ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಸೇರಿದಂತೆ ಯಾವುದೇ ಪ್ರಮುಖ ದೇಶೀಯ ಪಂದ್ಯಗಳು ನಡೆದಿರಲಿಲ್ಲ.

ಬೆಂಗಳೂರಿನಲ್ಲಿ ಪಂದ್ಯ ಆಡುವ ಬಗ್ಗೆ ಆರ್‌ಸಿಬಿ ಮಾರ್ಚ್ 2ರಂದೇ 'ಹೋಮ್ ಆಫ್ ಚಾಂಪಿಯನ್ಸ್' ಪೋಸ್ಟ್ ಹಂಚಿಕೊಳ್ಳುವ ಮೂಲಕ ಬೆಂಗಳೂರಿನಲ್ಲೇ ಪಂದ್ಯವಾಡುವ ಬಗ್ಗೆ ಮಹತ್ವದ ಸುಳಿವು ನೀಡಿತ್ತು

ಅಫ್ಘನ್ ಮೇಲೆ ದಾಳಿ ತೀವ್ರಗೊಳಿಸಿದ ಪಾಕಿಸ್ತಾನ: ಮತ್ತೆ 69 ತಾಲಿಬಾನಿಗಳ ಸಾವು

ಇಸ್ಲಾಮಾಬಾದ್, ಮಾ.3– ಅಫ್ಘಾನಿಸ್ತಾನ ವಿರುದ್ಧ ನಡೆಯುತ್ತಿರುವ ಸೇನಾ ಕಾರ್ಯಾಚರಣೆಯಲ್ಲಿ ಅಫ್ಘನ್‌ನ ಮತ್ತೆ 69 ತಾಲಿಬಾನ್ ಅಧಿಕಾರಿಗಳನ್ನು ಮತ್ತು ಅವರ ಬೆಂಬಲಿತ ಭಯೋತ್ಪಾದಕರನ್ನು ಒಂದೇ ರಾತ್ರಿ ಹತ್ಯೆ ಮಾಡಲಾಗಿದೆ ಎಂದು ಪಾಕಿಸ್ತಾನ ಸೇನೆ ತಿಳಿಸಿದೆ.

ಮಂಗಳವಾರ ಬೆಳಗಿನ ಜಾವ ನೈರುತ್ಯ ಭಾಗದ ಗಡಿಯಲ್ಲಿ ನಡೆದ ಪಾಕಿಸ್ತಾನ ಸೇನೆಯ ದಾಳಿಗಳಲ್ಲಿ 69 ತಾಲಿಬಾನ್ ಸಿಬ್ಬಂದಿಗಳು ಹಾಗೂ ಭಯೋತ್ಪಾದಕರು ಸತ್ತಿದ್ದಾರೆ ಎಂದು ತಿಳಿಸಿದೆ. ಈ ಮೊದಲು ದಾಳಿ ಶುರುವಾದಾಗಿನಿಂದ ಸುಮಾರು 331 ಅಫ್ಘನ್‌ನ ಮಂದಿಯನ್ನು ಹತ್ಯೆ ಮಾಡಲಾಗಿದೆ ಎಂದು ಪಾಕ್ ತಿಳಿಸಿತ್ತು.

ಅನೇಕ ತಾಲಿಬಾನಿಗಳು ಚಮನ್ ಜಿಲ್ಲೆಯ ಗಡಿಯಲ್ಲಿ ಯಾವುದೇ ಶಸ್ತ್ರಗಳಿಲ್ಲದೇ ನಮ್ಮವರನ್ನು ಬರಿಗೈಯಲ್ಲಿ ಎದುರಿಸಲು ಬಂದು ಹತರಾಗಿದ್ದಾರೆ ಎಂದು ಮಾಹಿತಿ ಸಚಿವ ಅತುಲ್ಲಾ ತಾರರ್ ತಿಳಿಸಿದ್ದಾರೆ.

ಖೈಬರ್ ಪಂಖ್ತುವ್ವಾ ಪ್ರಾಂತ್ಯದ 12 ಸ್ಥಳಗಳಲ್ಲಿ ಅಫ್ಘನ್ ವಿರುದ್ಧ ದಾಳಿ ನಡೆಸಲಾಗಿದೆ ಎಂದು ಅವರು ತಿಳಿಸಿದ್ದಾರೆ. ನಮ್ಮ ಕಡೆ ಇಂದು ಯಾವುದೇ ಸಾವು–ನೋವುಗಳಾಗಿಲ್ಲ ಎಂದು ವಿವರಿಸಿದ್ದಾರೆ.

ಪಾಕಿಸ್ತಾನ–ಅಫ್ಘಾನಿಸ್ತಾನದ 2,600 ಕಿಲೋಮೀಟರ್ ಉದ್ದದ ಗಡಿಗೆ ಹೊಂದಿ ಕೊಂಡ ಪಾಕ್‌ನ 53 ಸ್ಥಳಗಳನ್ನು ಗುರಿಯಾಗಿಸಿ ಅಫ್ಘಾನಿಸ್ತಾನ ಕಳೆದ ಫೆಬ್ರುವರಿ 26ರಂದು ದಾಳಿ ಮಾಡಿತ್ತು. ಇದಕ್ಕೆ ಪ್ರತ್ಯುತ್ತರವಾಗಿ ಶುಕ್ರವಾರ ಪಾಕಿಸ್ತಾನ ಸೇನೆ ಅಫ್ಘಾನಿಸ್ತಾನದ ರಾಜಧಾನಿ ಕಾಬೂಲ್ ಮತ್ತು ಕಾಂದಹಾರ್‌ಗಳ ಮೇಲೂ ಬಾಂಬ್ ದಾಳಿ ನಡೆಸಿತ್ತು. ಇದರಿಂದ ಎರಡೂ ದೇಶಗಳ ನಡುವೆ ಯುದ್ಧದ ಪರಿಸ್ಥಿತಿ ನಿರ್ಮಾಣವಾಗಿದೆ.

ಇನ್ನು ಅಫ್ಘಾನಿಸ್ತಾನದಿಂದ ಪಾಕಿಸ್ತಾನದ ಕಡೆಗೆ ಡ್ರೋನ್ ದಾಳಿ ಮುಂದುವರಿದ ಕಾರಣ ಪಾಕಿಸ್ತಾನದ ಗಡಿಯ ಅನೇಕ ಜಿಲ್ಲೆಗಳಲ್ಲಿ ಶಾಲಾ–ಕಾಲೇಜುಗಳನ್ನು ಬಂದ್ ಮಾಡಲಾಗಿದೆ. ಮೊಹಮಂದ್‌ನಲ್ಲಿ 54, ಫಲಾನ್ಯೆನಲ್ಲಿ 1, ಬೈಜ್ಯೆನಲ್ಲಿ 33, ಸಫಿಯಲ್ಲಿ 10 ಹಾಗೂ ಖ್ವೆಜ್ಯೆನಲ್ಲಿ 2 ಶಾಲೆಗಳನ್ನು ಬಂದ್ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಉತ್ತರ ವಜೀರಿಸ್ತಾನದಲ್ಲಿ 33, ಬಾಜೌರ್‌ನಲ್ಲಿ 39 ಶಾಲೆಗಳಿಗೂ ಬೀಗ ಹಾಕಲಾಗಿದೆ.

ಸನಾತನ ಧರ್ಮದಲ್ಲಿ ಶಾಂತಿಗೆ ಮೊದಲ ಆದ್ಯತೆ

ಹಿರಿಯ ವೈದ್ಯ ಡಾ.ಎಸ್.ಪಿ.ಯೋಗಣ್ಣ ಅಭಿಮತ

ಮೈಸೂರು, ಮಾ.3(ಎಸ್‌ಪಿಎನ್)– ಸನಾತನ ಧರ್ಮ ಶಾಂತಿಯನ್ನು ಬೋಧಿಸುವ ಧರ್ಮ. 'ವಸುದೈವಕ ಕುಟುಂಬಕಂ' ಪರಿಕಲ್ಪನೆಯನ್ನು ಇಡೀ ಜಗತ್ತಿಗೆ ನೀಡಿದ ಕೀರ್ತಿ ಸನಾತನ ಧರ್ಮಕ್ಕೆ ಸಲ್ಲುತ್ತದೆ ಎಂದು ಹಿರಿಯ ವೈದ್ಯ ಡಾ.ಎಸ್.ಪಿ.ಯೋಗಣ್ಣ ಅಭಿಪ್ರಾಯಪಟ್ಟರು.

ಮೈಸೂರು ರಾಮಕೃಷ್ಣನಗರ ವೃತ್ತದ ನೆಲಮಹಡಿಯಲ್ಲಿ ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನದ ವತಿಯಿಂದ ಏರ್ಪಡಿಸಿದ್ದ 'ತಿಂಗಳ ತಿಳಿವು' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರಸ್ತುತ ಭಯೋತ್ಪಾದನೆಯಿಂದಾಗಿ ವಿಶ್ವದ ಬೇರೆ ಬೇರೆ ದೇಶಗಳ ನಡುವೆ ಯುದ್ಧಗಳು ಸಂಭವಿಸುತ್ತಿವೆ. ಶಾಂತಿಗೆ ಭಂಗ ತರುವ ನಿಟ್ಟಿನಲ್ಲಿ ಯಾವ ದೇಶಗಳೂ ಪ್ರಯತ್ನಿಸಬಾರದು ಎಂದ ಅವರು, ಸನಾತನ ಧರ್ಮದಲ್ಲಿ ಶುದ್ಧ ಶಾಂತಿಗೆ ಮೊದಲ ಆದ್ಯತೆ ಇದೆ. ಅದರಲ್ಲೂ ಮೂಲ ಸನಾತನ ಧರ್ಮದಲ್ಲಿ ಎಲ್ಲರೂ ಒಂದೇ ಎನ್ನುವ ಭಾವನೆಯನ್ನು ಸಮುದಾಯಗಳಲ್ಲಿ ಬಿತ್ತುವ ಕೆಲಸ ಮಾಡುತ್ತಿದೆ ಎಂದರು.

ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ ಸೇರಿದಂತೆ ಇತರೆ ವಚನಕಾರರ ಸಾಹಿತ್ಯವನ್ನು ಎಲ್ಲರೂ ಅಧ್ಯಯನ ಮಾಡಬೇಕು. ಆಗ ಮಾತ್ರ ವಚನ ಚಳವಳಿ ಎಲ್ಲರ ಅರಿವಿಗೆ ಬರುತ್ತದೆ. ತಳ ಸಮುದಾಯಗಳು ವಚನ ಸಾಹಿತ್ಯವನ್ನು ಮೈಗೂಡಿಸಿಕೊಂಡು ಬದುಕು ರೂಪಿಸಿಕೊಳ್ಳಬೇಕು ಎಂದು ಕಿವಿ ಮಾತು ಹೇಳಿದರು.



'ತಿಂಗಳ ತಿಳಿವು' ಕಾರ್ಯಕ್ರಮದಲ್ಲಿ ಶಿಕ್ಷ ಪಿಯು ಕಾಲೇಜಿನ ಪ್ರಾಂಶುಪಾಲ ದೇವರಾಜು ಪಿ.ಚಿಕ್ಕಹಳ್ಳಿ(ದೇಚಿ) ಮಾತನಾಡುತ್ತಿರುವುದು.


ಇದಕ್ಕೂ ಮುನ್ನ 'ವಚನ ಸಾಹಿತ್ಯದಲ್ಲಿ ಜೀವನಮೌಲ್ಯಗಳು ಮತ್ತು ವಿಶ್ವಶಾಂತಿಯ ತತ್ವಗಳು' ವಿಷಯ ಕುರಿತು ವರಕೋಡು ಶಿಕ್ಷ ಪಿಯು ಕಾಲೇಜಿನ ಪ್ರಾಂಶುಪಾಲ ದೇವರಾಜು ಪಿ.ಚಿಕ್ಕಹಳ್ಳಿ(ದೇಚಿ) ಮಾತನಾಡಿ, ವಿಶ್ವ ಮಟ್ಟದಲ್ಲಿ ಸಾಮಾಜಿಕ ಮೌಲ್ಯಗಳು ಕುಸಿಯುತ್ತಿರುವುದರಿಂದ ಶಾಂತಿಗೆ ಭಂಗವಾಗುತ್ತಿದೆ. ವಚನ ಸಾಹಿತ್ಯದ ಅಧ್ಯಯನದಿಂದ ಸಾಮಾಜಿಕ ಮೌಲ್ಯಗಳನ್ನು ಮರುಸ್ಥಾಪನೆ ಮಾಡಬಹುದು ಎಂದರು.

ವಿಶ್ವದ ವಿವಿಧ ದಾರ್ಶನಿಕ ಮೌಲ್ಯಗಳು ಮರು ಸ್ಥಾಪನೆಯಾಗಬೇಕು. ಆಗ ಮಾತ್ರ ಜನರಲ್ಲಿ ಪರಿವರ್ತನೆ ಕಾಣಲು ಸಾಧ್ಯ. ಹನ್ನೆರಡನೇ ಶತಮಾನದ ವಚನಗಳು ಇಂದಿಗೂ ಪ್ರಸ್ತುತ. ಬಸವಣ್ಣ, ಅಲ್ಲಮಪ್ರಭು ಸೇರಿದಂತೆ ಹಲವಾರು ವಚನಕಾರರು ಸಾಹಿತ್ಯ ರಚನೆ ಮಾಡಿದ್ದಾರೆ. ಅಂದಿನ ವಚನಗಳು ಅನುಭವಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಿ ರಚಿತವಾಗಿವೆ ಎಂದು ತಿಳಿಸಿದರು.

ಈ ವೇಳೆ ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನದ ಕಾರ್ಯದರ್ಶಿ ಕೆ.ಕೆಂಪಲಿಂಗರಾಜು, ಖಜಾಂಚಿ ಎಸ್.ಪುರುಷೋತ್ತಮ್, ಅನಂತ್ ಉಪಸ್ಥಿತರಿದ್ದರು.

ಡಿ.ಕೆ.ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷರಾಗಿ 6 ವರ್ಷ ಪೂರೈಕೆ; ಮಾ.10ಕ್ಕೆ ಶಾಸಕರಿಗೆ ಔತಣಕೂಟ

ಬೆಂಗಳೂರು, ಮಾ.3(ಕೆಎಂಶಿ)– ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿ ಆರು ವರ್ಷ ಪೂರ್ಣಗೊಳಿಸುತ್ತಿರುವ ಹಿನ್ನೆಲೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾರ್ಚ್ 10ರಂದು ರಾತ್ರಿ ಪಕ್ಷದ ಶಾಸಕರಿಗೆ ಔತಣಕೂಟ ಏರ್ಪಡಿಸಿದ್ದಾರೆ.



2020ರ ಮಾರ್ಚ್ 11ರಂದು ದಿನೇಶ್ ಗುಂಡೂರಾವ್ ಅವರಿಂದ ರಾಜಾಧ್ಯಕ್ಷರಾಗಿ ಶಿವಕುಮಾರ್ ಅಧಿಕಾರ ವಹಿಸಿಕೊಂಡಿದ್ದರು.

ಮುಖ್ಯಮಂತ್ರಿ ಅಧಿಕಾರ ಹಂಚಿಕೆಗೊಂದಲ ಮುಂದುವರೆದಿರುವ ಬೆನ್ನಲ್ಲೇ ಶಿವಕುಮಾರ್ ಪಕ್ಷದ ವರಿಷ್ಠರು ಹಾಗೂ ಶಾಸಕರಿಗೆ ಈ ಔತಣಕೂಟದ ಮೂಲಕವೇ ಸಂದೇಶ ರವಾನೆ ಮಾಡಲು ಈ ಕಾರ್ಯಕ್ರಮ ಆಯೋಜಿಸಿದ್ದಾರೆ ಎಂದು ಹೇಳಲಾಗುತ್ತಿದೆ. ಔತಣಕೂಟಕ್ಕೆ ವಿಧಾನಸಭೆ, ಪರಿಷತ್ತು, ಲೋಕಸಭೆ ಹಾಗೂ ರಾಜ್ಯಸಭೆಯ ಪಕ್ಷದ ಎಲ್ಲಾ ಸದಸ್ಯರಿಗೂ ಆಹ್ವಾನ ಕಳುಹಿಸುವ ಕಾರ್ಯ ಆರಂಭಗೊಂಡಿದೆ.

ಶಿವಕುಮಾರ್ ಅವರೇ ಎಲ್ಲಾ ಸದಸ್ಯರನ್ನು ಸಂಪರ್ಕಿಸಿ ಔತಣಕೂಟಕ್ಕೆ ಆಹ್ವಾನ ನೀಡುತ್ತಿದ್ದಾರೆ. ಶಿವಕುಮಾರ್ ರಾಜ್ಯಾಧ್ಯಕ್ಷರಾಗಿ ಜವಾಬ್ದಾರಿ ವಹಿಸಿಕೊಂಡ ನಂತರ 2023 ರಲ್ಲಿ ನಡೆದ ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರಲು ಸಿದ್ದರಾಮಯ್ಯ ಜೊತೆಗೂಡಿ ಶ್ರಮಿಸಿದ್ದರು.

ಸಿದ್ದರಾಮಯ್ಯ ಅವರು ಅಧಿಕಾರ ವಹಿಸಿಕೊಳ್ಳುವುದಕ್ಕೂ ಮುನ್ನ ವರಿಷ್ಠರ ಜೊತೆ ಮಾತುಕತೆಯಂತೆ 2025ರ ನ.20ರಂದೇ ಮುಖ್ಯಮಂತ್ರಿ ಸ್ಥಾನವನ್ನು ತೆರವುಗೊಳಿಸಿ, ಶಿವಕುಮಾರ್ ಅವರಿಗೆ ಅವಕಾಶ ಮಾಡಿಕೊಡಬೇಕಿತ್ತು.

ವರಿಷ್ಠರ ಮುಂದೆ ಮಾತುಕತೆ ವಿವರವನ್ನು ಸ್ವತಃ ಶಿವಕುಮಾರ್ ಅವರೇ ಬಹಿರಂಗ ಪಡಿಸಿದ್ದರು. ಇದುವರೆಗೂ ಅಧಿಕಾರದ ಹಸ್ತಾಂತರ ಗೊಂದಲ ಮುಂದುವರೆದಿದೆ ಮತ್ತು ತೆರೆಮರೆಯಲ್ಲಿ ಶಿವಕುಮಾರ್ ಅಧಿಕಾರ ಪಡೆಯಲು ಎಲ್ಲಾ ಕಸರತ್ತು ನಡೆಸಿದ್ದಾರೆ.

ಈ ಕಸರತ್ತಿನ ನಡುವೆಯೇ ಕೆಪಿಸಿಸಿ ಅಧ್ಯಕ್ಷರಾಗಿ ಆರು ವರ್ಷಗಳು ತುಂಬಿರುವುದನ್ನೇ ಮುಂದಿಟ್ಟುಕೊಂಡು ಶಾಸಕರಿಗೆ ಔತಣಕೂಟ ಏರ್ಪಡಿಸಿ, ಪಕ್ಷಕ್ಕೆ ಸಂದೇಶ ನೀಡಲು ಹೊರಟ್ಟಿದ್ದಾರೆ ಎನ್ನಲಾಗಿದೆ.

ನಗರದ ಪಂಚತಾರಾ ಹೋಟೆಲ್‌ನಲ್ಲಿ ನಡೆಯುವ ಔತಣಕೂಟವನ್ನು ಅತ್ಯಂತ ಯಶಸ್ವಿಗೊಳಿಸುವ ಉದ್ದೇಶದಿಂದ ಶಿವಕುಮಾರ್ ಸಹೋದರ ಸುರೇಶ್ ಮತ್ತು ರಾಜ್ಯಸಭಾ ಸದಸ್ಯ ಜಿ.ಸಿ.ಚಂದ್ರಶೇಖರ್ ಇದರ ಪೂರ್ಣ ಉಸ್ತುವಾರಿ ವಹಿಸಿಕೊಂಡಿದ್ದಾರೆ.

ರೇಷ್ಮೆ ತ್ಯಾಜ್ಯದಲ್ಲಿ ಉಪ ಉತ್ಪನ್ನ ತಯಾರಿಕೆಗೆ ಸಂಶೋಧನೆ ನಡೆದಿದೆ

ಸಿಎಫ್‌ಟಿಆರ್‌ಐ ನಿರ್ದೇಶಕ ಡಾ. ಗಿರಿಧರ್ ಪರ್ವತಂ ವಿವರಣೆ

ಮೈಸೂರು, ಮಾ.3(ಎಂಟಿವೈ)– ರೇಷ್ಮೆ ನೂಲು ಉತ್ಪಾದಿಸಿದ ನಂತರ ಉಳಿಯುವ ಗೂಡಿನ ತ್ಯಾಜ್ಯದಲ್ಲಿ ಎರಡನೇ ದರ್ಜೆಯ ಉತ್ಪನ್ನಗಳನ್ನು ತಯಾರಿಸುವ ನಿಟ್ಟಿನಲ್ಲಿ ಸಂಶೋಧನೆ ನಡೆಯುತ್ತಿದೆ ಎಂದು ಸಿಎಫ್‌ಟಿಆರ್‌ಐ ನಿರ್ದೇಶಕ ಡಾ.ಗಿರಿಧರ್ ಪರ್ವತಂ ತಿಳಿಸಿದ್ದಾರೆ.

ರೇಷ್ಮೆ ಕೃಷಿ ಮೇಳದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಣ್ಣ ಪ್ರಮಾಣದಲ್ಲಿ ರೇಷ್ಮೆ ಗೂಡಿನ ತ್ಯಾಜ್ಯವನ್ನು ಮೀನಿನ ಆಹಾರಕ್ಕೆ ಉಪಯೋಗಿಸಲಾಗುತ್ತಿದೆ. ರೇಷ್ಮೆಗೂಡಿನಲ್ಲಿ ಶೇ.55 ಪ್ರೋಟೀನ್, ಶೇ.35 ಲಿಕ್ವಿಡ್, ಕಾರ್ಬೋಹೈಡ್ರೇಡ್ ಖನಿಜಾಂಶ ಇರುವುದರಿಂದ ಸೆಕೆಂಡರಿ ಪ್ರಾಡಕ್ಟ್ ಉತ್ಪಾದಿಸಲು ಸಿಎಫ್‌ಟಿಆರ್‌ಐ, ಸಿಎಸ್‌ಐಆರ್‌ಟಿ ಒಡಂಬಡಿಕೆ ಮಾಡಿಕೊಂಡು ಸಂಶೋಧನೆಯಲ್ಲಿ ತೊಡಗಿವೆ ಎಂದರು.

ಸಿಲ್ಕ್ ತೆಗೆದು ಬೀಸಾಕುವ ಗೂಡುಗಳನ್ನು ಬಳಸಿ ಬೇರೆ ಬೇರೆ ಉತ್ಪನ್ನ ತಯಾರಿಕೆ ಮಾಡಬಹುದಾಗಿದೆ. ಅವುಗಳನ್ನು ಪುಡಿ ಮಾಡಿ ಪೌಲ್ಟ್ರಿ ಫಾರಂಗೆ ಫೀಡ್ ಮಾಡಲು ನೀಡಲಾಗುತ್ತದೆ. ಈ ಆಹಾರವನ್ನು ಕೋಳಿಗಳಿಗೆ ನೀಡುವುದರಿಂದ ಮೊಟ್ಟೆ ಹೆಚ್ಚು ಉತ್ಪಾದನೆಯಾಗುತ್ತದೆ. ಅಲ್ಲದೆ, ಕೋಳಿ ಬೆಳವಣಿಗೆಯೂ ಉತ್ತಮವಾಗಿರುತ್ತದೆ ಎಂದು ತಿಳಿಸಿದರು.

ಕೊರತೆ ನೀಗಿಸಬಹುದು: ಭಾರತವು ಕೊರತೆ ಇರುವ ಪ್ರಮಾಣದ ರೇಷ್ಮೆಯನ್ನು ಹೊರದೇಶಗಳಿಂದ ಆಮದು ಮಾಡಿಕೊಳ್ಳುವುದನ್ನು ತಪ್ಪಿಸಲು, ರೇಷ್ಮೆ ಕೃಷಿಕರು ನೂತನ ತಂತ್ರಜ್ಞಾನ ಅಳವಡಿಕೆ ಮಾಡಿಕೊಂಡು ಉತ್ಪಾದನೆ ಹೆಚ್ಚಿಸಬೇಕು. ರೇಷ್ಮೆ ಸಮ್ಮೇಳನದಲ್ಲಿ ತಾಂತ್ರಿಕ ಅಳವಡಿಕೆ, ಜ್ಞಾನ ವರ್ಗಾವಣೆ, ಶಿಕ್ಷಣ, ನಾವಿನ್ಯತೆ ಪ್ರದರ್ಶನ, ನೆಟ್ವರ್ಕಿಂಗ್, ಆರ್ಥಿಕ ಸಬಲೀಕರಣ ಉದ್ದೇಶ ಸಾರುವ ಕಾರ್ಯಕ್ರಮ ರೂಪಿಸಿದ್ದು, ಇಲ್ಲಿ ತಜ್ಞರು ನೀಡಿದ ಸಲಹೆಯನ್ನು ರೇಷ್ಮೆ ಕೃಷಿಯಲ್ಲಿ ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.



ಮೈಸೂರಿನ ಉದ್ಬೂರು ಬಳಿ ಆಯೋಜಿಸಿದ್ದ ರೇಷ್ಮೆ ಕೃಷಿ ಪ್ರದರ್ಶನ ಮೇಳದಲ್ಲಿ ಜಾರ್ಖಂಡ್ ಸಿಲ್ಕ್ ಸೀರೆ ಖರೀದಿಸಲು ಮುಗಿ ಬಿದ್ದ ಜನ.

ವಿಶ್ವದಲ್ಲಿ ಚೀನಾ ನಂತರ ಭಾರತ ಹೆಚ್ಚು ರೇಷ್ಮೆ ಉತ್ಪಾಧನಾ ರಾಷ್ಟ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ನಮ್ಮಲ್ಲಿ ಬೇಡಿಕೆ ಹೆಚ್ಚಾಗಿದ್ದರೂ ಉತ್ಪಾದನೆ ಸಾಕಾಗುತ್ತಿಲ್ಲ. ಹಾಗಾಗಿ ಕೊರತೆ ಇರುವ ಶೇ.15ರಷ್ಟು ರೇಷ್ಮೆಯನ್ನು ಉಜ್ಬೇಕಿಸ್ತಾನ್, ಥೈಲ್ಯಾಂಡ್, ಮಲೇಷಿಯಾದಿಂದ ಆಮದು ಮಾಡಿಕೊಳ್ಳುತ್ತಿದ್ದೇವೆ. ಈ ಕೊರತೆಯನ್ನು ನಾವೇ ಉತ್ಪಾದನೆ ಮಾಡಿಕೊಂಡರೆ ರಫ್ತು ಮಾಡುವುದರಲ್ಲೂ ಪ್ರಾಬಲ್ಯ ಮೆರೆಯಬಹುದು ಎಂದು ಅಭಿಪ್ರಾಯಪಟ್ಟರು.

ರೇಷ್ಮೆ ಇಲಾಖೆಯ ಹೆಚ್ಚುವರಿ ನಿರ್ದೇಶಕ ವೈ.ಟಿ.ತಿಮ್ಮಯ್ಯ ಮಾತನಾಡಿ, ರೇಷ್ಮೆ ಕೃಷಿಕರ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಇಲಾಖೆ ಪ್ರಯತ್ನಿಸುತ್ತಿದೆ. ರಾಷ್ಟ್ರದ ಉತ್ಪಾದನೆಯಲ್ಲಿ ಕರ್ನಾಟಕ ಶೇ.43ರಷ್ಟು ರೇಷ್ಮೆ ಉತ್ಪಾದಿಸಿ ದೇಶದಲ್ಲಿಯೇ ಮುಂಚೂಣಿಯಲ್ಲಿದೆ. ಕೊರೊನಾ ಸಂದರ್ಭದಲ್ಲಿ ನಮ್ಮ ಇಲಾಖೆ ನೌಕರರು ಅವಿರತವಾಗಿ ಕೆಲಸ ಮಾಡಿ, ರೇಷ್ಮೆ ಬೆಳೆಗಾರರ ಹಿತ ಕಾಪಾಡಿದ್ದಾರೆ. ಇಲಾಖೆ ಸಾಕಷ್ಟು ಕಾರ್ಯಕ್ರಮ ಹಮ್ಮಿಕೊಂಡು ಪ್ರತಿ ವರ್ಷ 200 ಕೋಟಿ ರೂ.ಗಳಷ್ಟು ಸಹಾಯಧನ ವಿತರಣೆ ಮಾಡಲಾಗಿದೆ. ಸಮಗ್ರ ಭೂ ಯೋಜನೆಯಡಿ 430 ಕೋಟಿ ರೂ ನೀಡಲು ವರದಿ ಕೊಡಲಾಗಿದೆ. ಇದಕ್ಕೆ ಅನುದಾನ ನೀಡಲಿ ಎಂದು ಮನವಿ ಮಾಡಿದರು.

ರೇಷ್ಮೆ ಕೃಷಿ ಸೂಕ್ಷ್ಮವಾದ ಕೃಷಿಯಾಗಿದ್ದು, ಇಲಾಖೆಯಲ್ಲಿ ಸಿಬ್ಬಂದಿ ಕೊರತೆ ಇದೆ. ಈ ಹಿಂದೆ 4299 ಮಂಜೂರಾತಿ ಹುದ್ದೆ ಸೇರಿ 6–7 ಸಾವಿರ ಮಂದಿ ಕೆಲಸ ಮಾಡುತ್ತಿದ್ದರು. ಇಂದು ಕೇವಲ 1200 ಸಿಬ್ಬಂದಿ ಇದ್ದೇವೆ. ಅದರಲ್ಲಿ 650 ಮಂದಿ ಮಾತ್ರ ತಾಂತ್ರಿಕ ಸಿಬ್ಬಂದಿ ಇದ್ದಾರೆ. ಇವರನ್ನೇ ಇಟ್ಟುಕೊಂಡು ಇಲಾಖೆಯನ್ನು ಮುಂಚೂಣಿಯಲ್ಲಿ ಕೊಂಡೊಯ್ಯುವ ಕೆಲಸ ಮಾಡಲಾಗುತ್ತಿದೆ. ಉತ್ಪಾದನೆಯಲ್ಲೂ ಮುಂಚೂಣಿಯಲ್ಲಿ ಕೊಂಡೊಯ್ಯುವಂತೆ ಶ್ರಮಿಸಿದ್ದಾರೆ ಎಂದರು.

ಇದರಲ್ಲಿ ರೀಲರ್ಸ್ ಕೊಡುಗೆ ಮಹತ್ವದ್ದಾಗಿದೆ. ಉತ್ಪಾದನಾ ವೆಚ್ಚ ಹೆಚ್ಚಾಗುತ್ತಿರುವುದರಿಂದ ಚಾಕಿ ಮನೆ ಈಗ ನೀಡುತ್ತಿರುವ ಸಹಾಯಧನವನ್ನು 6 ಲಕ್ಷ ರೂ.ನಿಂದ 10 ಲಕ್ಷ ರೂಗೆ ಹೆಚ್ಚಿಸಬೇಕು. ಸಲಕರಣೆಗಳಿಗೆ 75 ಸಾವಿರ ಯುನಿಟ್ ಕಾಸ್ಟ್ ಇದ್ದು, ಇದರಿಂದ ರೈತರಿಗೆ ತೊಂದರೆಯಾಗುತ್ತಿದೆ ಎಂದು ರೇಷ್ಮೆ ಕೃಷಿಕರು ಅಳಲು ತೋಡಿಕೊಂಡಿದ್ದಾರೆ. ಇದರಿಂದ ಯುನಿಟ್ ಕಾಸ್ಟ್ ಅನ್ನು 75 ಸಾವಿರದಿಂದ 2.50 ಲಕ್ಷಕ್ಕೆ ಹೆಚ್ಚಿಸಬೇಕು. ಉತ್ತರ ಕರ್ನಾಟಕದಲ್ಲಿ ಹೆಚ್ಚು ಜನ ರೇಷ್ಮೆ ಬೆಳೆಯಲು ಬರುತ್ತಿದ್ದಾರೆ. ಅಲ್ಲಿ ಪ್ರಾದೇಶಿಕ ಅಸಮತೋಲನೆ ಹೋಗಲಾಡಿಸಲು ಕ್ರಮ ಕೈಗೊಳ್ಳಬೇಕು. ಚಿತ್ರದುರ್ಗ, ಹಾವೇರಿಗೆ ರೀಜನಲ್ ಸಿರಿಕಲ್ಚರ್ ಸೆಂಟರ್ ವರ್ಗಾವಣೆ ಮಾಡಿರುವುದು ಶ್ಲಾಘನೀಯ ಎಂದು ತಿಳಿಸಿದರು.

ಶುಭಾಶಯ



ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗ ಘಟಕದ ಅಧ್ಯಕ್ಷರೂ ಆದ ಶಿಕ್ಷಣ ಸಚಿವ ಎಸ್.ಮಧು ಬಂಗಾರಪ್ಪನವರ ಬೆಂಗಳೂರು ನಿವಾಸದಲ್ಲಿ ಅವರ ಹುಟ್ಟುಹಬ್ಬ ಆಚರಿಸಲಾಯಿತು. ಈ ವೇಳೆ ಘಟಕದ ಕಾರ್ಯದರ್ಶಿ ನಿಶ್ಚಿತ್, ಘಟಕದ ಮೈಸೂರು ನಗರಾಧ್ಯಕ್ಷ ಎನ್.ಆರ್.ನಾಗೇಶ್, ರಾಜ್ಯ ಸಂಯೋಜಕ ಶ್ರಮಂತ್, ಉಪಾಧ್ಯಕ್ಷ ವಿನೋದ್ ರಾಜ್, ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತಿ ಹೇಮಲತಾ, ಸೋಮು, ಕಾರ್ಯದರ್ಶಿ ಆದಿಕೇಶವ ಮತ್ತಿತರರು ಮಧು ಬಂಗಾರಪ್ಪನವರಿಗೆ ನಂಜನಗೂಡಿನ ರಸ ಬಾಳೆ ನೀಡಿ ಶುಭಾಶಯ ಕೋರಿದರು.


ಅಧ್ಯಕ್ಷರು ಮೈಸೂರು ನಗರ ಬಿ.ಜೆ.ಪಿ ಯುವ ಮೋರ್ಚಾ
ಆರ್ ರಾಕೇಶ್ ಗೌಡ
ರವರಿಗೆ
ಹುಟ್ಟು ಹಬ್ಬದ ಶುಭಾಶಯಗಳು
ಕನ್ನೇಗೌಡ ಟೈಗರ್ಸ್
ಕೆ.ಜಿ.ಕೊಪ್ಪಲ್, ಜಯನಗರ, ಮೈಸೂರು
ಶ್ರೀಯುತ
ಆರ್. ರಾಕೇಶ್ ಗೌಡ
ಅಧ್ಯಕ್ಷರು ಮೈಸೂರು ನಗರ ಬಿ.ಜೆ.ಪಿ ಯುವ ಮೋರ್ಚಾ